ಸಂಪುಟ: 05 ಸಂಚಿಕೆ: 256 ಪುಟಗಳು: 08 ಭಾನುವಾರ 30 ನವೆಂಬರ್ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833

₹5

**ಮುಂಜಾನೆ ಮಾತು**

ಜಗತ್ತು ಬದಲಾಗಬೇಕು ಎನ್ನುವವರು ಮೊದಲು ತಮ್ಮಿಂದಲೇ ಬದಲಾವಣೆಯಾಗಬೇಕು ಎಂಬುದನ್ನು ಅರಿತುಕೊಳ್ಳಬೇಕು.


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ಕೇಂದ್ರದ ಮೇಲೆ ಒತ್ತಡ ಹಾಕಲು ದೆಹಲಿಗೆ ಹೋಗುತ್ತೇವೆ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

'ಮೆಕ್ಕೆಜೋಳ, ಕಬ್ಬು ದರ ನಿಗದಿ ಮತ್ತು ನೀರಾವರಿ ಯೋಜನೆ ಕುರಿತು ಸಂಸದರ ಜೊತೆ ಚರ್ಚಿಸಿ, ಈ ವಿಚಾರವಾಗಿ ಕೇಂದ್ರದ ಮೇಲೆ ಒತ್ತಡ ಹಾಕಲು ದೆಹಲಿಗೆ ಹೋಗುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಮುಖ್ಯಮಂತ್ರಿ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೆಕ್ಕೆಜೋಳ, ಕಬ್ಬು ದರ ನಿಗದಿ ಹಾಗೂ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದಂತೆ ಸಂಸತ್ ಅಧಿವೇಶನದಲ್ಲಿ ಸಂಸದರು ಧ್ವನಿ ಎತ್ತಬೇಕಿದೆ. ಈ ವಿಚಾರವಾಗಿ ಸಂಸದರ ಜೊತೆ ನಾವು ಚರ್ಚೆ ಮಾಡಬೇಕಿದೆ' ಎಂದರು. 'ಮೆಕ್ಕೆಜೋಳ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಸಹಕಾರ ನೀಡುತ್ತಿಲ್ಲ. ಈ ವಿಚಾರದಲ್ಲಿಯೂ ಕೇಂದ್ರದ ನೆರವು ಪಡೆಯುವುದು ರಾಜ್ಯದ ಹಕ್ಕು. ಮುಖ್ಯಮಂತ್ರಿಯವರು ಪ್ರಧಾನ ಮಂತ್ರಿ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ನಾವೆಲ್ಲರೂ ಒಟ್ಟಾಗಿ ರಾಜ್ಯದ ಹಿತ ಕಾಪಾಡಬೇಕಿದೆ. ನಿಯೋಗದ ಜೊತೆ ಬರುವಂತೆ ಕೇಂದ್ರ ಸಚಿವರಿಗೂ ತಿಳಿಸಿದ್ದೇವೆ' ಎಂದರು.

'ಮೇಕೆದಾಟು ಯೋಜನೆ ವಿಚಾರದಲ್ಲಿ ಈಗ ಚೆಂಡು ಕೇಂದ್ರ ಸರ್ಕಾರದ ಜಲ ಆಯೋಗದ ಅಂಗಳದಲ್ಲಿದೆ. ನಾವು ಇದಕ್ಕೆ ಪರಿಷ್ಕೃತ ಡಿಪಿಆರ್ ಸಲ್ಲಿಸುತ್ತೇವೆ. ಜೊತೆಗೆ, ಇತರೆ ನೀರಾವರಿ ಯೋಜನೆಗಳ ಬಗ್ಗೆಯೂ ಚರ್ಚೆ ಮಾಡಬೇಕಿದೆ' ಎಂದರು.

## 3 ತಿಂಗಳಲ್ಲಿ ವಿಎಒ, ಆರ್‌ಐಗಳಿಗೆ ಲ್ಯಾಪ್‌ಟಾಪ್: ಕಂದಾಯ ಸಚಿವ

• ಉದಯವಾಹಿನಿ, ಬೆಂಗಳೂರು

''ಇಲಾಖೆಯ ಅಧಿಕಾರಿ, ಸಿಬ್ಬಂದಿ 'ಇ-ಆಫೀಸ್' ಮೂಲಕವೇ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಮುಂದಿನ ಮೂರು ತಿಂಗಳಲ್ಲಿ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳು (ವಿಎಒ) ಮತ್ತು ಕಂದಾಯ ನಿರೀಕ್ಷಕರಿಗೆ (ಆರ್‌ಐ) ಲ್ಯಾಪ್‌ಟಾಪ್ ನೀಡಲಾಗುವುದು. ಆ ಮೂಲಕ, ಎಲ್ಲಾ ಕೆಲಸಗಳನ್ನು ಶೇ 100ರಷ್ಟು ಆನ್‌ಲೈನ್ ವ್ಯಾಪ್ತಿಗೆ ತರಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು. ಜಿಲ್ಲಾಧಿಕಾರಿಗಳ ಜೊತೆ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಗದ ವ್ಯವಹಾರಕ್ಕೆ ಇತಿಶ್ರೀ ಹಾಡಬೇಕೆಂಬ ಏಕೈಕ ಕಾರಣಕ್ಕೆ ಸಚಿವ ಸಂಪುಟದ ಅನುಮತಿಯೊಂದಿಗೆ ಈಗಾಗಲೇ 5 ಸಾವಿರ ವಿಎಒಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ' ಎಂದರು. 'ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಎರಡೂವರೆ ವರ್ಷಗಳ ಅವಧಿಯಲ್ಲಿ ಪೋಡಿ ದುರಸ್ತಿ, ಪೌತಿಖಾತೆ, ಭೂ ಸುರಕ್ಷಾ ಅಭಿಯಾನ ಮುಂತಾದ ಸೇವೆಗಳನ್ನು ಜನಸಾಮಾನ್ಯರ ಮನೆ ಬಾಗಿಲಿಗೆ ತಲುಪಿಸಿದ್ದೇವೆ' ಎಂದರು.

## ಸಿದ್ದರಾಮಯ್ಯ ಕೊಟ್ಟಮಾತಿನಂತೆ ನಡೆದುಕೊಳ್ಳಬೇಕೆಂದು ಹೇಳಿಲ್ಲ

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು ಎಂದು ನಾನು ಹೇಳಿಕೆ ನೀಡಿಲ್ಲ. ನಾನು ಹೇಳಿದ್ದು ಬೇರೆ ರೀತಿ. ಅದನ್ನು ನೀವು (ಮಾಧ್ಯಮದವರು) ತಿರುಚಿದ್ದೀರಿ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ದೂಷಿಸಿದರು.

'ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರು ಎಲ್ಲಾ ಗೊಂದಲಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿದ್ದಾರೆ. ಸ್ಪಷ್ಟನೆಯನ್ನೂ ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನದ್ದೇನಾದರೂ ಇದ್ದರೇ ಅದನ್ನು ವರಿಷ್ಠರು ಬಗೆಹರಿಸುತ್ತಾರೆ' ಎಂದರು. ಸೋನಿಯಾಗಾಂಧಿ ತ್ಯಾಗದ ಬಗ್ಗೆ ಮುಖ್ಯಮಂತ್ರಿ ಸಮ್ಮುಖದಲ್ಲೇ ಶಿವಕುಮಾರ್ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಡಿಸಿಎಂ ಅವರು ನೆಹರೂ ಕುಟುಂಬದ ತ್ಯಾಗ, ಬಲಿದಾನದ ಬಗ್ಗೆ ಯಾವಾಗಲೂ ಹೇಳುತ್ತಿರುತ್ತಾರೆ. ಈ ಸಂದರ್ಭದಲ್ಲಿ ಮಾತ್ರವಲ್ಲ, ಸೋನಿಯಾ ಗಾಂಧಿಯವರ ತ್ಯಾಗದ ಬಗ್ಗೆ ಹೃದಯದಿಂದ ತಿಳಿಸುವ ಕೆಲಸವನ್ನು ಕಾರ್ಯಕರ್ತರಿಗೆ, ಮುಖಂಡರಿಗೆ ಈ ಹಿಂದೆಯೂ ಮಾಡಿದ್ದಾರೆ. ಇದೇನು ಹೊಸದಲ್ಲ' ಎಂದು ಹೇಳಿದರು.

## ಕೆಎಸ್‌ಸಿಎ: ಶಾಂತಕುಮಾರ್ ಅರ್ಜಿ ಪುರಸ್ಕೃತ: ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

'ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾದ ಕೆ.ಎನ್.ಶಾಂತಕುಮಾರ್ ಅವರನ್ನು ಸಂಘದ ಚುನಾವಣೆಯಲ್ಲಿ ಮಾನ್ಯ ಅಭ್ಯರ್ಥಿ ಎಂದು ಘೋಷಿಸಿ' ಎಂದು ಹೈಕೋರ್ಟ್, ಚುನಾವಣಾ ಅಧಿಕಾರಿಗೆ ನಿರ್ದೇಶಿಸಿದೆ.

'ಕೆಎಸ್‌ಸಿಎ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಯ ಕಣದಲ್ಲಿ ನನ್ನನ್ನೂ ಅಭ್ಯರ್ಥಿಯನ್ನಾಗಿ ಪರಿಗಣಿಸಲು ನಿರ್ದೇಶಿಸಬೇಕು' ಎಂದು ಕೋರಿ ಕೆ.ಎನ್.ಶಾಂತಕುಮಾರ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ಈ ಕುರಿತಂತೆ ಆದೇಶಿಸಿದೆ.

'ಚುನಾವಣೆಯನ್ನು ಈಗಾಗಲೇ ನಿಗದಿಪಡಿಸಿರುವ ಕ್ಯಾಲೆಂಡರ್ ಅನುಸಾರವೇ ನಡೆಸಬೇಕು' ಎಂದು ನ್ಯಾಯಪೀಠ ಆದೇಶಿಸಿದೆ. ಡಿಸೆಂಬರ್ 7ರಂದು ಚುನಾವಣೆ ನಡೆಯಲಿದೆ. 'ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುತ್ತೇನೆ. ನಮ್ಮ ತಂಡವು ಚುನಾವಣೆಗೆ ಬೇಕಿರುವ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಕಾರ್ಯೋನ್ಮುಖವಾಗುತ್ತಿದೆ' ಎಂದು ಕೆ.ಎನ್. ಶಾಂತಕುಮಾರ್ ಹೇಳಿದ್ದಾರೆ.

**ಪವರ್ ಫೈಟ್ ಮಧ್ಯೆ ಹೈಕಮಾಂಡ್ ಅಣತಿಯಂತೆ ಬ್ರೇಕ್ ಫಾಸ್ಟ್ ಮೀಟಿಂಗ್‌ನಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಮುಖಿಮಾಖಿಯಾಗಿ, ಮಾತುಕತೆ ನಡೆಸಿದರು. ಕಳೆದ ಒಂದು ವಾರದಿಂದ ಅಧಿಕಾರ ಹಂಚಿಕೆಯ ಗದ್ದಲ, ಬಣ ರಾಜಕೀಯ, ಉಭಯ ನಾಯಕರ ಮುಸುಕಿನ ಗುದ್ದಾಟದ ಮಧ್ಯೆ ಇಂದು ಉಭಯ ನಾಯಕರು ಒಟ್ಟಿಗೆ ಉಪಹಾರ ಸಭೆ ನಡೆಸಿರುವುದು ಸಾಕಷ್ಟು ಕುತೂಹಲ ಕೆರಳಿಸಿದೆ. ಕಾವೇರಿ ನಿವಾಸದಲ್ಲಿ ಉಭಯ ನಾಯಕರು ಸುಮಾರು 40 ನಿಮಿಷಗಳ ಕಾಲ ಉಪಹಾರ ಸಭೆ ನಡೆಸಿದರು. ಆ ಮೂಲಕ ಇಬ್ಬರ ಮಧ್ಯೆ ಉಂಟಾಗಿದ್ದ ರಾಜಕೀಯ ತಿಕ್ಕಾಟವನ್ನು ತಣಿಸುವ ಪ್ರಯತ್ನ ಮಾಡಿದರು.**

# ರೋಚಕ ಘಟ್ಟ ಕೈ ಪಟ್ಟದ ಆಟ

ಮಧ್ಯೆ ಸಿಎಂ-ಡಿಸಿಎಂ ಬ್ರೇಕ್ ಫಾಸ್ಟ್ ಮೀಟಿಂಗ್

## ಉಭಯ ನಾಯಕರಿಂದ ಒಗ್ಗಟ್ಟಿನ ಸಂದೇಶ



• ಉದಯವಾಹಿನಿ, ಬೆಂಗಳೂರು

ದೆಹಲಿಯಲ್ಲಿ ರಾಜ್ಯದ ಪವರ್ ಫೈಟ್‌ಗೆ ತೆರೆ ಎಳೆಯಲು ಕಾಂಗ್ರೆಸ್ ವರಿಷ್ಠರು ಮಹತ್ವದ ಸಭೆ ನಡೆಸಲು ತೀರ್ಮಾನಿಸಿದ್ದಾರೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿ ಗದ್ದುಗೆ ಗುದ್ದಾಟ ಸಂಬಂಧ ಅಂತಿಮ ತೀರ್ಮಾನ ಕೈಗೊಳ್ಳಲು ಮುಂದಾಗಿದೆ. ಈ ಮಧ್ಯೆ, ಉಭಯ ನಾಯಕರು ಪರಸ್ಪರ ಪೋಸ್ಟ್ ಮೂಲಕ 'ವರ್ಡ್ ವಾರ್' ನಡೆಸಿದ್ದು, ಹೈ ಕಮಾಂಡ್ ಅನ್ನು ತೀವ್ರ ಮುಜುಗರಕ್ಕೆ ಸಿಲುಕಿಸಿತ್ತು. ಇಬ್ಬರು ನಾಯಕರು ಬಹಿರಂಗವಾಗಿ ಪೋಸ್ಟ್ ವಾರ್ ನಡೆಸಿರುವುದರ ಬಗ್ಗೆ ಹೈ ಕಮಾಂಡ್ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು.

1 ಜಂಟಿ ಸುದ್ದಿಗೋಷ್ಠಿ ನಡೆಸಿ, ತಮ್ಮ ನಡುವೆ ಯಾವುದೇ ಮನಸ್ತಾಪವಿಲ್ಲ ಎಂದು ಘೋಷಿಸಿದ ಸಿಎಂ ಮತ್ತು ಡಿಸಿಎಂ

2 "ಹೈಕಮಾಂಡ್ ತೀರ್ಮಾನವೇ ಅಂತಿಮ" ಎಂಬ ನಿಲುವನ್ನು ಪುನರುಚ್ಚರಿಸಿದ ಇಬ್ಬರೂ ನಾಯಕರು

3 ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಸೂಚನೆಯ ಮೇರೆಗೆ ಈ ಉಪಾಹಾರ ಕೂಟ ಎಂದ ಸಿಎಂ

ಹೀಗಾಗಿ ದೆಹಲಿಗೆ ಬರುವ ಮುನ್ನ ಉಭಯ ನಾಯಕರು ತಮ್ಮ ಭಿನ್ನರಾಗ ಮರೆತು ಒಗ್ಗಟ್ಟು ಪ್ರದರ್ಶನ ಮಾಡಬೇಕು ಎಂಬುದು ಹೈ ಕಮಾಂಡ್ ಒತ್ತಾಸೆಯಾಗಿದೆ. ಹೀಗಾಗಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ಕರೆ ಮಾಡಿದ ಹೈಕಮಾಂಡ್ ಇಬ್ಬರು ಒಟ್ಟಿಗೆ ಬ್ರೇಕ್ ಫಾಸ್ಟ್ ಮೀಟಿಂಗ್ ಮಾಡಿ ಪರಸ್ಪರ ಚರ್ಚೆ ನಡೆಸಲು ಸೂಚಿಸಿತು. ಅದರಂತೆ ಕಾವೇರಿ ನಿವಾಸದಲ್ಲಿ ಉಭಯ ನಾಯಕರು ಬ್ರೇಕ್ ಫಾಸ್ಟ್ ಸಭೆ ನಡೆಸಿದರು. ಪವರ್ ಫೈಟ್ ಮಧ್ಯೆ ಉಭಯ ನಾಯಕರ ಮಧ್ಯೆ ಏನು ಮಾತುಕತೆ ನಡೆಯಿತು ಎಂಬುದು ಸಾಕಷ್ಟು ಕುತೂಹಲ ಕೆರಳಿಸಿದೆ. ಚರ್ಚೆ ವೇಳೆ ಉಭಯ ನಾಯಕರು ಬಹಿರಂಗವಾಗಿ ತಿಕ್ಕಾಟ ನಡೆಸುವುದು ಬೇಡ ಎಂಬ ಬಗ್ಗೆ ಪರಸ್ಪರ ಒಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಹೈಕಮಾಂಡ್ ಏನು ತೀರ್ಮಾನ ಕೈಗೊಳ್ಳುತ್ತೆ ಅದಕ್ಕೆ ಬದ್ಧರಾಗಿರೋಣ.

ಹೀಗಾಗಿ ಯಾವುದೇ ಹೇಳಿಕೆ, ಬಣ ರಾಜಕೀಯ ಮಾಡುವುದು ಬೇಡ ಎಂಬ ಬಗ್ಗೆ ಉಭಯ ನಾಯಕರು ಪರಸ್ಪರ ಒಪ್ಪಿಕೊಂಡಿದ್ದಾರೆ ಎಂದು ಹೇಳಲಾಗಿದೆ. ಹೈ ಕಮಾಂಡ್ ಅಂತಿಮ ನಿರ್ಧಾರದಂತೆ ನಡೆದುಕೊಳ್ಳಬೇಕು. ಏನೇ ತೀರ್ಮಾನ ಕೈಗೊಂಡರೂ ಅದನ್ನು ಪಾಲಿಸಬೇಕು. ಹೈ ಕಮಾಂಡ್ ತೀರ್ಮಾನವನ್ನು ಸೌಹಾರ್ದಯುತವಾಗಿ ಒಪ್ಪಿಕೊಳ್ಳುವ ಬಗ್ಗೆ ಉಭಯ ನಾಯಕರ ನಡುವೆ ಚರ್ಚೆ ನಡೆದಿದೆ ಎನ್ನಲಾಗಿದೆ. ಉಪಹಾರ ಕೂಟದ ಬಳಿಕ ಇಬ್ಬರೂ ನಾಯಕರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ. 'ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರ ಜೊತೆ ಬೆಳಗ್ಗಿನ ಉಪಹಾರ ಸೇವಿಸುತ್ತಾ, ಕೆಲಹೊತ್ತು ಮಾತುಕತೆ ನಡೆಸಿದೆ' ಎಂದು ಸಿಎಂ ಸಿದ್ದರಾಮಯ್ಯ ಪೋಸ್ಟ್ ಮಾಡಿದ್ದಾರೆ. ಹಾಗೆಯೇ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಕೂಡ 'ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರನ್ನು ಇಂದು ಅವರ ಕಾವೇರಿ ನಿವಾಸದಲ್ಲಿ ಭೇಟಿಯಾಗಿ ಉಪಾಹಾರ ಸಭೆ ನಡೆಸಲಾಯಿತು' ಎಂದು ಬರೆದುಕೊಂಡಿದ್ದಾರೆ.

**ತಮ್ಮ ನಿಲುವಿಗೆ ಬದ್ಧವಾಗಿ ಉಳಿದ ಸಿದ್ದರಾಮಯ್ಯ:** ಹೈಕಮಾಂಡ್ ನಮ್ಮಿಬ್ಬರನ್ನೂ ದೆಹಲಿಗೆ ಬರುವಂತೆ ಕರೆದಿದೆ. ಆದ್ದರಿಂದ ನಾನು ಡಿ ಕೆ ಶಿವಕುಮಾರ್ ಅವರನ್ನು ಉಪಾಹಾರಕ್ಕೆ ಆಹ್ವಾನಿಸಿದ್ದೇನೆ. ಈ ವೇಳೆ ಮಾತನಾಡುತ್ತೇವೆ. ನಾನು ಮೊದಲೇ ಹೇಳಿದಂತೆ ಹೈಕಮಾಂಡ್ ಏನು ಹೇಳುತ್ತದೋ ಅದನ್ನು ನಾನು ಸ್ವೀಕರಿಸುತ್ತೇನೆ. ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಅವರು ಕೂಡ ಹೈಕಮಾಂಡ್ ಏನು ಹೇಳುತ್ತದೋ ಅದನ್ನು ನಾವು ಅನುಸರಿಸುತ್ತೇವೆ ಎಂದು ಹೇಳಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದರು. ಯಾವುದೇ ನಿರ್ಧಾರವನ್ನು ತೆಗೆದುಕೊಂಡರು ನಾವು ಅದಕ್ಕೆ ಬದ್ಧ ಎಂದು ಅವರು ಹೇಳಿದ್ದಾರೆ.

ನ.30 ರಂದು ನಡೆಯಲಿರುವ ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೂ ಮುನ್ನ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯ ನಂತರ, ಕರ್ನಾಟಕ ಕಾಂಗ್ರೆಸ್ ಪಕ್ಷದಲ್ಲಿ ಉಂಟಾಗಿರುವ ಬಿಕ್ಕಟ್ಟಿನ ಬಗ್ಗೆ ಕೇಂದ್ರ ನಾಯಕರು ಚರ್ಚಿಸುವ ಸಾಧ್ಯತೆಯಿದೆ.

## ರಾಜ್ಯದ ಹಲವು ವಿಚಾರಗಳ ಬಗ್ಗೆ ಕೇಂದ್ರ ಸಚಿವರ ಭೇಟಿಗಾಗಿ ದೆಹಲಿಗೆ ಹೋಗುತ್ತೇನೆ: ಡಿಕೆಶಿ

## ಇಬ್ಬರು ನಾಯಕರು ಒಟ್ಟಾಗಿ ಹೇಳಿದ ಮೇಲೆ ಗೊಂದಲ ಬಗೆಹರಿದಿದೆ: ಸತೀಶ್ ಜಾರಕಿಹೊಳಿ

### ನಾನು ಯಾವುದೇ ಆತುರದಲ್ಲಿಲ್ಲ

ಡಿಸಿಎಂ ಡಿ.ಕೆ. ಶಿವಕುಮಾರ್, ತಮ್ಮ ಬೆಂಬಲಿಗರು ತಮ್ಮನ್ನು ಮುಂದಿನ ಸಿಎಂ ಆಗಿ ನೋಡಲು ಬಯಸುತ್ತಿದ್ದಾರಾ ಎಂಬ ಪ್ರಶ್ನೆಗಳಿಗೆ ಅವರು ಉತ್ತರಿಸಿದರು. ಪಕ್ಷದ ಕಾರ್ಯಕರ್ತರು ಉತ್ಸುಕರಾಗಿರಬಹುದು. ಆದರೆ ನಾನು ಯಾವುದೇ ಆತುರದಲ್ಲಿಲ್ಲ. ಪಕ್ಷವು ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದರು. ರಾಷ್ಟ್ರ ರಾಜಧಾನಿಗೆ ಭೇಟಿ ನೀಡುವ ಸಾಧ್ಯತೆಯನ್ನು ಅವರು ತಳ್ಳಿಹಾಕಲಿಲ್ಲ, ಸಂಸತ್ತಿನ ಚಳಿಗಾಲದ ಅಧಿವೇಶನಕ್ಕೂ ಮುನ್ನ ಕಾಂಗ್ರೆಸ್ ನಾಯಕತ್ವದೊಂದಿಗೆ ಹಲವಾರು ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಲು ದೆಹಲಿಗೆ ಹೋಗುತ್ತಿರುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ.

### ಗೊಂದಲಗಳಿಗೆ ತೆರೆ ಎಳೆದ ನಾಯಕರು

ಕಳೆದ ಒಂದು ತಿಂಗಳಿಂದ ಅನಗತ್ಯ ಗೊಂದಲಗಳು ಸೃಷ್ಟಿಯಾಗಿವೆ ಎಂದು ಬೇಸರ ವ್ಯಕ್ತಪಡಿಸಿದ ಸಿಎಂ, ಮಾಧ್ಯಮಗಳಲ್ಲಿ ಬಿಂಬಿತವಾಗುತ್ತಿರುವಂತೆ ನಮ್ಮಲ್ಲಿ ಯಾವುದೇ 'ಡಿಫರೆನ್ಸ್' ಇಲ್ಲ. 2023ರ ಚುನಾವಣೆಯಲ್ಲಿ ಹೇಗೆ ಒಗ್ಗೂಡಿ ಕೆಲಸ ಮಾಡಿದೆವೋ, ಮುಂದೆಯೂ ಹಾಗೆಯೇ ಮುಂದುವರಿಯಲಿದ್ದೇವೆ, ಎಂದರು. ದಿಲ್ಲಿಗೆ ತೆರಳುತ್ತಿರುವ ಶಾಸಕರ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅದು ಸಚಿವ ಸಂಪುಟ ವಿಸ್ತರಣೆ ಲಾಬಿಗಾಗಿ ಇರಬಹುದೇ ಹೊರತು, ನಾಯಕತ್ವದ ವಿರುದ್ಧದ ನಡೆ ಅಲ್ಲ ಎಂದು ಸ್ಪಷ್ಟನೆ ನೀಡಿದರು.

### ಜನಾದೇಶವು 5ವರ್ಷ ಪೂರ್ಣ ಜವಾಬ್ದಾರಿ

ಶಿವಕುಮಾರ್ ಅವರು ಕಾಂಗ್ರೆಸ್‌ಗೆ ತಮ್ಮ ನಿಷ್ಠೆಯನ್ನು ಪುನರುಚ್ಚರಿಸಿದ್ದಾರೆ ಮತ್ತು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರದಲ್ಲಿ ನಾಯಕತ್ವದ ಕುರಿತು ಪಕ್ಷದ ಹೈಕಮಾಂಡ್

### ನಮ್ಮದು ಒಂದೇ ಗುಂಪು - ಅದು ಕಾಂಗ್ರೆಸ್



ರಾಜ್ಯದಲ್ಲಿ ಯಾವುದೇ ಬಣಗಳಿಲ್ಲ, ಇರುವುದು ಒಂದೇ ಗುಂಪು, ಅದು ಕಾಂಗ್ರೆಸ್ ಗುಂಪು, ಎಂದು ಗುಡುಗಿದರು. ಹಿಂದೆ ಹೈಕಮಾಂಡ್ ಸೂಚನೆಯಂತೆ ತಾವು ನಡೆದುಕೊಂಡಿದ್ದೇವೆ. ಈಗಲೂ ಅವರ ಆದೇಶವನ್ನೇ ಪಾಲಿಸುತ್ತೇವೆ ಎಂದು ಡಿಕೆಶಿ ಪುನರುಚ್ಚರಿಸಿದರು. ಮಧ್ಯದಲ್ಲಿ ತೂರಿಬಂದ ಎರಡೂವರೆ ವರ್ಷದ ಅಧಿಕಾರ ಹಂಚಿಕೆ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ, ಹೈಕಮಾಂಡ್ ಏನು ಹೇಳುತ್ತದೆಯೋ ಅದರಂತೆ ನಡೆದುಕೊಳ್ಳುವುದೇ ನಮ್ಮ ನಿಲುವು, ಎಂದು ಹೇಳುವ ಮೂಲಕ ಚೆಂಡನ್ನು ವರಿಷ್ಠರ ಅಂಗಳಕ್ಕೆ ತಳ್ಳಿದರು. ಮುಂದಿನ ದಿನಗಳಲ್ಲಿ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಮನೆಗೆ ಊಟಕ್ಕೆ ಆಗಮಿಸಲಿದ್ದಾರೆ ಎಂದು ಶಿವಕುಮಾರ್ ಪತ್ರಿಕಾಗೋಷ್ಠಿಯಲ್ಲೇ ಪ್ರಕಟಿಸಿದರು. ಇದರೊಂದಿಗೆ ಕಾಂಗ್ರೆಸ್‌ನಲ್ಲಿ ಕೆಲ ಸಮಯದಿಂದ ನಡೆಯುತ್ತಿದ್ದ ತೆರೆಮರೆಯ ಗುದ್ದಾಟಕ್ಕೆ ವಿರಾಮ ಬಿದ್ದಿದೆ. ಇದು ಅಲ್ಪ ವಿರಾಮವೋ, ಪೂರ್ಣ ವಿರಾಮವೋ ಎಂಬುದು ಮುಂದಿನ ದಿನಗಳಲ್ಲಿ ಸ್ಪಷ್ಟವಾಗಲಿದೆ.

## ಕಾಂಗ್ರೆಸ್ ಕುರ್ಚಿ ಕಚ್ಚಾಟದ ನಡುವೆ ಬಿಜೆಪಿ ಜೆಡಿಎಸ್ ಪಾಳಯ ಆಕ್ಟೀವ್

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಕುರ್ಚಿ ಕಲಹ ತೀವ್ರಗೊಂಡಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ನಡುವೆ ಸಿಎಂ ಗಾದಿಗಾಗಿ ಕಲಹ ನಡೆಯುತ್ತಿದೆ. ಇದೇ ಸಂದರ್ಭದಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಾಯಕರು ಆಕ್ಟೀವ್ ಆಗಿದ್ದಾರೆ. ಪರಿಸ್ಥಿತಿಯ ಲಾಭ ಪಡೆಯುವ ನಿಟ್ಟಿನಲ್ಲಿ ತಮ್ಮದೇ ಆದ ತಂತ್ರಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರಕ್ಕೆ ನವೆಂಬರ್ 20 ಕ್ಕೆ ಎರಡುವರೆ ವರ್ಷ ತುಂಬಿದೆ. ಆದರೆ ಸರ್ಕಾರ ಒಂದು ವರ್ಷ ತುಂಬುತ್ತಿದ್ದಂತೆ ಕುರ್ಚಿ ಗಲಾಟೆ ಶುರುವಾಗಿತ್ತು. ಅಲ್ಲಿಂದ ಆರಂಭಗೊಂಡ ಕುರ್ಚಿ ಕಿತ್ತಾಟಕ್ಕೆ ಬ್ರೇಕ್ ಬಿದ್ದಿಲ್ಲ. ಇಂದಿಗೂ ಸರ್ಕಾರದಲ್ಲಿ ಇತರ ವಿಚಾರಕ್ಕಿಂತ ಹೆಚ್ಚಾಗಿ ಕುರ್ಚಿ ಗಲಾಟೆಯೇ ನಡೆಯುತ್ತಿದೆ. ಈ ನಡುವೆ ಸರ್ಕಾರದ ವಿರುದ್ಧ ಹೋರಾಟ ನಡೆಸಲು ಬಿಜೆಪಿ ಮತ್ತು ಜೆಡಿಎಸ್ ಮುಂದಾಗಿದೆ.

**ರೈತರ ವಿಚಾರವೇ ಪ್ರಮುಖ ಅಸ್ತ್ರ:** ಬಿಜೆಪಿ ಸಹಜವಾಗಿ ಮತೀಯ ವಿಚಾರಗಳನ್ನು ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಹೋರಾಟ ರೂಪಿಸುವುದು ಸಂಪ್ರದಾಯ. ಮತೀಯ ಗಲಾಟೆಗಳು ಹಾಗೂ ವಿವಾದಗಳನ್ನು ಇಟ್ಟುಕೊಂಡು ಜನರ ಗಮನ ಸೆಳೆಯುವ ಪ್ರಯತ್ನ ನಡೆಸುತ್ತದೆ. ಆದರೆ ಈ ಬಾರಿ ವಿಜಯೇಂದ್ರ ತಮ್ಮ ತಂತ್ರಗಾರಿಕೆಯನ್ನು ಬದಲಾವಣೆ ಮಾಡಿಕೊಂಡಂತೆ ಇದೆ.



### ಪರಿಸ್ಥಿತಿಯ ಲಾಭ ಪಡೆಯಲು ತಂತ್ರ

ಮತೀಯ ವಿವಾದಗಳ ಬದಲಾಗಿ ರೈತರ ಸಮಸ್ಯೆ, ಕಬ್ಬು ಬೆಳೆಗಾರರ ಸಮಸ್ಯೆ, ತುಂಗಾ ಭದ್ರ ಡ್ಯಾಂ ಗೇಟ್ ವಿಚಾರವನ್ನು ಮುಂದಿಟ್ಟುಕೊಂಡು ಹೋರಾಟ ರೂಪಿಸುತ್ತಿದೆ.

### ಮೈತ್ರಿ ಗಟ್ಟಿಗೊಳಿಸಲು ಪ್ರಯತ್ನ

ರಾಜ್ಯದಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಂಡಿದೆ. ಆದರೆ ಇದು ಕೇವಲ ಚುನಾವಣೆಗೆ ಅಷ್ಟೇ ಸೀಮಿತವಾಗಿದೆ. ಆದರೆ ಈ ಮೈತ್ರಿಯನ್ನು ಬಲಗೊಳಿಸಲು ಬಿಜೆಪಿ ಪ್ರಯತ್ನ ನಡೆಸುತ್ತಿದೆ. ಜೆಡಿಎಸ್ ಜೊತೆಗೆ ಒಗ್ಗಟ್ಟಾಗಿ ಹೋರಾಟ ನಡೆಸಲು ಪ್ಲ್ಯಾನ್ ಮಾಡಲಾಗುತ್ತಿದೆ. ಸರ್ಕಾರದ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಪ್ರತ್ಯೇಕವಾಗಿ ಹೋರಾಟ ನಡೆಸುತ್ತಿದೆ. ಆದರೆ ಇದರಿಂದ ದೊಡ್ಡ ಪ್ರಮಾಣದ ಪರಿಣಾಮ ಕಾಣಿಸುತ್ತಿಲ್ಲ. ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಪ್ರಯೋಗಕ್ಕೆ ಮೈತ್ರಿ ಪಕ್ಷಗಳು ನಿರ್ಧಾರ ಮಾಡಿವೆ. ಹೀಗಾಗಿ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟಗಳು ಕಾಣಸಿಗುವ ಸಾಧ್ಯತೆ ಇದೆ.

ಈಗಾಗಲೇ ರಾಜ್ಯಾದ್ಯಂತ ಎಲ್ಲಾ ವಿಧಾನಸಭೆ ಕ್ಷೇತ್ರಗಳಲ್ಲಿ ಹೋರಾಟ ನಡೆಸಿದೆ. ಬೆಳಗಾವಿ ಅಧಿವೇಶನದಲ್ಲೂ ಇದೇ ವಿಚಾರ ಪ್ರಮುಖ ಅಸ್ತ್ರವಾಗಲಿದೆ.

**ಜನಾಭಿಪ್ರಾಯ ರೂಪಿಸಲು ಯತ್ನ:** ಕಾಂಗ್ರೆಸ್ ಸರ್ಕಾರದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳಿಗಿಂತ ಹೆಚ್ಚಾಗಿ ಅಧಿಕಾರಕ್ಕಾಗಿ ಪೈಪೋಟಿ ನಡೆಯುತ್ತಿದೆ. ಇದರಿಂದ ಆಡಳಿತ ಯಂತ್ರ ನಿಧಾನಗೊಂಡಿದೆ. ಅಧಿಕಾರಿಗಳು ಸಿಎಂ, ಡಿಸಿಎಂ ಮಾತು ಕೇಳುತ್ತಿಲ್ಲ. ಹೀಗಾಗಿ ಕೆಲಸ ಕಾರ್ಯಗಳು ಕುಂಠಿತವಾಗಿದೆ ಎಂಬುವುದು ಬಿಜೆಪಿಯ ವಾದವಾಗಿದೆ. ಇವೆಲ್ಲವನ್ನು ಮುಂದಿಟ್ಟುಕೊಂಡು ಹೋರಾಟ ರೂಪಿಸಲು ಬಿಜೆಪಿ ನಿರ್ಧಾರ ಮಾಡಿದೆ. ಜೆಡಿಎಸ್ ಕೂಡಾ ಇದಕ್ಕೆ ಸಾಥ್ ನೀಡಲಿದೆ. ಈ ಮೂಲಕ ರಾಜ್ಯದ ರಾಜಕೀಯ ಪರಿಸ್ಥಿತಿಯ ಲಾಭವನ್ನು ಸಂಪೂರ್ಣವಾಗಿ ಪಡೆಯುವ ಪ್ರಯತ್ನಕ್ಕೆ ಮೈತ್ರಿ ಪಕ್ಷಗಳು ಮುಂದಾಗಿವೆ. ಆದರೆ ಇದರಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿ ಆಗಲಿವೆ ಎಂಬುವುದು ಕುತೂಹಲ.

# ಕಾಟಾಚಾರಕ್ಕೆ ಬೆಳಗಾವಿ ಅಧಿವೇಶನ ಬೇಡ, 20 ದಿನ ನಡೆಸಿ

**• ಬಿಜೆಪಿ ಜೆಡಿಎಸ್ ಸಮನ್ವಯ ಸಭೆಯಲ್ಲಿ ಆಗ್ರಹ • ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮೈತ್ರಿ ಸಿದ್ಧತೆ**

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರಕಾರ ಕಾಟಾಚಾರಕ್ಕೆ ಬೆಳಗಾವಿ ಅಧಿವೇಶನ ನಡೆಸುತ್ತಿದೆ. ಅದು 8 ದಿನಕ್ಕಿಂತ ಹೆಚ್ಚು ಕಾಲ ನಡೆಯಲಾರದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ತಿಳಿಸಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಸಮನ್ವಯ ಸಭೆಯು ರಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಇಂದು ನಡೆಯಿತು. ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಹಾಲಿ ಶಾಸಕರು ಮೃತಪಟ್ಟ ಕಾರಣ ಒಂದು ದಿನ ನಡೆಯಲಾರದು ಆಡಳಿತ ಪಕ್ಷ ಕಾಂಗ್ರೆಸ್ ತನ್ನ ಮರ್ಜಿಗೋಸ್ಕರ, ಮಸೂದೆ ಅಂಗೀಕಾರಕ್ಕೆ ಈ ಅಧಿವೇಶನವನ್ನು ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದರು. ಬೆಂಗಳೂರು ಅಭಿವೃದ್ಧಿ, ಬೆಂಗಳೂರು ಪಾಲಿಕೆ- ಈ ಥರದ ವಿಚಾರಗಳನ್ನು ತಂದಿದ್ದಾರೆ ಎಂದರು.

### ಬಿಜೆಪಿ, ಜೆಡಿಎಸ್ ಆಗ್ರಹ

ಬೆಂಗಳೂರಿನ ವಿಚಾರಗಳನ್ನೇ ಕೈಗೆತ್ತಿಕೊಳ್ಳುವುದಾದರೆ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಸುವ ಔಚಿತ್ಯ ಏನು ಎಂದು ಕೇಳಿದರು. ಹಿಂದೆ ಕುಮಾರಸ್ವಾಮಿ, ಯಡಿಯೂರಪ್ಪ ಅವರಿದ್ದಾಗ ಅಲ್ಲೊಂದು ಭವನ ಆಗಬೇಕು. ಉತ್ತರ ಕರ್ನಾಟಕದ ಚರ್ಚೆ ಆಗಬೇಕೆಂದು ಅಧಿವೇಶನ ಮಾಡುತ್ತಿದ್ದರು. 20 ದಿನವಾದರೂ ಬೆಳಗಾವಿಯಲ್ಲಿ ಅಧಿವೇಶನ ನಡೆಸಿ ಅಲ್ಲಿನ ಸಮಸ್ಯೆಗಳನ್ನು ಚರ್ಚಿಸಿ ಎಂದು ಆಗ್ರಹಿಸಿದರು.



ಉತ್ತರ ಕರ್ನಾಟಕದ ವಿಚಾರವನ್ನು ಕೊನೆಗೆ ಪರಿಗಣಿಸುತ್ತಾರೆ. ಕೊನೆಯಲ್ಲಿ ಮುಖ್ಯಮಂತ್ರಿ ತಿಪ್ಪೆಸಾರಿಸಿ ಭಾಷಣ ಮಾಡಿ ಹೋಗಿದ್ದರು. ಕೈಗಾರಿಕೆ ಸ್ಥಾಪನೆ, ಶಾಲಾರಂಭ, ನೀರಾವರಿ ಯೋಜನೆಗೆ ಹಣದ ವಿಚಾರದಲ್ಲಿ ಮೋಸ ಮಾಡಿದ್ದಾರೆ ಎಂದು ದೂರಿದರು. ತುಂಗಭದ್ರಾ ಡ್ಯಾಂ ಗೇಟ್ ಕಿತ್ತುಹೋಗಿ ಒಂದು ವರ್ಷವಾಗಿದೆ ಎಂದು ಟೀಕಿಸಿದರು. 12 ಕೋಟಿ ಕೊಡಬೇಕಿದ್ದು, ಅದನ್ನು ಕೊಡುವ ಯೋಗ್ಯತೆ ಇಲ್ಲ ಎಂದು ಆಕ್ಷೇಪಿಸಿದರು.

ಎನ್‌ಡಿಎ ಅಂಗ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಈ ಹಿಂದಿನ ಅಧಿವೇಶನಗಳಲ್ಲೂ ಜೊತೆಯಾಗಿ ಕೆಲಸ ಮಾಡಿವೆ. ಮುಡಾ ಹಗರಣ, ನಿವೇಶನ ವಾಪಸಾತಿ, ವಾಲ್ಮೀಕಿ ನಿಗಮದ ಹಗರಣದಲ್ಲಿ ಮಂತ್ರಿ ರಾಜೀನಾಮೆ ವಿಚಾರ, ಕ್ರಿಕೆಟ್ ಸ್ಟೇಡಿಯಂನಲ್ಲಿ ಅಮಾಯಕ 11 ವಿದ್ಯಾರ್ಥಿಗಳ ದುರ್ಮರಣ ಇವೆಲ್ಲ ವಿಚಾರಗಳಲ್ಲಿ ನಮ್ಮೆಲ್ಲ ಶಾಸಕರು, ಮೇಲ್ಮನೆ ಸದಸ್ಯರು ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ ಎಂದು ವಿವರಿಸಿದರು.

### ಕಾಂಗ್ರೆಸ್ ಸರಕಾರ ಶೇ 60 ಕಮಿಷನ್ ಸರಕಾರ

ಸರಕಾರ ತಪ್ಪು ಹಾದಿಯಲ್ಲಿದೆ. ಜನರಿಗೆ ನೀಡಿದ ಭರವಸೆಗೆ ವಿರುದ್ಧವಾಗಿ ನಡೆಯುತ್ತಿದೆ. ಕಾಂಗ್ರೆಸ್ ಸರಕಾರ ಶೇ 60 ಕಮಿಷನ್ ಸರಕಾರವಾಗಿ ಮಾರ್ಪಟ್ಟಿದೆ. ಕರ್ನಾಟಕವನ್ನು ಎಟಿಎಂ ಮಾಡಿಕೊಂಡು ಕಾಂಗ್ರೆಸ್ಸಿನ ಕೇಂದ್ರ ಹೈಕಮಾಂಡಿಗೆ ಹಣ ಕಳಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರ ವಿರುದ್ಧ ಹೋರಾಟ ಮಾಡಲಿದ್ದೇವೆ ಎಂದು ತಿಳಿಸಿದರು. ವಿಧಾನಸಭೆಗೆ ಸಂಬಂಧಿಸಿದ 10-12 ವಿಚಾರಗಳನ್ನು ಸಮನ್ವಯ ಸಮಿತಿ ಸಭೆಯಲ್ಲಿ ಚರ್ಚಿಸಿದ್ದೇವೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಈ ಸಭೆಗೆ ಬಂದು ಮಾರ್ಗದರ್ಶನ ಮಾಡಿದ್ದಾರೆ. ಅದೇ ರೀತಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಫೋನ್ ಕರೆ ಮಾಡಿ ಸಲಹೆಗಳನ್ನು ನೀಡಿದ್ದಾರೆ. ಅವೆಲ್ಲವುಗಳನ್ನು ಪರಿಗಣಿಸಲಿದ್ದೇವೆ ಎಂದರು.

**ಈ ದಿನದ ದರ** ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹12,982/Gram24ct ₹11,900/Gram22ct | ಬೆಳ್ಳಿ: ₹185.00/Gram

ಅಂತರಾಳದಿಂದ... EDITORIAL

# ಕರ್ತವ್ಯದಿಂದ ವಜಾಗೊಳಿಸುವ ರೀತಿಯ ಕಠಿಣ ಕ್ರಮ ಜರುಗಿಸಿಲ್ಲ


ಉದಯವಾಹಿನಿ ಚಿತ್ರ

ಕಳೆದ ಹತ್ತು ತಿಂಗಳ ಅವಧಿಯಲ್ಲಿ, ಬೆಂಗಳೂರು ಮಹಾನಗರದ ವ್ಯಾಪ್ತಿಯ 124 ಪೊಲೀಸ್ ಅಧಿಕಾರಿಗಳು ಅಮಾನತುಗೊಂಡಿದ್ದಾರೆ. ಶಿಸ್ತುಕ್ರಮಕ್ಕೆ ಒಳಗಾದವರಲ್ಲಿ, ಕಾನ್‌ಸ್ಟೇಬಲ್ ಗಳಿಂದ ಹಿಡಿದು ಹಿರಿಯ ಐಪಿಎಸ್ ಅಧಿಕಾರಿಗಳೂ ಇದ್ದಾರೆ. ಭ್ರಷ್ಟಾಚಾರ, ಕರ್ತವ್ಯಲೋಪ ಸೇರಿದಂತೆ ಗಂಭೀರ ಆರೋಪಗಳನ್ನು ಈ ಅಧಿಕಾರಿಗಳು ಎದುರಿಸುತ್ತಿದ್ದಾರೆ. ಆದರೆ, ಇವರಲ್ಲಿ ಒಬ್ಬರ ಮೇಲೂ ಕರ್ತವ್ಯದಿಂದ ವಜಾಗೊಳಿಸುವ ರೀತಿಯ ಕಠಿಣ ಕ್ರಮವನ್ನು ಈವರೆಗೂ ಜರುಗಿಸಿಲ್ಲ. ಬಹುತೇಕ ಅಧಿಕಾರಿಗಳು ಇಲಾಖಾ ವಿಚಾರಣೆಯ ನಂತರ ತಮ್ಮ ಕರ್ತವ್ಯಕ್ಕೆ ಮರಳಿದ್ದಾರೆ. ಆ ಮೂಲಕ ದುರ್ವತ್ರನೆಯ ವರ್ತುಲ ಮುಂದುವರಿದಿದೆ. ಈ ಸಮಸ್ಯೆಯ ಆಳ ಅಗಲಕ್ಕೆ ನಿದರ್ಶನವಾಗಿ ಇತ್ತೀಚಿನ ಕೆಲವು ಘಟನೆಗಳನ್ನು ಗಮನಿಸಬಹುದು. ವಿಮಾ ಸಲಹೆಗಾರ ಮತ್ತು ಆತನ ಕ್ಲೈಂಟ್‌ನ ಬಳಿ ಇಬ್ಬರು ಕಾನ್‌ಸ್ಟೇಬಲ್‌ಗಳು ಹಣಕ್ಕೆ ಬೇಡಿಕೆಯಿಟ್ಟಿದ್ದರು. ಎಟಿಎಂ ಯಂತ್ರಗಳಿಗೆ ತುಂಬಿಸಲು ಹಣ ಸಾಗಿಸುತ್ತಿದ್ದ ವಾಹನದಿಂದ 7.11 ಕೋಟಿ ನಗದು ದರೋಡೆ ಮಾಡಿದ ಕೃತ್ಯದಲ್ಲಿ ಒಬ್ಬ ಕಾನ್‌ಸ್ಟೇಬಲ್ ಭಾಗಿಯಾಗಿರುವ ಆರೋಪವಿದೆ. ಓರ್ವ ಕಾನ್‌ಸ್ಟೇಬಲ್ ಒಳಗೊಂಡ ತಂಡವೊಂದು ಸೈಬರ್ ಅಪರಾಧಗಳ ತನಿಖಾ ಅಧಿಕಾರಿಗಳಂತೆ ಬಿಂಬಿಸಿಕೊಂಡು, ಬಿಪಿಒ ಅಧಿಕಾರಿಗಳನ್ನು ಅಪಹರಿಸಿ ಹಣ ವರ್ಗಾಯಿಸುವಂತೆ ಒತ್ತಾಯಿಸಿದೆ. 2022ರಲ್ಲಿ ಆಗಿನ ಮುಖ್ಯಮಂತ್ರಿಗಳ ಭದ್ರತಾ ತಂಡದಲ್ಲಿ ಇದ್ದವರೇ ಮಾದಕವಸ್ತುಗಳನ್ನು ಮಾರುತ್ತಿದ್ದ ಪ್ರಕರಣ ವರದಿಯಾಗಿತ್ತು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಅವರು ದುಷ್ಕೃತ್ಯಗಳಲ್ಲಿ ತೊಡಗಿದ ಪೊಲೀಸರನ್ನು ಮತ್ತೆ ಮತ್ತೆ ತರಾಟೆಗೆ ತೆಗೆದುಕೊಂಡಿದ್ದಾರೆ. ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಕೈಕುಲುಕುವ ಪೊಲೀಸ್ ಅಧಿಕಾರಿಗಳಿಗೆ ಮುಖ್ಯಮಂತ್ರಿ ಎಚ್ಚರಿಕೆ ನೀಡಿದ್ದಾರೆ.

ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರದ ಸಮಸ್ಯೆ ಕೆಳಹಂತದ ಸಿಬ್ಬಂದಿಗೆ ಸೀಮಿತವಾದುದಲ್ಲ. ಡ್ರಗ್ ಪೆಡ್ಲರ್, ಕೊಲೆ ಪ್ರಕರಣದ ಆರೋಪಿ ಸೇರಿದಂತೆ ವಿವಿಧ ಅಪರಾಧಿಗಳನ್ನು ದೋಷಮುಕ್ತಗೊಳಿಸಲು ಲಂಚ ಪಡೆದ ಆರೋಪ ಓರ್ವ ಇನ್‌ಸ್ಪೆಕ್ಟರ್, ಐವರು ಪೊಲೀಸ್ ಸಿಬ್ಬಂದಿಯ ಮೇಲಿದೆ. ಬಿಟ್ ಕಾಯಿನ್ ಹಗರಣದಲ್ಲಿ ಸಾಕ್ಷ್ಯ ನಾಶಗೊಳಿಸಲು ಪ್ರಯತ್ನಿಸಿದ ಆರೋಪದಲ್ಲಿ ಡಿಎಸ್‌ಪಿ ಬಂಧನಕ್ಕೊಳಗಾಗಿದ್ದರು. ಎಡಿಜಿಪಿ ಅಧಿಕಾರಿಯೊಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿ ಹಗರಣದಲ್ಲಿ ಬಂಧನಕ್ಕೊಳಗಾಗಿದ್ದರು. ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಕೈದಿಗಳಿಗೆ ವಿವಿಐಪಿ ಸವಲತ್ತು ಹಾಗೂ ಮೊಬೈಲ್ ಫೋನ್‌ಗಳನ್ನು ಒದಗಿಸಿದ ಆರೋಪದಲ್ಲಿ ಕಾರಾಗೃಹದ ಅಧೀಕ್ಷಕರು ಅಮಾನತುಗೊಂಡಿದ್ದಾರೆ. ಇತ್ತೀಚೆಗಷ್ಟೇ 11 ಅಧಿಕಾರಿಗಳು, ಅಮಲು ಬರಿಸುವ ಮಾತ್ರೆಗಳ ಮಾರಾಟ ಜಾಲದೊಂದಿಗೆ ಶಾಮೀಲಾದ ಆರೋಪದಲ್ಲಿ ಅಮಾನತುಗೊಂಡಿದ್ದಾರೆ.

ಇಂಥ ಪ್ರಕರಣಗಳು ಬೆಂಗಳೂರಿನಾಚೆಗೂ ನಡೆದಿವೆ. ಆಭರಣಗಳ ವರ್ತಕನಿಂದ 7.5 ಲಕ್ಷ ಮೌಲ್ಯದ ಒಡವೆಗಳನ್ನು ದೋಚಿದ ಪ್ರಕರಣದಲ್ಲಿ ಇಬ್ಬರು ಸಬ್ ಇನ್‌ಸ್ಪೆಕ್ಟರ್‌ಗಳ ಬಂಧನ ದಾವಣಗೆರೆಯಲ್ಲಿ ನಡೆದಿದೆ. ಪೊಲೀಸ್ ಇಲಾಖೆಯಲ್ಲಿನ ಕಳಂಕಿತರ ಈ ಪಟ್ಟಿಗೆ ಕೊನೆಯಿಲ್ಲ. ಕೆಲವು ಪೊಲೀಸ್ ಠಾಣೆಗಳು 'ರಿಯಲ್ ಎಸ್ಟೇಟ್ ಅಡ್ಡಾ'ಗಳಾಗುತ್ತಿರುವ ಬಗ್ಗೆ ಗೃಹ ಸಚಿವರು ಸಾರ್ವಜನಿಕವಾಗಿಯೇ ಟೀಕಿಸಿದ್ದಾರೆ. ಇದೆಲ್ಲ ಭ್ರಷ್ಟಾಚಾರದ ಬೇರುಗಳು, ಹಣ ನೀಡಿ ನೌಕರಿ ಮತ್ತು ಸ್ಥಾನಗಳನ್ನು ಗಿಟ್ಟಿಸಿಕೊಳ್ಳುವ ಸಂಸ್ಕೃತಿಯಲ್ಲಿದೆ. ಲಾಭದಾಯಕ ಸ್ಥಳಗಳಿಗೆ ನಿಯೋಜನೆಗೊಳ್ಳಲು ಅಧಿಕಾರಿಗಳು ದೊಡ್ಡ ಮೊತ್ತದ ಹಣ ನೀಡುವುದಿದೆ. ಹೀಗೆ ಹೂಡಿಕೆಯ ರೀತಿಯಲ್ಲಿ ಸಂದಾಯ ಮಾಡಿದ ಹಣವನ್ನು ಗಳಿಸಲಿಕ್ಕಾಗಿ ಅಧಿಕಾರಿಗಳು ಮಾಫಿಯಾದೊಂದಿಗೆ ಶಾಮೀಲಾಗುತ್ತಾರೆ ಅಥವಾ ಅಪರಾಧ ಕೃತ್ಯಗಳಿಗೆ ಕುರುಡಾಗುತ್ತಾರೆ. ವಾಮಮಾರ್ಗಗಳು, ಕಾನೂನು ಮತ್ತು ಸುವ್ಯವಸ್ಥೆಯ ಬುನಾದಿಯನ್ನೇ ಶಿಥಿಲಗೊಳಿಸುತ್ತಿವೆ. ಸೂಕ್ಷ್ಮ ಹಾಗೂ ಮಹತ್ವದ ಹಲವು ಪ್ರಕರಣಗಳನ್ನು ಭೇದಿಸಿದ ಕಾರಣದಿಂದಾಗಿ ಬೆಂಗಳೂರು ಪೊಲೀಸ್ ಮೆಚ್ಚುಗೆಗೆ ಪಾತ್ರವಾಗಿದೆಯಾದರೂ, ಕಾಂಡಕೊರಕ ಹುಳುಗಳಂಥ ಒಳಗಿನ ಭ್ರಷ್ಟರಿಂದಲೇ ಇಲಾಖೆಯ ವರ್ಚಸ್ಸಿಗೆ ಮಸಿ ಅಂಟಿದೆ. ಸಮವಸ್ತ್ರದಲ್ಲಿರುವ ಅಪರಾಧಿಗಳ ರೂಪದಲ್ಲಿ ಪೊಲೀಸರನ್ನು ನೋಡುವ ಸ್ಥಿತಿ ಸೃಷ್ಟಿಯಾಗಬಾರದು. ಭ್ರಷ್ಟರನ್ನು ಸೇವೆಯಿಂದ ವಜಾಗೊಳಿಸುವ ಮೂಲಕ ಪೊಲೀಸ್ ಇಲಾಖೆಗೆ ಕಾಯಕಲ್ಪ ನೀಡಲು ಸರ್ಕಾರ ಮುಂದಾಗಬೇಕು. ಹುದ್ದೆ ಹಾಗೂ ಸ್ಥಾನಕ್ಕಾಗಿ ಹಣ ಪಡೆಯುವ ಪ್ರವೃತ್ತಿ ಕೊನೆಗೊಂಡು, ಕಳಂಕಿತರನ್ನು ತ್ವರಿತ ಶಿಕ್ಷೆಗೆ ಒಳಪಡಿಸುವ ವ್ಯವಸ್ಥೆ ರೂಪುಗೊಳ್ಳಬೇಕು. ಇದಾಗದೆ ಹೋದರೆ, ಭ್ರಷ್ಟ ಪೊಲೀಸರು ಶಿಕ್ಷೆಯ ಭಯವಿಲ್ಲದೆ ತಮ್ಮ ಕುಕೃತ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಾರೆ.

# ರಾಮಾಯಣ



## ಶ್ರೀರಾಮನ ಕೋಪ

• ಹಿಂದಿನ ಸಂಚಿಕೆಯಿಂದ 120ನೆಯ ಅಧ್ಯಾಯ

ಅದನ್ನು ನೋಡಿ ನ್ಯಯಮಾರ್ಗಪ್ರವರ್ತಕನಾದ ಲಕ್ಷ್ಮಣನು ಶ್ರೀರಾಮನನ್ನು ಕುರಿತು ಕಾಲೋಚಿತವಾಗಿ ಅಣ್ಣ, ಶೋಕವನ್ನು ಬಿಟ್ಟು ಧೈರ್ಯವನ್ನವಲಂಬಿಸಿ ಉತ್ಸಾಹ ಶಕ್ತಿಯುಳ್ಳವನಾಗಿ ಸೀತಾದೇವಿಯನ್ನು ಹಂಡುಕುವುದಕ್ಕೆ ತಕ್ಕ ಯತ್ನವನ್ನು ಮಾಡು. ಲೋಕದಲ್ಲಿ ಉತ್ಸಾಹಶಕ್ಷಿಯುಳ್ಳ ಪುರುಷರು ಅತ್ಯಂತ ಆಪತ್ತುಬಂದರೂ ದುಃಖವನ್ನು ಪಡೆಯುವುದಿಲ್ಲ ಎಂದು ನುಡಿದನು. ಶ್ರೀರಾಮನು ಆ ಮಾತನ್ನು ಗ್ರಹಿಸದೆ. ಧೈರ್ಯವನ್ನವಲಂಬಿಸದೆ. ಅತಿಶಯವಾಗಿ ದುಃಖಾಕ್ರಾಂತನಾದನು.

**ಶ್ರೀರಾಮನ ಕೋಪ:** ಈ ಪ್ರಕಾರ ಸೀತಾದೇವಿಯನ್ನು ಕಾಣದೆ ವಿರಹದುಃಖದಿಂದ ದೈನ್ಯಬಡುತ್ತಿದ್ದ ಶ್ರೀರಾಮನು ಲಕ್ಷ್ಮಣನನ್ನು ಕುರಿತು ಎಲೈ ಲಕ್ಷ್ಮಣ, ಸೀತಾದೇವಿಯು ಕಮಲಗಳನ್ನು ತರುವುದಕ್ಕಾಗಿ ಗೋದಾವರೀನದಿಗೆ ಹೋಗಿರಬಹುದು. ನೀನೇ ಆ ನದಿಗೆ ಹೋಗಿ ಚೆನ್ನಾಗಿ ಶೋಧನೆಯನ್ನು ಮಾಡು ಎಂದು ಹೇಳಿದನು. ಲಕ್ಷ್ಮಣನು ಗೋದಾವರೀನದಿಗೆ ಹೋಗಿ ಸೀತಾದೇವಿಯನ್ನು ಹುಡುಕಿ ಆ ದೇವಿಯನ್ನು ಕಾಣದೆ ಶ್ರೀರಾಮನ ಸಮೀಪಕ್ಕೆ ಬಂದು ಶ್ರೀರಾಮ, ಗೋದಾವರೀನದಿಯ ತಡಿಗಳಲ್ಲಿ ಹುಡುಕಿ ನೋಡುತ್ತ ಕೂಗಿದೆನು. ಆ ದೇವಿಯು ಎಲ್ಲಿಯೂ ಇಲ್ಲ ಎಂದು ಹೇಳಿದನು. ಶ್ರೀರಾಮನು ಅತ್ಯಂತ ವಿರಹಾತುರನಾಗಿ ತಾನೇ ಗೋದಾವರೀತೀರಕ್ಕೆ ಹೋಗಿ ಸೀತೆ, ಸೀತೆ, ಎಲ್ಲಿದ್ದೀಯೆ ಗೋದಾವರೀನದಿಯೆ, ಸೀತಾದೇವಿಯನ್ನು ನೀನು ನೋಡಲಿಲ್ಲವೆ ಲಕ್ಷ್ಮಣ, ಈ ಮೃಗಗಳ ಭಾವಚೇಷ್ಟೆಗಳನ್ನು ನೋಡು. ಸೀತಾದೇವಿಯ ವೃತ್ತಾಂತ ಹೇಳುವಂತೆ ನನ್ನನ್ನು ಅಡಿಗಡಿಗೆ ನೋಡುತ್ತಿವೆ. ಎಲೈ ಮೃಗಗಳಿರಾ, ಸೀತಾದೇವಿಯು ಯಾವ ದಿಕ್ಕಿಗೆ ಹೋದಳು? ನೀವು ಅರಿತಿದ್ದ ಪಕ್ಷದಲ್ಲಿ ಹೇಳಿರಿ ಎಂದನು. ಆಗ ದಂಡಕಾರಣ್ಯದಲ್ಲಿದ್ದ ಮೃಗಗಳು ಕಣ್ಣೀರುಬಿಡುತ್ತ ಎದ್ದು ನಿಂತು ತೆಂಕಣಮುಖವಾಗಿ ಅಂತರಿಕ್ಷಮಾರ್ಗವನ್ನು ನೋಡುತ್ತ ಓಡಿದವು. ಸೀತಾದೇವಿಯನ್ನು ತೆಂಕಣದಿಕ್ಕಿಗೆ ಅಂತರಿಕ್ಷ ಮಾರ್ಗದಲ್ಲಿ ರಾವಣನು ತೆಗೆದುಕೊಂಡುಹೋದನೆಂದು ಕಣ್ಸನ್ನೆಯನ್ನು ಮಾಡುತ್ತಿರುವುವೊ ಎಂಬಂತೆ ಕಾಣಿಸಿಕೊಂಡವು. ಲಕ್ಷ್ಮಣನು ಆ ಮೃಗಗಳ ಭಾವಚೇಷ್ಟೆಗಳನ್ನು ಕಂಡು ಶ್ರೀರಾಮನನ್ನು ಕುರಿತು ಶ್ರೀರಾಮ, ನೀನು ಈ ಮೃಗಗಳನ್ನು ಕುರಿತು ಸೀತಾದೇವಿಯು ಹೋದ ಮಾರ್ಗವನ್ನು ಕೇಳಲು, ಅವೆಲ್ಲವೂ ಅಂತರಿಕ್ಷವನ್ನು ನೋಡುತ್ತ ದಕ್ಷಿಣದಿಕ್ಕಿಗೆ ಹೋಗುತ್ತಿವೆ. ಇವುಗಳ ಭಾವ ಚೇಷ್ಟೆಗಳನ್ನು ನೋಡಿದರೆ ಸೀತಾದೇವಿಯು ತೆಂಕಣದಿಕ್ಕಿಗೆ ಅಂತರಿಕ್ಷಮಾರ್ಗದಲ್ಲಿ ಹೋದಳೆಂದು ತಿಳಿದು ಬರುತ್ತಬೆ.

ಮುಂದುವರಿಯುವುದು...



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

# ಹಾಸನ ದೇವಾಲಯಗಳ ವೈಭವಯಾನ

............ಮುಂದುವರೆದ ಭಾಗ

**ಶಾಂತಿಗ್ರಾಮ :** ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ಅಚಲಪ್ರಕಾಶಮುನಿಯ ನಿರ್ಮಿಸಿದ ಯೋಗ– ನರಸಿಂಹ ದೇವಾಲಯ ಪ್ರಸಿದ್ಧವಾಗಿದೆ. ಇದರ ಮುಖ ಮಂಟಪದ ನವನಾರಸಿಂಹ (ನರಸಿಂಹನ ಒಂಭತ್ತು ಸ್ವರೂಪವುಳ್ಳ) ವೃತ್ತವು ಅಪರೂಪದ್ದಾಗಿದೆ.ಇಲ್ಲಿನ ಕೇಶವ ದೇವಾಲಯವೂ ಪ್ರಸಿದ್ಧವಾಗಿದೆ. ಈ ಊರಿನಲ್ಲಿ ರಾಣಿ ಶಾಂತಲೆಯ ತಂದೆ ಮಾರಸಿಂಗಮಯ್ಯನು 1122ರಲ್ಲಿ ಕಟ್ಟಿಸಿದ ಧರ್ಮೇಶ್ವರ ಎಂಬ ಶೈವದೇವಾಲಯ, ಇಲ್ಲಿನ ಜೈನಬಸದಿ ಮುಂತಾದವೂ ವೀಕ್ಷಣಾರ್ಹವಾಗಿವೆ. (ಹಾಸನದಿಂದ 14 ಕಿ.ಮೀ. ಶ್ರವಣಬೆಳಗೊಳದಿಂದ 35 ಕಿ.ಮೀ)

**ಮೊಸಳೆ:** ಒಂದೇ ವಿನ್ಯಾಸದ ನಾಗೇಶ್ವರ ಹಾಗೂ ಕೇಶವ ಎಂಬ ಅವಳಿ ದೇವಾಲಯಗಳು ಇಲ್ಲಿನ ಆಕರ್ಷಣೆ. 12–13ನೇ ಶ.ದ ಈ ಹೊಯ್ಸಳ ದೇವಾಲಯಗಳಲ್ಲಿ ಆಕರ್ಷಕ ವಾಸ್ತುವಿನ್ಯಾಸ, ಶಿಖರಗಳು, ಪುಟ್ಟ ಭಿತ್ತಿಶಿಲ್ಪಗಳು, ದೇವಕೋಷ್ಠಗಳ ಬಿಡಿಶಿಲ್ಪಗಳು ವೀಕ್ಷಣಾರ್ಹವಾಗಿವೆ.

ನಾಗೇಶ್ವರ ದೇವಾಲಯದ ಭಿತ್ತಿಯಲ್ಲಿ ಶಾಕ್ತ ಸಂಪ್ರದಾಯದ ಅಪರೂಪದ ನಾಮಕರಣ ಹಾಗೂ ಲಕ್ಷಣವುಳ್ಳ ಶಿಲ್ಪಗಳು ಅಧ್ಯಯನಾರ್ಹವಾಗಿವೆ. (ಹಾಸನದಿದ 16 ಕಿ.ಮೀ, ಶ್ರವಣಬೆಳಗೊಳದದಿಂದ 66 ಕಿ.ಮೀ.)

ಇವಲ್ಲದೆ ತಾಲ್ಲೂಕಿನಲ್ಲಿ ಶಾಂತಿಗ್ರಾಮದ ಸಮೀಪದ ಮರ್ಕುಲಿ ಗ್ರಾಮದ ಜೈನ ತ್ರಿಕೂಟ ಬಸದಿ, ಯೆಲೆಗುಂದ ಗ್ರಾಮದಲ್ಲಿ ಹೊಯ್ಸಳ ವಿಷ್ಣುವರ್ಧನನ ಪತ್ನಿ ಚಿಕ್ಕಶಾಂತಲೆ ಹಾಗೂ ಅವಳ ಮಗಳ ಸ್ಮಾರಕವಾಗಿ ಚಿಕ್ಕಶಾಂತಲೆಯ ತಾಯಿ ಜಕ್ಕಿಯಬ್ಬೆಯು ಕ್ರಿ.ಶ. 1135ರಲ್ಲಿ ಕಟ್ಟಿಸಿದ ಶಾಂತಲೇಶ್ವರ ಮತ್ತು ಬೊಪೇಶ್ವರ ದೇವಾಲಯಗಳು, ಕಡದರವಳ್ಳಿ ಗ್ರಾಮದ ಎರಡು ಶೈವ ದೇವಾಲಯಗಳು, ಹೆರಗು ಗ್ರಾಮದ ಹೊಯ್ಸಳ ತ್ರಿಕೂಟ ದೇವಾಲಯ, ಹಿರೇಕಡಲೂರು ಗ್ರಾಮದ ಹೊಯ್ಸಳ ಕೇಶವ ದೇವಾಲಯ ಮುಂತಾದವುಗಳಿವೆ. ಹಾಸನದಿಂದ 15 ಕಿ.ಮೀ ದೂರಕ್ಕೆ ತಾಲ್ಲೂಕಿನ ಅತ್ಯುನ್ನತ ಶಿಖರವುಳ್ಳ ಸೀಗೆಗುಡ್ಡವಿದೆ. ಇಲ್ಲಿ ಮಳೆ ಮಲ್ಲೇಶ್ವರ ದೇವಾಲಯವಿದೆ. ಸಮೀಪದ ಕಣಿವೆಯಲ್ಲಿ ನೈಸರ್ಗಿಕ ಜಲಮೂಲವಾದ ಪುಟ್ಟ ಗವಿಯಲ್ಲಿ ನೀರುಹಳ್ಳ ರಂಗನಾಥ ಕ್ಷೇತ್ರ ಇದೆ. ದುದ್ದದ ಬಳಿಯ ಮುದುಗೆರೆಯ ನರಸಿಂಹ ದೇವಾಲಯದ ಯೋಗನರಸಿಂಹ ಮೂಲಮೂರ್ತಿ, ಅದರ ಎದುರಿನ ಲಕ್ಷ್ಮೀವರಾಹ ಮೂರ್ತಿ, ಜಲಮೂಲ ತಾಣದಲ್ಲಿ ಶಿವಾಲಯವೂ ಉಳ್ಳ ಪ್ರಾಕೃತಿಕ ರಮಣೀಯತೆಯುಳ್ಳ ರಾಮೇದೇವರ ಹಳ್ಳ, ಲಕ್ಷ್ಮೀದೇವಿಯ ಜಾನಪದೀಯ ಕ್ಷೇತ್ರ ಮಳಲಿ–ಮುಂತಾದವು ಕೂಡ ಹಾಸನ ತಾಲ್ಲೂಕಿನ ಇತರ ಕೆಲವು ವೀಕ್ಷಣಾರ್ಹ ತಾಣಗಳು.


ಉದಯವಾಹಿನಿ ಚಿತ್ರ

**ಆಲೂರು ತಾಲ್ಲೂಕು:** ಜಿಲ್ಲೆಯ ಅತಿಚಿಕ್ಕ ತಾಲ್ಲೂಕು. ಮಲೆನಾಡು–ಅರೆಮಲೆನಾಡುಗಳ ಸಮ್ಮಿಶ್ರ ಪ್ರಕೃತಿ, ಆಲೂರುಸಣ್ಣ ಬತ್ತದ ತಳಿಗೆ ತವರು, ಅನೇಕ ಸಾಹಿತಿಗಳು, ಜಾನಪದ ಕಲಾವಿದರ ನೆಲೆವೀಡು (ಹಾಸನದಿಂದ 12 ಕಿ.ಮೀ, ಶ್ರವಣಬೆಳಗೊಳದಿಂದ 65 ಕಿ.ಮೀ) ಈ ತಾಲ್ಲೂಕಿನ ಪ್ರಮುಖ ದೇವಾಲಯಗಳೆಂದರೆ–

**ಕೆಂಚಮ್ಮನ ಹೊಸಕೋಟೆ:** ಪ್ರಸಿದ್ಧ ಶಕ್ತಿದೇವತಾ ಕೇಂದ್ರ. ಮಲೆನಾಡ ಸೊಬಗಿನ ತಾಣ, ತಾಲ್ಲೂಕಿನ ಶಕ್ತಿದೇವತಾರಾಧನೆಯ ಒಂದು ಪ್ರಸಿದ್ಧ ನೆಲೆ. ಹಾಸನಾಂಬಾ ದೇವಿಯ ಸೋದರಿ ಎಂದು ಖ್ಯಾತಳಾದ ಕೆಂಚಮ್ಮ ದೇವಿಯ ದೇವಾಲಯ ಇಲ್ಲಿದೆ. (ಹಾಸನದಿಂದ 38ಕಿಮೀ, ಶ್ರವಣಬೆಳಗೊಳದಿಂದ 88 ಕಿ.ಮೀ)

**ಮರಸು (ವಿಜಯದುರ್ಗಾ) :** ಆಲೂರಿನಿಂದ 2 ಕಿ.ಮೀ. ದೂರದ ಮರಸು ಗ್ರಾಮದಲ್ಲಿ ವಿಜಯನಗರ ಪಾಳೇಯಗಾರರ ಆಳ್ವಿಕೆಯ ಅವಶೇಷಗಳಿವೆ. ಇಲ್ಲಿನ ಉಡುಸಲಮ್ಮ ಎಂಬ ಜಾನಪದ ಹಿನ್ನೆಲೆಯ ಶಕ್ತಿದೇವತೆಯು ಈಗ ವಿಜಯದುರ್ಗಾ ಎಂದು ಬಹು ಪ್ರಸಿದ್ಧವಾಗಿದೆ. ಗ್ರಾಮದ ಹೊರಗೆ ಪ್ರಕೃತಿಸೌಂದರ್ಯದ ಮಡಿಲಲ್ಲಿ ದೇವಾಲಯವು ಆಧುನಿಕವಾಗಿ ಪುನರ್ನಿರ್ಮಾಣಗೊಂಡು ಒಂದು ಯಾತ್ರಾ ಸ್ಥಳವೇ ಆಗಿದೆ. ಇಲ್ಲಿಗೆ ಸಮೀಪದಲ್ಲೇ ರಂಗನಾಥ ದೇವಾಲಯವಿದೆ.

**ಹಳೇಪಾಳ್ಯ :** ಪಾಳ್ಯದಿಂದ ಒಂದು ಕಿ.ಮೀ. ದೂರದಲ್ಲಿರುವ ಹಳೇಪಾಳ್ಯ ಗ್ರಾಮದಲ್ಲಿ 14ನೇ ಶ.ದ ಶ್ರೀ ಲಕ್ಷ್ಮೀಜನಾರ್ದನಸ್ವಾಮಿ ದೇವಾಲಯ ಒಂದು ವೀಕ್ಷಣಾರ್ಹ ತಾಣ.

**ಮಗನ ತಿಂದ ಮಹರಾಯನ ದುರ್ಗ :** ಜಿಲ್ಲೆಯ ಗಿರಿದುರ್ಗಗಳಲ್ಲಿ ಒಂದು. ಮಲೆನಾಡಿನ ಪ್ರಕೃತಿ ಸೌಂದರ್ಯದ ಮಡಿಲಿಂದ ತಲೆಯೆತ್ತಿರುವ ಕಲ್ಲುಗುಡ್ಡದ ಮೇಲೆ ವಿಜಯನಗರ ನಾಯಕರ ಕಾಲದ ಕೋಟೆಯ ಅವಶೇಷಗಳಿವೆ. ಪ್ರಕೃತಿಸೌಂದರ್ಯದ ವೀಕ್ಷಣೆಗೆ ಮತ್ತು ಚಾರಣಕ್ಕೆ ಸೂಕ್ತವಾದ ತಾಣ, ಶಿಶು ಮಾಂಸಭಕ್ಷಕನಾದ ದೊರೆಯೊಬ್ಬ ಅರಿಯದೆ ಕೊನೆಗೆ ತನ್ನ ಮಗನ ಮಾಂಸವನ್ನೇ ತಿಂದು, ಅದಕ್ಕಾಗಿ ಪಶ್ಚಾತ್ತಾಪಪಟ್ಟು ಈ ಬೆಟ್ಟದ ಮೇಲಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡನು ಎಂದು ಕಥೆ ಇದೆ. (ಆಲೂರಿನಿಂದ 14 ಕಿ.ಮೀ. ದೂರದಲ್ಲಿದೆ)

**ಪಾರ್ವತಮ್ಮನ ಬೆಟ್ಟ :** ಸಮೀಪದಲ್ಲೇ ಇನ್ನೊಂದು ಗುಡ್ಡದ ಮೇಲೆ ಪುರಾತನ ಪಾರ್ವತಿದೇವಿಯ ಮಂದಿರವಿದೆ. ಇದೂ ಪ್ರಕೃತಿವೀಕ್ಷಣೆಗೆ ಸೂಕ್ತ ತಾಣ. ಇಲ್ಲಿಂದ ಮಗನತಿಂದ ದೃಶ್ಯವನ್ನು ಮಹಾರಾಯನ ರಮಣೀಯ ಬೆಟ್ಟದ ವೀಕ್ಷಿಸಬಹುದು.(ವಿ.ಸೂ.ಮಾರ್ಗದರ್ಶಿಗಳು ಅಗತ್ಯ. ಈ ಪ್ರದೇಶದಲ್ಲಿ ಕಾಡಾನೆಗಳ ಕಾಟವಿದೆ) ಇವಲ್ಲದೆ ಈ ತಾಲ್ಲೂಕಿನಲ್ಲಿ ಅಡಿಬೈಲು ಬೆಟ್ಟದ ಮೇಲಿನ ರಂಗನಾಥಸ್ವಾಮಿ ಮತ್ತು ಬಿಂದಿಗಮ್ಮ, ತಾಳೂರು ಆಂಜನೇಯ, ಗಂಜಿಗೆರೆ ವೆಂಕಟರಮಣ ಸ್ವಾಮಿ, ಕಿರಿಗಡಲು ಪಂಚಲಿಂಗೇಶ್ವರ ಮುಂತಾದ ದೇವಾಲಯಗಳು, ವಾಟೆಹೊಳೆ ಜಲಾಶಯ ಇತ್ಯಾದಿಗಳು ಪ್ರವಾಸಯೋಗ್ಯ ಜನಪ್ರಿಯ ತಾಣಗಳು.

............ಮುಂದುವರೆಯುತ್ತದೆ

SIR ವ್ಯವಸ್ಥೆಯನ್ನು ಇನ್ನಷ್ಟು ಚುರುಕು ಗೊಳಿಸುವ ಮೂಲಕ ಇಲ್ಲವೇ ಆಧಾರ್ ಲಿಂಕ್‌ನ ಮೂಲಕ ನಮ್ಮ ದೇಶದ ನಿಜವಾದ ಪ್ರಜಾಪ್ರಭುತ್ವದ ಮೌಲ್ಯವನ್ನು ಭದ್ರಗೊಳಿಸುವಲ್ಲಿ ಯಶಸ್ವಿಯಾಗಬೇಕಿದೆ.

# ದೆಹಲಿ ಬೆಚ್ಚಿಬಿದ್ದಿದೆ



ಡಾ . ಚನ್ನೇಗೌಡ ಯು ಸಿ


ಉದಯವಾಹಿನಿ ಚಿತ್ರ

ಪಶ್ಚಿಮ ಬಂಗಾಳದಲ್ಲಿ SIR ಅಭಿಯಾನವು ಪ್ರತಿದಿನ ಆಘಾತಕಾರಿ ವಿವರಗಳನ್ನು ಹೊರ ಹಾಕುತ್ತಿದೆ. ಬೂತ್ ಲೆವೆಲ್ ಅಧಿಕಾರಿಗಳು ಪ್ರತಿಮನೆಯನ್ನು ತಲುಪುತ್ತಿರುವುದನ್ನು ನೋಡಿ ದೆಹಲಿ ಬೆಚ್ಚಿಬಿದ್ದಿದೆ. ಯಾಕೆಂದ್ರೆ ಒಂದೇ ಫೋಟೋದಿಂದ 17 ಮತದಾರರ ಕಾರ್ಡ್‌ಗಳನ್ನು ರಚಿಸಲಾಗಿದೆ. 2024ರಲ್ಲಿ ಸತ್ತ ಮಹಿಳೆಯರ ಮತವನ್ನು ಚಲಾಯಿಸುತ್ತಿರುವುದು ಕಂಡುಬಂದಿದೆ. 25 ವರ್ಷದ ಯುವಕನೊಬ್ಬ 90 ವರ್ಷದ ಮಹಿಳೆಯ ಫೋಟೋವನ್ನು ಬಳಸಿದ್ದ. ಚುನಾವಣಾ ಆಯೋಗವು ಬಳಸಿದ AI ಮುಖ ಗುರುತಿಸುವಿಕೆ ಪವಾಡವನ್ನು ಮಾಡಿದೆ; ಒಂದೇ ಕ್ಲಿಕ್‌ನಲ್ಲಿ ನೂರಾರು ನಕಲುಗಳನ್ನು ಹಿಡಿಯಲಾಗುತ್ತಿದೆ. ಅಂದ್ರೆ ಒಂದೇ ಫೋಟೋ ಬಳಸಿ ವಿಭಿನ್ನ ಹೆಸರುಗಳಲ್ಲಿ ಮತ್ತು ವಿಭಿನ್ನ ಸ್ಥಳಗಳಲ್ಲಿ ಮತದಾನ ನಡೆಯುತ್ತಿತ್ತು. ಹಕಿಂಪುರ–ತಾರಾಲಿ ಗಡಿಯಲ್ಲಿ ನೂರಾರು ಬಾಂಗ್ಲಾದೇಶಿಗಳು ಅಳುತ್ತಾ ಹಿಂತಿರುಗುತ್ತಿದ್ದಾರೆ, ಹೆಗಲ ಮೇಲೆ ಚೀಲಗಳನ್ನು ಮತ್ತು ರಾತ್ರಿಯಿಡೀ ಮಕ್ಕಳನ್ನು ತಮ್ಮ ಮಡಿಲಲ್ಲಿ ಹೊತ್ತುಕೊಂಡು ಹೋಗುತ್ತಿದ್ದಾರೆ.

> ಇನ್ನಷ್ಟು ಚುರುಕು ಗೊಳಿಸಿ

ಅನೇಕರು ರಹಸ್ಯಮಾರ್ಗಗಳ ಮೂಲಕ ಗಡಿಯುದ್ದಕ್ಕೂ ಪಲಾಯನ ಮಾಡುತ್ತಿದ್ದಾರೆ. ನವೆಂಬರ್ 18ರಂದು ಮಾತ್ರ ಬಿಎಸ್‌ಎಫ್ ಸೈನಿಕರು 500 ಜನರನ್ನು ಹಿಡಿದಿದ್ದರು. ನಿನ್ನೆಯವರೆಗೂ ಕೋಲ್ಕತ್ತಾದಲ್ಲಿ ರಿಕ್ಷಾ ಓಡಿಸುತ್ತಿದ್ದ ಜನರು ಈಗ ದಾದಾ, ಸಾಕು ಸಾಕು. ಈ ಬಾರಿ ಮನೆ ಉತ್ತಮ ಎಂದು ಹೇಳುತ್ತಿದ್ದಾರೆ.

SIR ಅರ್ಜಿಯನ್ನು ಭರ್ತಿ ಮಾಡದಿದ್ದರೆ ಜೈಲಿಗೆ ಹಾಕಲಾಗುವುದು ಎಂಬ ಭಯದಿಂದ, ಬಾಂಗ್ಲಾದೇಶದ ನುಸುಳುಕೋರರು ಬಾಂಗ್ಲಾದೇಶಕ್ಕೆ ಹಿಂತಿರುಗುತ್ತಿದ್ದಾರೆ. SIR ಪಟ್ಟಿಯನ್ನು ಸ್ವಚ್ಛಗೊಳಿಸುವುದಲ್ಲದೆ, ಬಂಗಾಳದ 50 ವರ್ಷಗಳ ಹಳೆಯ ಮತಬ್ಯಾಂಕ್‌ನ ಕೋಳೆಯನ್ನು ಸಹ ತೆಗೆಯುತ್ತಿದ್ದಾರೆ. ಹೆಚ್ಚಿನ ಅಕ್ರಮ ಬಾಂಗ್ಲಾದೇಶಿಗಳು ಡೇರೆಗಳು, ಹಾಳೆಗಳು ಮತ್ತು ಗುಡಿಸಲುಗಳಲ್ಲಿ ವಾಸಿಸುವವರು. ಈಗ ಬಂಗಾಳದ ಗಡಿಪ್ರದೇಶಗಳಿಂದ ಪಲಾಯನ ಮಾಡಿದ್ದಾರೆ, ಹೊರಡಲು ತಯಾರಿ ನಡೆಸುತ್ತಿದ್ದಾರೆ. ಆದ್ದರಿಂದ ಮಮತಾ ಈಗ ಆತಂಕಗೊಂಡಿದ್ದಾಳೆ. ಇದೇ ಪ್ರಕ್ರಿಯೆ ಇತರ 12 ರಾಜ್ಯಗಳಲ್ಲಿ ನಡೆಯುತ್ತಿದೆ, ಬಿಹಾರದಲ್ಲಿ ಪೂರ್ಣಗೊಂಡಿದೆ. ಮುಂದಿನ ಚುನಾವಣೆಯಲ್ಲಿ ಯಾರು ಗೆದ್ದರೂ, ಅಕ್ರಮ ಜನರು NRCಗೆ ಮುಂಚಿತವಾಗಿ ಹೊರಡುತ್ತಾರೆ ಅಥವಾ ತೆಗೆದುಹಾಕಲ್ಪಡುತ್ತಾರೆ ಎಂಬುದು ಖಚಿತ. ಪಶ್ಚಿಮ ಬಂಗಾಳದಲ್ಲಿ SIR ಹೊಸ ಪಟ್ಟಿಯನ್ನು ಅನುಮೋದಿಸಿದ್ದು ಮಾತ್ರವಲ್ಲದೆ 50 ವರ್ಷಗಳಿಂದ ಇದ್ದ ನಕಲಿ ಮತದಾರರ ಸಂಪೂರ್ಣ ಕಾರ್ಖಾನೆಯನ್ನು ಬಹಿರಂಗಪಡಿಸಿದೆ.

ಈಗ ಮೊದಲ ಬಾರಿಗೆ ನಿಜವಾದ ಜನರ ಶಕ್ತಿ ನಕಲಿ ಮತಬ್ಯಾಂಕ್ ಅನ್ನು ಮೀರುತ್ತಿದೆ. SIRನ ಕಾರಣದಿಂದಾಗಿ 50 ವರ್ಷಗಳಿಂದ ಇದ್ದ ಮಮತಾಳ ವಿಶೇಷ ಸಾಕುಪ್ರಾಣಿಗಳು ತಮ್ಮ ಮನೆಗಳಿಗೆ ಹಿಂತಿರುಗುತ್ತಿವೆ. ಈ ಮೇಲ್ಕಂಡ ಎಲ್ಲಾ ಬೆಳವಣಿಗೆಗಳನ್ನು ನೋಡಿದಾಗ ಚುನಾವಣಾ ಆಯೋಗ ಹಾಗೂ ಸಂಬಂಧಪಟ್ಟ ಉನ್ನತ ಮಟ್ಟದ ಆಡಳಿತ ಅಧಿಕಾರಿಗಳ ಮೂಲಕ ಈ SIR ವ್ಯವಸ್ಥೆಯನ್ನು ಇನ್ನಷ್ಟು ಚುರುಕುಗೊಳಿಸುವ ಮೂಲಕ ಇಲ್ಲವೇ ಆಧಾರ್ ಲಿಂಕ್‌ನ ಮೂಲಕ ನಮ್ಮ ದೇಶದ ನಿಜವಾದ ಪ್ರಜಾಪ್ರಭುತ್ವದ ಮೌಲ್ಯವನ್ನು ಭದ್ರಗೊಳಿಸುವಲ್ಲಿ ಯಶಸ್ವಿ ಆಗಬೇಕಿದೆ.

# ಮಹಿಳೆಯರಲ್ಲಿ ಈ ಐದು ಗುಣಗಳಿರೋದು ಮುಖ್ಯ ಅಂತಾರೆ ಚಾಣಕ್ಯರು

ಆಚಾರ್ಯ ಚಾಣಕ್ಯರು ಜೀವನದ ಎಲ್ಲಾ ವಿಷಯಗಳ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ ಮತ್ತು ಚಾಣಕ್ಯ ನೀತಿಯು ಮನೆಗೆ ಸಂತೋಷವನ್ನು ತರುವ, ಸಂಬಂಧವನ್ನು ಚೆನ್ನಾಗಿ ನಿಭಾಯಿಸಿಕೊಂಡು ಹೋಗಲು ಸಾಕಷ್ಟು ಸಲಹೆಯನ್ನು ನೀಡಿದ್ದಾರೆ. ಒಂದು ಕುಟುಂಬ ಸಂತೋಷದಿಂದಿ ಇರಬೇಕಾದರೆ ಆ ಮನೆಯಲ್ಲಿರುವ ಮಹಿಳೆಯರಲ್ಲಿ ಈ ಕೆಲವೊಂದು ಗುಣಗಳು ಇರುವುದು ಬಹಳ ಮುಖ್ಯ ಎನ್ನುತ್ತಾರೆ ಚಾಣಕ್ಯರು. ಅಂತಹ ಗುಣಗಳ ಬಗ್ಗೆ ನಾವಿಲ್ಲಿ ತಿಳಿಯೋಣ.

**ಪ್ರಾಮಾಣಿಕರಾಗಿರುವುದು:** ಪ್ರಾಮಾಣಿಕತೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಮುಖ್ಯ. ಅದರಲ್ಲೂ ಸತ್ಯವಂತ ಮತ್ತು ಪ್ರಾಮಾಣಿಕ ಮಹಿಳೆ ಮನೆಯ ಅತ್ಯಂತ ವಿಶ್ವಾಸಾರ್ಹ ಮೂಲಾಧಾರವಾಗಿರುತ್ತಾಳೆ. ಅವಳು ಯಾವುದೇ ಸಂದರ್ಭಗಳಲ್ಲಿ ಎಂದಿಗೂ ಸುಳ್ಳು ಹೇಳುವುದಿಲ್ಲ ಅಥವಾ ವಂಚನೆಗೆ ಆಶ್ರಯಿಸುವುದಿಲ್ಲ, ಇದು ಇಡೀ ಕುಟುಂಬದೊಳಗೆ ಪರಸ್ಪರ ನಂಬಿಕೆಯನ್ನು ಹೆಚ್ಚಿಸುತ್ತದೆ. ಮನೆಮಂದಿಯೆಲ್ಲಾ ಸತ್ಯ ಹಾಗೂ ಪ್ರಾಮಾಣಿಕರಾಗಿರುವಂತೆ ಆಕೆ ನೋಡಿಕೊಳ್ಳುತ್ತಾಳೆ.

**ತಾಳ್ಮೆ ಹೊಂದಿರುವವರು:** ಚಾಣಕ್ಯ ನೀತಿಯ ಪ್ರಕಾರ, ತಾಳ್ಮೆಯನ್ನು ಹೊಂದಿರುವ ಮಹಿಳೆ ಕಠಿಣ ಸಂದರ್ಭಗಳಲ್ಲಿಯೂ ಸಹ ದೃಢವಾಗಿ ನಿಲ್ಲುತ್ತಾಳೆ ಮತ್ತು ಸವಾಲುಗಳನ್ನು ಧೈರ್ಯದಿಂದ ಎದುರಿಸಲು ಸಿದ್ಧಳಾಗುತ್ತಾಳೆ. ಈ ಗುಣಗಳನ್ನು ಹೊಂದಿರುವ ಮಹಿಳೆ ಆತುರದ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ, ಇದು ಮನೆಯನ್ನು ಶಾಂತಿ ಮತ್ತು ಸಂತೋಷದಿಂದ ಕೂಡಿರುವಂತೆ ಮಾಡುತ್ತದೆ.

**ಬುದ್ಧಿವಂತಿಕೆ:** ಬುದ್ಧಿವಂತ ಮಹಿಳೆ ಚಿಂತನಶೀಲವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾಳೆ. ಸರಿ ಮತ್ತು ತಪ್ಪುಗಳ ನಡುವೆ ವ್ಯತ್ಯಾಸವನ್ನು ತೋರಿಸುತ್ತಾಳೆ. ಯಾವಾಗ ವರ್ತಿಸಬೇಕು ಮತ್ತು ಯಾವಾಗ ವರ್ತಿಸಬಾರದು ಎಂಬುದರ ಬಗ್ಗೆ ಬಲವಾದ ಗ್ರಹಿಕೆಯನ್ನು ಹೊಂದಿರುತ್ತಾಳೆ. ಅವಳು ಎಲ್ಲಾ ಮನೆಯ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತಾಳೆ ಮತ್ತು ಅಗತ್ಯ ಸಮಯದಲ್ಲಿ ಕುಟುಂಬವನ್ನು ಬೆಂಬಲಿಸುತ್ತಾಳೆ. ಸಂಬಂಧಲ್ಲಿ ಬಿರುಕು ಬೀಳದಂತೆ ನೋಡಿಕೊಳ್ಳುತ್ತಾಳೆ.


**ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುವಾಕೆ:** ತನ್ನ ಜವಾಬ್ದಾರಿಗಳನ್ನು ಅತ್ಯಂತ ಗಂಭೀರತೆ ಮತ್ತು ಸಮರ್ಪಣಾಭಾವದಿಂದ ತೆಗೆದುಕೊಳ್ಳುವ, ತನ್ನ ಕುಟುಂಬ, ಮಕ್ಕಳು ಮತ್ತು ಸಂಬಂಧಗಳ ಬಗ್ಗೆ ಗಮನ ಹರಿಸುವ ಮತ್ತು ತನ್ನ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವ ಮಹಿಳೆ. ತನ್ನ ಕುಟುಂಬಕ್ಕೆ ತೊಂದರೆ ಉಂಟುಮಾಡುವ ಯಾವುದೇ ಕ್ರಮವನ್ನು ಎಂದಿಗೂ ತೆಗೆದುಕೊಳ್ಳುವುದಿಲ್ಲ. ಕುಟುಂಬವನ್ನು ಮುನ್ನಡೆಸಲು ಇಂತಹ ಗುಣ ಮಹಿಳೆಯರಲ್ಲಿರುವುದು ಮುಖ್ಯ.

**ಮಧುರವಾದ ಧ್ವನಿ:** ಮಧುರವಾದ ಧ್ವನಿಯನ್ನು ಹೊಂದಿರುವ ಮಹಿಳೆ ಎಲ್ಲರ ಹೃದಯವನ್ನು ಗೆಲ್ಲುತ್ತಾಳೆ. ಅವಳು ಪ್ರತಿಯೊಬ್ಬರಲ್ಲೂ ನಯವಾಗಿ ಮಾತನಾಡುತ್ತಾಳೆ, ಇತರರ ಮಹತ್ವವನ್ನು ಅರ್ಥಮಾಡಿಕೊಳ್ಳುತ್ತಾಳೆ ಮತ್ತು ಗೌರವವನ್ನು ತೋರಿಸುತ್ತಾಳೆ, ಇದು ಮನೆಯೊಳಗಿನ ಸದಸ್ಯರ ನಡುವೆ ಉತ್ತಮ ಭಾವನೆ ಮತ್ತು ಪ್ರೀತಿಯನ್ನು ಹೆಚ್ಚಿಸುತ್ತದೆ.




# ಶೂ ಲೇಸ್ ಕಟ್ಟುವಾಗ, ಕೆಳಗೆ ಬಾಗಿದಾಗ ಉಸಿರಾಡಲು ಕಷ್ಟವಾದರೆ ಅದು ಹೃದಯದ ಸಮಸ್ಯೆ ಇರಬಹುದು

ಇತ್ತೀಚಿನ ದಿನಗಳಲ್ಲಿ ಅನೇಕ ರೋಗಗಳು ವೇಗವಾಗಿ ಹೆಚ್ಚುತ್ತಿವೆ, ಅವುಗಳಲ್ಲಿ ಹೃದಯ ಕಾಯಿಲೆಯೂ ಒಂದು. ಈ ಕಾಯಿಲೆಯ ರೋಗಲಕ್ಷಣ ಗಳನ್ನು ಕೆಲವೊಮ್ಮೆ ಅರ್ಥ ಮಾಡಿಕೊಳ್ಳಲು ಕೂಡ ಕಷ್ಟವಾಗುತ್ತದೆ. ಕೆಲವೊಮ್ಮೆ ತುಂಬಾನೇ ಸೂಕ್ಷ್ಮವಾಗಿರುತ್ತವೆ.ಉದಾಹರಣೆಗೆ ಶೂ ಲೇಸ್ ಕಟ್ಟುಲು ಅಥವಾ ಕೆಳಗಿನಿಂದ ಏನನ್ನಾದರೂ ಎತ್ತಿಕೊಳ್ಳಲು ಬಾಗಿದಾಗ ಉಸಿರಾಟದಲ್ಲಿ ಸಮಸ್ಯೆ ಬರುವುದು ಕೂಡ ಈ ಕಾಯಿಲೆ ಲಕ್ಷಣ



ಎನ್ನಲಾಗುತ್ತದೆ.

ಇದ್ದಕ್ಕಿದಂತೆ ನಮ್ಮ ದೇಹದಲ್ಲಿ ಕಾಣಿಸಿಕೊಳ್ಳುವ ಕೆಲವೊಂದು ಬಗೆಯ ರೋಗಲಕ್ಷಣಗಳ ಬಗ್ಗೆ ಅಷ್ಟೊಂದು ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ, ಪದೇ ಪದೇ ಅಂತಹ ರೋಗಲಕ್ಷಣಗಳನ್ನು ನಿರ್ಲಕ್ಷ್ಯ ಮಾಡುತ್ತಾ ಬರುತ್ತೇವೆ.ಆದರೆ ನಿಮಗೆ ಗೊತ್ತಿರಲಿ, ಕೆಲವೊಮ್ಮೆ ನಾವು ಸಾಮಾನ್ಯವೆಂದು ನಾವಂದುಕೊಂಡಿದ್ದರೂ ವಾಸ್ತವವಾಗಿ ಅದು ಗಂಭೀರ ಕಾಯಿಲೆಯ ಲಕ್ಷಣವಾಗಿರುತ್ತದೆ, ಪ್ರಮುಖವಾಗಿ ಹೃದಯದ ಆರೋಗ್ಯಕ್ಕೆ ಸಂಬಂಧ ಪಟ್ಟ ತಳ್ಳಿಹಾಕುವ ಹಾಗಿಲ್ಲ. ಹೀಗಾಗಿ ಆರೋಗ್ಯದಲ್ಲಿ ಸಡನ್ ಆಗಿ ಏರುಪೇರು ಉಂಟಾಗಿ ಯಾವುದೇ ರೀತಿಯಲ್ಲಿ ರೋಗಲಕ್ಷಣಗಳು ಕಾಣಿಸಿ ಕೊಂಡರೆ, ಆರಂಭಿಕ ಹಂತಗಳಲ್ಲಿ ಗಮನಿಸಿ ಕೂಡಲೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಂಡರೆ, ಮುಂದೆ ಆಗಬಹುದಾದ ಗಂಭೀರ ಸಮಸ್ಯೆಗಳಿಂದ ಪಾರಾಗಬಹುದಾಗಿದೆ.



**ಬಗ್ಗಿದಾಗ ಉಸಿರಾಟದಲ್ಲಿ ಸಮಸ್ಯೆ ಕಾಣಿಸಿಕೊಳ್ಳುವುದು ಯಾಕೆ:** ಕೆಲವೊಮ್ಮೆ ಹೃದಯಕ್ಕೆ ಸಂಬಂಧಪಟ್ಟ ರೋಗಲಕ್ಷಣಗಳು ಹೇಗೆಲ್ಲಾ ಕಾಡುತ್ತವೆ ಎಂದರೆ, ಶೂ ಲೇಸ್ ಕಟ್ಟಲು ಬಾಗಿದಾಗ ಅಥವಾ ಕೆಳಗಿನಿಂದ ಏನನ್ನಾದರೂ ಎತ್ತಿಕೊಳ್ಳಲು ಬಾಗಿದಾಗ ಇದ್ದಕ್ಕಿದ್ದಂತೆ ಉಸಿರಾಟದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳಲು ಶುರುವಾದರೆ ಇದನ್ನು ನಿರ್ಲಕ್ಷ್ಯ ಮಾಡಲು ಹೋಗಬಾರದು. ಯಾಕೆಂದ್ರೆ ಈ ರೀತಿ ಆಗುವುದು ಕೂಡ, ಹೃದಯಕ್ಕೆ ಸಂಬಂಧಪಟ್ಟ ರೋಗ ಲಕ್ಷಣಗಳು ಎನ್ನುವುದನ್ನು ಮರೆಯ ಬಾರದು. ನಮ್ಮಲ್ಲಿ ಬಹುತೇಕರು ಇವೆಲಾ ಸಾಮಾನ್ಯ ಸಮಸ್ಯೆ ಇರಬಹುದು ಅಥವಾ ವಯಸ್ಸಾದ ಪರಿಣಾಮವಾಗಿ ಹೀಗೆಲ್ಲಾ ಆಗುತ್ತಿರಬಹುದು ಎಂದು ಸುಮ್ಮನೆ ಇದ್ದು ಬಿಡುತ್ತಾರೆ ಆದರೆ ಹೃದ್ರೋಗ ತಜ್ಞರು ಈಗ ಇದನ್ನು ಗಂಭೀರ ಎಚ್ಚರಿಕೆಯ ಸಂಕೇತವೆಂದು ಪರಿಗಣಿಸುತ್ತಿದ್ದಾರೆ. ಈ ಸಣ್ಣ ಅಸ್ವಸ್ಥತೆಯು ಪ್ರಮುಖ ಹೃದಯ ಸಮಸ್ಯೆಯ ಆರಂಭಿಕ ಚಿಹ್ನೆಯಾಗಿರಬಹುದು.

**ಈ ಬಗ್ಗೆ ಹೃದ್ರೋಗ ತಜ್ಞರು ಏನು ಹೇಳ್ತಾರೆ?:** ಅಮೆರಿಕದ ಖ್ಯಾತ ಹೃದ್ರೋಗ ತಜ್ಞ ಡಾ. ಡಿಮಿಟ್ರಿ ಯಾರನೋವ್, ಬಾಗುವಾಗ ಉಸಿರಾಟದ ತೊಂದರೆ ಅಥವಾ ಬೆಂಡೋಪ್ನಿಯಾ ಹೃದಯದ ಆರೋಗ್ಯ ಕ್ಷೀಣಿಸುತ್ತಿರುವ ಬಗ್ಗೆ ಎಚ್ಚರಿಕೆ ನೀಡುವ ಸೂಚನೆಯಾಗಿರಬಹುದು ಎಂದು ಹೇಳಿದ್ದಾರೆ.


ಎದೆ ನೋವು ಅಥವಾ ಊತದಂತಹ ಸಾಮಾನ್ಯ ಹೃದಯ ವೈಫಲ್ಯದ ಲಕ್ಷಣಗಳ ಮೊದಲು ಈ ಸಮಸ್ಯೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ.

**ಯಾಕೆ ಈ ರೀತಿ ಆಗುತ್ತದೆ:** ದೇಹವು ಬಾಗಿದಾಗ, ಹೊಟ್ಟೆ ಮತ್ತು ಕಾಲುಗಳಿಂದ ರಕ್ತವು ವೇಗವಾಗಿ ಹೃದಯಕ್ಕೆ ಮರಳುತ್ತದೆ. ಹೃದಯವು ಈಗಾಗಲೇ ದುರ್ಬಲವಾಗಿದ್ದರೆ ಮತ್ತು ಕಳಪೆ ಪಂಪಿಂಗ್ ಸಾಮರ್ಥ್ಯವನ್ನು ಹೊಂದಿದ್ದರೆ, ಈ ಹೆಚ್ಚುವರಿ ಒತ್ತಡವು ತ್ವರಿತವಾಗಿ ಉಸಿರಾಟದ ತೊಂದರೆಗೆ ಕಾರಣ ಆಗಬಹುದು. ಈ ಸಣ್ಣ ಸಂಕೇತಗಳು ಸಾಮಾನ್ಯವಾಗಿ ಜನರು ಕಡೆಗಣಿಸುವ ಹೃದಯದಿಂದ ಬರುವ ಸಂದೇಶಗಳಾಗಿವೆ ಎಂದು ಡಾ. ಯಾರನೋವ್ ವಿವರಿಸುತ್ತಾರೆ.

> **ಬೆಂಡೋಪ್ನಿಯಾ ಎಂದರೇನು?**
> **ಬೆಂಡೋಪ್ನಿಯಾ ಎಂದರೆ ಬಾಗಿದ ಕೆಲವೇ ಸೆಕೆಂಡುಗಳಲ್ಲಿ ಉಸಿರಾಟದ ತೊಂದರೆ ಉಂಟಾಗುವ ಸ್ಥಿತಿ. ಶೂಗಳನ್ನು ಹಾಕುವಾಗ, ಸಾಕ್ಸ್ ಹಾಕುವಾಗ ಅಥವಾ ನೆಲದಿಂದ ಏನನ್ನಾದರೂ ಎತ್ತುವಾಗ ಇದನ್ನು ಅನುಭವಿಸಬಹುದು. ವ್ಯಕ್ತಿಯು ನೇರವಾಗಿ ನಿಂತ ತಕ್ಷಣ ಅಸ್ವಸ್ಥತೆ ಕಡಿಮೆಯಾಗುತ್ತದೆ. ಈ ಮಾದರಿಯು ಹೃದಯವು ಹೆಚ್ಚಿದ ಒತ್ತಡವನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ಸೂಚಿಸುತ್ತದೆ.**

**ಯಾವಾಗಿನಿಂದ ಈ ಸಮಸ್ಯೆ ಬರಲು ಶುರುವಾಗಿದೆ:** ಬೆಂಡೋಪಿನಾ ಮೊದಲು 2014ರ ಅಧ್ಯಯನದಲ್ಲಿ ಕಂಡುಬಂದಿತು. ಹೃದಯ ವೈಫಲ್ಯದಿಂದ ಬಳಲುತ್ತಿರುವ 102 ರೋಗಿಗಳಲ್ಲಿ, ಸುಮಾರು 28 ಪ್ರತಿಶತದಷ್ಟು ಜನರು ಬಾಗುವಾಗ ಉಸಿರಾಟದ ತೊಂದರೆ ಅನುಭವಿಸಿದರು. ಸಂಶೋಧನೆಗಳು ಹೆಚ್ಚಿನ ಹೃದಯ ತುಂಬುವ ಒತ್ತಡವನ್ನು ಬಹಿರಂಗ ಪಡಿಸಿದವು, ಅಂದರೆ ಹೃದಯವು ರಕ್ತದ ಪ್ರಮಾಣದಲ್ಲಿನ ಹಠಾತ್ ಹೆಚ್ಚಳವನ್ನು ನಿಭಾಯಿಸಲು ಸಾಧ್ಯವಾಗಲಿಲ್ಲ.

**ಅಧ್ಯಾಯನದಲ್ಲಿ ಕಂಡು ಬಂದಿರುವ ಮಾಹಿತಿ:** ನಂತರದ ಅಧ್ಯಯನಗಳು ಇದೇ ರೀತಿಯ ಮಾದರಿಯನ್ನು ತೋರಿಸಿವೆ. ಬೆಂಡೋಪಿನಾ ತೆಗೆದುಕೊಳ್ಳುತ್ತಿದ್ದ ರೋಗಿಗಳು ಮುಂದಿನ ಮೂರು ತಿಂಗಳುಗಳಲ್ಲಿ ಹೃದ್ರೋಗಕ್ಕಾಗಿ ಆಸ್ಪತ್ರೆಗೆ ದಾಖಲಾಗುವ ಅಪಾಯವನ್ನು ಗಮನಾರ್ಹವಾಗಿ ಹೆಚ್ಚಿಸಿದ್ದಾರೆ ಎಂದು ಒಂದು ಅಧ್ಯಯನವು ಕಂಡುಹಿಡಿದಿದೆ. ಈ ಲಕ್ಷಣವು ಕೇವಲ ಅನಾನುಕೂಲತೆ ಮಾತ್ರವಲ್ಲ, ಭವಿಷ್ಯದ ಅಪಾಯದ ಸಂಕೇತವೂ ಆಗಿದೆ.



## ಯಾವುದೇ ಯೋಜನೆಯನ್ನು ಎರಡು ವರ್ಷಗಳ ಒಳಗೆ ಪೂರ್ಣಗೊಳಿಸದಿದ್ದರೆ ಅನುದಾನ ಹಿಂದಕ್ಕೆ ಪಡೆಯಲಾಗುತ್ತದೆ

# ಬಳಕೆಯಾಗದ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ: ಆಕ್ರೋಶ

• ಉದಯವಾಹಿನಿ ಬೆಳಗಾವಿ

ಸಂಸದರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಕೈಗೊಂಡ ಕಾಮಗಾರಿಗಳನ್ನು ಜಿಲ್ಲೆಯಲ್ಲಿ ವಿವಿಧ ಇಲಾಖೆಗಳು 2013-14ನೇ ಸಾಲಿನಿಂದ ಸರಿಯಾಗಿ ಅನುಷ್ಠಾನಗೊಳಿಸಿಲ್ಲ ಎಂದು ಜನಪ್ರತಿನಿಧಿಗಳು ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಇಲ್ಲಿನ ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಈ ವಿಚಾರ ಪ್ರಸ್ತಾಪಿಸಿದ ಜನಪ್ರತಿನಿಧಿಗಳು, 'ಹಲವು ಯೋಜನೆಗಳಿಗೆ ಹಂಚಿಕೆಯಾದ ಅನುದಾನ ಬಳಕೆಯಾಗದೆ ರದ್ದಾಗಿದೆ. ಸರ್ಕಾರದ ಮಾರ್ಗಸೂಚಿಯಂತೆ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ಕೈಗೊಂಡ ಯಾವುದೇ ಯೋಜನೆಯನ್ನು ಎರಡು ವರ್ಷಗಳ ಒಳಗೆ ಪೂರ್ಣಗೊಳಿಸದಿದ್ದರೆ ಅನುದಾನ ಹಿಂದಕ್ಕೆ ಪಡೆಯಲಾಗುತ್ತದೆ ಎಂದರು.

ವಿಧಾನ ಪರಿಷತ್ ಸದಸ್ಯ ನಾಗರಾಜು ಯಾದವ, 'ಜಿಲ್ಲೆಯ ಒಂದು ವಸತಿ ಶಾಲೆಯಲ್ಲಿ ಡಿಜಿಟಲ್ ಗ್ರಂಥಾಲಯ ನಿರ್ಮಾಣಕ್ಕೆ ಅನುದಾನ ಕೊಡುವುದಾಗಿ ಭರವಸೆ ಕೊಟ್ಟಿದ್ದೆ. ಆದರೆ, ಸಮಾಜ ಕಲ್ಯಾಣ ಇಲಾಖೆಯವರು ಇದಕ್ಕೆ ಪೂರಕವಾಗಿ ಕ್ರಮ ವಹಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ಬಿಡುಗಡೆಯಾದ ಹಣವನ್ನು ಸಂಬಂಧಿತ ಇಲಾಖೆಯವರು ಸರಿಯಾದ ಸಮಯಕ್ಕೆ ಬಳಸಬೇಕು. ಇಲ್ಲದಿದ್ದರೆ ಹಣ ವಾಪಸ್ ಹೋಗುತ್ತದೆ. ಉದ್ದೇಶಿತ ಕಾಮಗಾರಿಯೂ ನಡೆಯುವುದಿಲ್ಲ ಎಂದರು. ವಿಧಾನ ಪರಿಷತ್ ಸದಸ್ಯ ಸಾಬಣ್ಣ ತಳವಾರ, ಸರಿಯಾದ ದಾಖಲೆಗಳು ಇಲ್ಲದ ಕಾರಣ, ನಗರದಲ್ಲಿ ಶಾಲೆಗಳ ಅಭಿವೃದ್ಧಿಗೆ ನೀಡಲಾಗಿದ್ದ ರೂ. 50 ಲಕ್ಷ ಅನುದಾನ ರದ್ದಾಗಿದೆ' ಎಂದು ದೂರಿದರು.

ಆಗ 2013-14ನೇ ಸಾಲಿನಿಂದ ವಿವಿಧ ಯೋಜನೆಗಳಿಗೆ ಹಂಚಿಕೆ ಮಾಡಲಾದ ಹಣ ಬಳಕೆಯಾಗದೆ ಉಳಿದಿದೆ. ಹೊಸ ಮಾರ್ಗಸೂಚಿ ಪ್ರಕಾರ, ಎರಡು ವರ್ಷಗಳಿಗಿಂತ ಹೆಚ್ಚು ವಿಳಂಬವಾದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಿಲ್ಲ' ಎಂದು ಅಧಿಕಾರಿಗಳು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಸತೀಶ ಜಾರಕಿಹೊಳಿ, ನಿಧಿ ಬಳಕೆ ವಿಚಾರವಾಗಿ ಸಂಬಂಧಿತ ಸಚಿವರು ಮತ್ತು ಸರ್ಕಾರದೊಂದಿಗೆ ಅಧಿಕಾರಿಗಳು ಚರ್ಚಿಸಬೇಕು. ಎರಡು ವರ್ಷಗಳಿಗಿಂತ ಹೆಚ್ಚು ವಿಳಂಬವಾಗಿರುವ ಕಾಮಗಾರಿಗಳ ಪಟ್ಟಿ ಸಿದ್ಧಪಡಿಸಿ, ವಿಧಾನಮಂಡಲ ಚಳಿಗಾಲದ ಅಧಿವೇಶನದಲ್ಲಿ ಚರ್ಚಿಸಬೇಕು' ಎಂದು ನಿರ್ದೇಶನ ಕೊಟ್ಟರು. ಕೆಐಎಡಿಬಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳದ ಕಾರಣ ಎಂಎಸ್‌ಎಂಇ ಪಾರ್ಕ್‌ಗಾಗಿ ಕೇಂದ್ರ ಬಿಡುಗಡೆ ಮಾಡಿದ ರೂ. 252 ಕೋಟಿ ವಾಪಸ್ ಹೋಗಬಹುದು' ಎಂದು ಕಡಾಡಿ ಆತಂಕ ವ್ಯಕ್ತಪಡಿಸಿದರು. ಆ ಹಣ ಬಳಸದ ಕಾರಣ ಮೊದಲೇ ಹಿಂದಕ್ಕೆ ಪಡೆಯಲಾಗಿತ್ತು. ನಾವು ಪ್ರಯತ್ನಿಸಿ ಮತ್ತೆ ತಂದಿದ್ದೇವೆ. ಕೆಐಎಡಿಬಿ ಈ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎಂದು ತಿಳಿಸಿದರು.

**ಘಟಕ ಸ್ಥಾಪನೆಗೆ ಕ್ರಮ ವಹಿಸಿ:** 'ಬೆಳಗಾವಿ ನಗರದ ವ್ಯಾಪ್ತಿ ದೊಡ್ಡದಾಗಿದೆ. ಇಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸುವ ದೃಷ್ಟಿಯಿಂದ ಹೊಸದಾಗಿ ಎರಡು ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಕ್ರಮ ವಹಿಸಬೇಕು' ಎಂದು ಸತೀಶ ಜಾರಕಿಹೊಳಿ ಸೂಚಿಸಿದರು. ಶಾಸಕ ಗಣೇಶ ಹುಕ್ಕೇರಿ, ಕೃಷಿಹೊಂಡಗಳಲ್ಲಿ ಬಿದ್ದು ಕೆಲವರು ಸಾವನ್ನಪ್ಪಿದ ಪ್ರಕರಣ ವರದಿಯಾಗುತ್ತಿವೆ. ಇದನ್ನು ತಪ್ಪಿಸಲು ಕೃಷಿ ಹೊಂಡಗಳಿಗೆ ತಂತಿಬೇಲಿ ಅಳವಡಿಸಬೇಕು' ಎಂದರು.

ಸಂಸದೆ ಪ್ರಿಯಾಂಕಾ ಜಾರಕಿಹೊಳಿ, ಶಾಸಕ ಬಾಬಾಸಾಹೇಬ ಪಾಟೀಲ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ವಿನಯ ನಾವಲಗಟ್ಟಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ನಗರ ಪೊಲೀಸ್ ಕಮಿಷನರ್ ಭೂಷಣ ಬೊರಸೆ ಇತರರಿದ್ದರು.

**ಇಎಸ್‌ಐ ಆಸ್ಪತ್ರೆ: ವಾಗ್ವಾದ:** ಬೆಳಗಾವಿಯಲ್ಲಿ ಇಎಸ್‌ಐ ಆಸ್ಪತ್ರೆ ನಿರ್ಮಾಣಕ್ಕೆ ಸಂಬಂಧಿಸಿ, ಈರಣ್ಣಾ ಕಡಾಡಿ ಮತ್ತು ಶಾಸಕ ಆಸಿಫ್ ಸೇಠ್ ಮಧ್ಯೆ ವಾಗ್ವಾದ ನಡೆಯಿತು. ಕಾರ್ಮಿಕರು ಮತ್ತು ಅವರ ಕುಟುಂಬಗಳಿಗೆ ಅನುಕೂಲವಾಗುವಂತೆ ಆಸ್ಪತ್ರೆಯನ್ನು ಕಾರ್ಯರೂಪಕ್ಕೆ ತರಬೇಕು ಎಂದು ಸೇಠ್ ಒತ್ತಾಯಿಸಿದರು.

ಈಗಿನ ಕಟ್ಟಡ ದುರ್ಬಲವಾಗಿರುವುದರಿಂದ ಅದನ್ನು ಕೆಡವಿ ಕೇಂದ್ರದಿಂದ ಹೊಸ ಆಸ್ಪತ್ರೆಯನ್ನು ನಿರ್ಮಿಸಲಾಗುವುದು. ಇದಕ್ಕಾಗಿ ರೂ.100 ಕೋಟಿ ಬಿಡುಗಡೆ ಮಾಡಲಾಗಿದ್ದು, ಹೊಸ ಉಪಕರಣಗಳನ್ನು ಅಳವಡಿಸಲಾಗುವುದು ಎಂದು ಕಡಾಡಿ ಹೇಳಿದರು.


ಉದಯವಾಹಿನಿ ಚಿತ್ರ

> ರಾಯಬಾಗ ತಾಲ್ಲೂಕು ಆಸ್ಪತ್ರೆಗೆ ತುರ್ತಾಗಿ ಬೇಕಿರುವ ತಜ್ಞ ವೈದ್ಯರ ನೇಮಕಕ್ಕೆ ಕ್ರಮ ವಹಿಸಬೇಕು. -ದುರ್ಯೋದನ ಐಹೊಳೆ, ಶಾಸಕ

> ಸವಳು-ಜವಳು ಭೂಮಿ ಅಭಿವೃದ್ಧಿಪಡಿಸಲು ರಾಜ್ಯ ಸರ್ಕಾರದ ಅನುದಾನದೊಂದಿಗೆ ಕೇಂದ್ರದಿಂದಲೂ ಹೆಚ್ಚುವರಿ ಅನುದಾನ ಪಡೆಯಲು ಅಧಿಕಾರಿಗಳು ಪ್ರಸ್ತಾವ ಸಲ್ಲಿಸಬೇಕು. -ರಾಜು ಕಾಗೆ, ಶಾಸಕ

**ಅಧಿಕಾರಿಗಳ ವಿರುದ್ಧ ವಾಗ್ದಾಳಿ**

> ಹೆಸರು, ಉದ್ದು ಖರೀದಿ ಕೇಂದ್ರಗಳು ಸರಿಯಾಗಿ ಕೆಲಸ ಮಾಡಬೇಕು. ಇಲ್ಲದಿದ್ದರೆ ಸಂಬಂಧಿತ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು. -ಮಹಾಂತೇಶ ಕೌಜಲಗಿ, ಶಾಸಕ

## ಅತಿವೃಷ್ಟಿಯಿಂದ ಹಾಳಾದ ಬೆಳೆಗಳಿಗೆ ರಾಜ್ಯ ಸರ್ಕಾರ ಹೆಚ್ಚುವರಿ ಪರಿಹಾರ ನೀಡಲಿ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನಾದ್ಯಂತ ಈ ವರ್ಷ ಹೆಚ್ಚುಮಳೆಯಾಗಿ ಅತಿವೃಷ್ಟಿಯಿಂದ ರೈತರು ಬೆಳೆದ ಉದ್ದು, ಹೆಸರು, ತೊಗರಿಬೇಳೆ,ಸೋಯಾ,ಸಂಪೂರ್ಣ ನಷ್ಟವಾಗಿದೆ ಎಸ್‌ಡಿಆರ್‌ಎಫ್ ಮತ್ತು ಎನ್‌ಡಿಆರ್‌ಎಫ್ ನಿಯಮಕ್ಕೆ ಅನುಸಾರ ಮತ್ತು ರಾಜ್ಯ ಸರ್ಕಾರ ಹೆಚ್ಚುವರಿ ಪರಿಹಾರ ಕೂಡಲೇ ನೀಡಬೇಕು ಎಂದು ಕ್ಷೇತ್ರದ ಶಾಸಕ ಡಾ.ಅವಿನಾಶ ಜಾಧವ ಒತ್ತಾಯಿಸಿದರು.

ನಗರದ ಪ್ರಜಾಸೌಧ ಎದುರು ಭಾರತೀಯ ಜನತಾ ಪಾರ್ಟಿ ವತಿಯಿಂದ ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿಪತ್ರ ಸಲ್ಲಿಸಿ ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಪ್ರಣಾಳಿಕೆಯಲ್ಲಿ ಹೇಳಿದಂತೆ ಹೈನುಗಾರಿಕೆಗೆ ಪ್ರತಿ ಲೀಟರ್ ಪ್ರೋತ್ಸಾಹ ಧನ ಸಹಾಯ ನೀಡಬೇಕು,ಬಾಕಿ ಉಳಿಸಿಕೊಂಡ 620ಕೋಟಿ ರೂ.ಪ್ರೋತ್ಸಾಹ ಧನ ಕೂಡಲೇ ಬಿಡುಗಡೆಗೊಳಿಸಬೇಕು. ರಾಜ್ಯದಲ್ಲಿ ಖರೀದಿ ಕೇಂದ್ರಗಳು ಪ್ರಾರಂಭಿಸಿ,ಕಬ್ಬಿಗೆ ಸೂಕ್ತ ಬೆಂಬಲ ಬೆಲೆ ನೀಡಿ, ರೈತರಿಗೆ ಬೆಳೆಹಾನಿ ಹೆಚ್ಚುವರಿ ಪರಿಹಾರ ನೀಡಿ, ಮೆಕ್ಕೆಜೋಳ ರೈತರಿಗೆ ಬೆಂಬಲ ಬೆಲೆ ನೀಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದನಂತರ ರೈತರ ಸಮಸ್ಯೆ ಕೇಳುತ್ತಿಲ್ಲಾ ರೈತರ ಸಮಸ್ಯೆಗಳಿಗೆ ಪರಿಹರಿಸಿ ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮಂಡಲದ ಪದಾಧಿಕಾರಿಗಳು, ಕಾರ್ಯಕರ್ತರು,ರೈತರು ಅನೇಕರಿದ್ದರು.


ಉದಯವಾಹಿನಿ ಚಿತ್ರ

**ಗ್ರೇಡ್2 ತಹಶೀಲ್ದಾರ್‌ಗೆ ಮನವಿ ಪತ್ರ**

**ಶಾಸಕ ಡಾ.ಅವಿನಾಶ ಜಾಧವ ಮತ್ತು ಪಕ್ಷದ ಅಧ್ಯಕ್ಷ ವಿಜಯಕುಮಾರ ಚೇಂಗಟಾ ಮನವಿಪತ್ರಕ್ಕೆ ರುಜು ಮಾಡದೆ ಇರುವ ಮನವಿ ಪತ್ರವನ್ನು ಗ್ರೇಡ್2 ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಸಲ್ಲಿಸಿದರು, ಶಾಸಕ ಡಾ.ಅವಿನಾಶ ಜಾಧವ ಮತ್ತು ಅಧ್ಯಕ್ಷ ವಿಜಯಕುಮಾರ ಚೇಂಗಟಾ ರುಜು ಇಲ್ಲದೆ ಹೋದರೂ ಸಹ ಬಿಜೆಪಿ ಕಾರ್ಯಕರ್ತ ಹಣಮಂತ ಭೋವಿ ಎಂಬುವವರು ಮಾತ್ರ ರುಜು ಮಾಡಿದ್ದು ತಹಶೀಲ್ ಕಛೇರಿಯ ಸಿಬ್ಬಂದಿಯವರು ರಿಸೀವ್ಡ್ ನೀಡಿದ್ದಾರೆ. ರುಜು ಇಲ್ಲದ ಮನವಿಪತ್ರ ನೋಡಿದ ಕೆಲವರು ನಾಮಕೆವಾಸ್ತೆ ಪ್ರತಿಭಟನೆ ನಡೆಸಿ ರಾಜಕೀಯ ಬ್ಯಾಳಿ ಬೆಳೆಸಿಕೊಳ್ಳುತ್ತಿದ್ದಾರೆಂದು ಕೆಲವರು ಮಾತನಾಡಿಕೊಳ್ಳುತ್ತಿದ್ದರು.**

## ವೃತ್ತಿಯಲ್ಲಿ ಸ್ಥಿರತೆ ಕಾಪಾಡಲು ಕ್ರೀಡೆ ಸಹಕಾರಿ

• ಉದಯವಾಹಿನಿ ಕಲಬುರಗಿ

ಕ್ರೀಡಾಕೂಟ ಕೇವಲ ಸೋಲು-ಗೆಲುವಿಗೆ ಸೀಮಿತವಾಗಿಲ್ಲ. ಅದು ಆರೋಗ್ಯದ ದೃಷ್ಟಿಯಿಂದಲು ಮತ್ತು ವೃತ್ತಿಯಲ್ಲಿ ಸ್ಥಿರತೆ ಕಾಪಾಡಲು ಸಹ ಸಹಕಾರಿಯಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಹೇಳಿದರು.

ಇಲ್ಲಿನ ಪೊಲೀಸ್ ಪರೇಡ್ ಮೈದಾನದಲ್ಲಿ ಜಿಲ್ಲಾ ಪೊಲೀಸ್ ಕ್ರೀಡಾಕೂಟ-2025ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದಿನದ 24 ಗಂಟೆ ಕೆಲಸ ಮಾಡುವ ಪೊಲೀಸ್ ಸಿಬ್ಬಂದಿಗಳು ಒತ್ತಡದ ಮಧ್ಯೆಯು ಕ್ರೀಡಾಕೂಟದಲ್ಲಿ ಹುಮ್ಮಸ್ಸಿನಿಂದ ಭಾಗವಹಿಸಿರುವುದು ನಿಜಕ್ಕೂ ಸಂತೋಷದ ವಿಷಯ. ಸರ್ಕಾರಿ ನೌಕರರು, ಪೊಲೀಸರ ಮೇಲೆ ಜನರ ನಿರೀಕ್ಷೆ ಹೆಚ್ಚಿದೆ. ಅದರಂತೆ ಕಾರ್ಯನಿರ್ವಹಿಸಲು ದೈಹಿಕ ಮತ್ತು ಮಾನಸಿಕವಾಗಿ ಸಾರ್ವಜನಿಕರ ಸೇವಕರಾದ ನಾವು ಸದಾ ಸದೃಢವಾಗಿ ರಬೇಕಿದೆ ಎಂದರು.

ಒತ್ತಡದ ಮಧ್ಯೆ ಪೊಲೀಸ್ ಸಿಬ್ಬಂದಿಗಳು ಕ್ರೀಡಾ ತರಬೇತಿ ಪಡೆದು, ಕ್ರೀಡಾಕೂಟದಲ್ಲಿ ಭಾಗವಹಿಸುತ್ತಿರುವುದು ಅತ್ಯುತ್ತಮ ನಡೆಯಾಗಿದೆ. ಕ್ರೀಡಾಸ್ಫೂರ್ತಿಯೊಂದಿಗೆ ಆಟವಾಡಿ, ಗೆಲುವು ಸಾಧಿಸಬೇಕು. ವೃತ್ತಿ ಜೀವನದ ಜತೆಗೆ ವೈಯಕ್ತಿಕ ಜೀವನದತ್ತಲೂ ಗಮನ ಹರಿಸಬೇಕು. ಪೊಲೀಸರ ಕುಟುಂಬದವರಿಗೆ ಆಟೋಟ ಸ್ಪರ್ಧೆ ಏರ್ಪಡಿಸಿರುವುದು ಸ್ವಾಗತಾರ್ಹ ಎಂದ ಅವರು, ಕ್ರೀಡಾಕೂಟದಲ್ಲಿರುವ ಖುಷಿ, ಹುಮ್ಮಸ್ಸು ಜೀವನಪೂರ್ತಿ ಸದಾ ಹೀಗೆ ಇರಲಿ ಎಂದು ಶುಭ ಹಾರೈಸಿದರು.

ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ್ ಸೇರಿದಂತೆ ಇತರೆ ಹಿರಿಯ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು. ಶಹಾಬಾದ ಡಿ.ವೈ.ಎಸ್.ಪಿ ಶಂಕರಗೌಡ ಪಾಟೀಲ ಅವರು ವಂದಿಸಿದರು. ಕಳೆದ ಆರು ವರ್ಷದ ಕ್ರೀಡಾಕೂಟದಲ್ಲಿ ಸರ್ವಶ್ರೇಷ್ಠ ಕ್ರೀಡಾಪಟು ಉದಯಕುಮಾರ ಕ್ರೀಡಾಜ್ಯೋತಿ ಬೆಳಗಿಸಿದರು.


ಉದಯವಾಹಿನಿ ಚಿತ್ರ

## ಹತ್ತಿ ಖರೀದಿಯಲ್ಲಿ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಟ

• ಉದಯವಾಹಿನಿ ವಿಜಯಪುರ

ಸಿಸಿಐ ಅಧಿಕಾರಿ ಸಿದ್ಧಲಿಂಗ ಮದರಕಂಡಿ ಅವರು ರೈತರಿಗೆ ಏಕ ವಚನದಲ್ಲಿ ಮಾತನಾಡುತ್ತ ಅನ್ಯಾಯ ಎಸಗಿ ಹತ್ತಿ ಸರಿ ಇಲ್ಲಾ ಎಂದು ಮತ್ತು ಕಪಾಸ ಸೈಟ್ ಅಲ್ಲಿ ಹತ್ತಿ ಎಂದು ನಮೂದಿಸಿಲ್ಲ ನಿಮ್ಮ ಹತ್ತಿ ತೆಗೆದುಕೊಳ್ಳುವುದಿಲ್ಲ ಎಂದು ಅಹಂಕಾರದಿಂದ ಮಾತನಾಡಿ ರೈತರಿಗೆ ಜೋರು ಧ್ವನಿಯಲ್ಲಿ ಮಾತನಾಡಿ ಅವಮಾನ ಮಾಡಿರುವ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದರು

ಹತ್ತಿ ಖರೀದಿ ಕೇಂದ್ರದಲ್ಲಿ ಆಗುತ್ತಿರುವ ಮೋಸ ಮಾಡುತ್ತಿರುವುದಾಗಿ ಹಲವಾರು ರೈತರು ಅಧಿಕಾರಿಯ ವಿರುದ್ಧ ದೂರುಗಳನ್ನು ನೀಡಿರುವ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಹತ್ತಿ ಸುರಿವಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ರೈತರೊಂದಿಗೆ ಹೋರಾಟ ಮಾಡಲಾಯಿತು.

ಸತತವಾಗಿ 3 ಘಂಟೆ ಹೋರಾಟದ ನಂತರ ಸಿಸಿಐ ಅಧಿಕಾರಿ ಸಿದ್ಧಲಿಂಗ ಮದರಕಂಡಿ ಅವರನ್ನು ಕರೆಸಿ ಜಿಲ್ಲಾಧಿಕಾರಿ, ಜಿಲ್ಲಾ ಜಂಟಿ ಕೃಷಿ ಅಧಿಕಾರಿ, ಎ. ಪಿ. ಎಂ. ಸಿ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ಅವನಿಂದ ರೈತರಿಗೆ ತಪಾಯಿತು ಎಂದು ಕೇಳಿಸಿ, ಯಾವುದೇ ರೈತರಿಗೆ ಅನ್ಯಾಯ ಮಾಡಬಾರದು ಹಾಗೂ ಮರ್ಯಾದೆ ಕೊಟ್ಟು ಮಾತನಾಡಬೇಕು, ರೈತರ ಜೀವನದ ಜೊತೆ ಚಲ್ಲಾಟ ಮಾಡಬಾರದು ಎಂದು ಎಚ್ಚರಿಕೆ ನೀಡಲಾಯಿತು,

ನೂರಾರು ಕಿ. ಮೀ ದೂರದಿಂದ ರೈತರು ಕಷ್ಟ ಪಟ್ಟು ರಾತ್ರಿ ಪೂರ್ತಿ ನಿದ್ದೆಗೆಟ್ಟು ಹೆಚ್ಚಿನ ಕೂಲಿ ಆಳುಗಳನ್ನು ಹಚ್ಚಿ ಹತ್ತಿ ತೆಗೆದುಕೊಂಡು ಬಂದಿರುತ್ತಾರೆ, ಅವರಿಗೆ ವಿನಾ ಕಾರಣ ತೊಂದರೆ ಕೊಡಬಾರದು, ತೂಕದಲ್ಲಿ ಮೋಸ ಮಾಡದೇ ಬೆಂಬಲ ಬೆಲೆಯೊಂದಿಗೆ ಖರೀದಿ ಮಾಡಬೇಕು ಎಂದು ರೈತ ಮುಖಂಡರು ಅಗ್ರಹಿಸಿದರು

ಎಲ್ಲಾ ಅಧಿಕಾರಿಗಳು ರೈತರೊಂದಿಗೆ ಸಹಕರಿಸಿ ಸಮಸ್ಯೆ ಬಗೆಹರೆಸುವುದಾಗಿ ಹೇಳಿದಾಗ ಹೋರಾಟ ಹಿಂಪಡೆಯಲಾಯಿತು.

ಈ ವೇಳೆ ಮುಖಂಡರಾದ ರಾಜ್ಯ ಉಪಾಧ್ಯಕ್ಷರಾದ ಕಲ್ಲು ಸೊನ್ನದ, ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಸೇರಿದಂತೆ ಹಲವಾರು ರೈತರು ಉಪಸ್ಥಿತರಿದ್ದರು,

## ವಿಶ್ವದಲ್ಲೇ ಭಾರತ ಸಂವಿಧಾನ ಶ್ರೇಷ್ಠವಾದುದ್ದು, ಸಂವಿಧಾನ ಅರಿತು ಸಮಾನತೆಯಿಂದ ಬಾಳಬೇಕು: ನ್ಯಾಯಾಧೀಶ

• ಉದಯವಾಹಿನಿ, ಚಿಂಚೋಳಿ

ವಿಶ್ವದಲ್ಲೇ ಭಾರತ ಸಂವಿಧಾನ ಶ್ರೇಷ್ಠವಾದುದ್ದು,ಸಂವಿಧಾನ ಅರಿತು ಎಲ್ಲರೂ ಸಮಾನತೆಯಿಂದ ಬಾಳಬೇಕು ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ದತ್ತುಕುಮಾರ ಜವಳಕರ್ ಹೇಳಿದರು. ಪಟ್ಟಣದ ಚಂದಾಪೂರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲ್ಲೂಕಾ ಕಾನೂನು ಸೇವಾ ಸಮಿತಿ,ನ್ಯಾಯಾವಾದಿಗಳ ಸಂಘ, ತಾಲ್ಲೂಕಾಡಳಿತ, ಶಿಕ್ಷಣ ಇಲಾಖೆ, ಪೋಲಿಸ್ ಇಲಾಖೆ, ಕಾಲೇಜು ಶಿಕ್ಷಣ, ಆರೋಗ್ಯ ಇಲಾಖೆ, ಅರಣ್ಯ ಇಲಾಖೆ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಸಂವಿಧಾನ ಸಮರ್ಪಣಾ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಾವೆಲ್ಲರೂ ಸಂವಿಧಾನವನ್ನು ಪಾಲನೆ ಮಾಡಿದಾಗ ಮಾತ್ರ ಅದಕ್ಕೆ ಜೀವ ಬರುತ್ತದೆ. ಶ್ರೀಲಂಕಾ,ಅಫ್ಘಾನಿಸ್ತಾನ, ಪಾಕ್ತಿಸಾನ,ಬಾಂಗ್ಲಾದೇಶಗಳ ಸಂವಿಧಾನ ಗಟ್ಟಿಯಿಲ್ಲ ಅನೇಕ ಬಾರಿ ಸಂವಿಧಾನ ಬದಲಾಯಿಸಿದ್ದಾರೆ, ಆದರೆ ಭಾರತ ದೇಶದ ಸಂವಿಧಾನ ಗಟ್ಟಿಯಾಗಿದೆ, ಸೂರ್ಯ ಚಂದ್ರ ಇರುವವರೆಗೆ ಭಾರತ ದೇಶದ ಸಂವಿಧಾನ ಅತ್ಯಂತ ಬಲಿಷ್ಠ ಸಂವಿಧಾನವಿದೆ. ದೇಶವನ್ನು ಸ್ವಚ್ಛವಾಗಿಡಬೇಕು, ಸರ್ಕಾರಿ ಆಸ್ತಿಗಳನ್ನು ನಾವೆಲ್ಲರೂ ಸಂರಕ್ಷಿಸಬೇಕು ಎಂದರು. ಶಿಕ್ಷಣ ಸಂಯೋಜಕ ಅಶೋಕ ಹೂವಿನಭಾವಿ ಮಾತನಾಡಿ ಸಂವಿಧಾನ ಅಂದರೆ ಅಂಬೇಡ್ಕರ್, ಅಂಬೇಡ್ಕರ್ ಅಂದರೆ ಸಂವಿಧಾನ, ಆರು ಸಾವಿರಕ್ಕಿಂತ ಹೆಚ್ಚು ಜಾತಿಗಳು ಹೊಂದಿರುವ ದೇಶದಲ್ಲಿ ಸಂವಿಧಾನ ಬರೆಯಲು ಬಹಳಷ್ಟು ಕಷ್ಟವಿತ್ತು ಆದರೆ ಅಂಬೇಡ್ಕರ್ ಎಲ್ಲಾ ಜಾತಿ ಜನಾಂಗಕ್ಕೆ ಸಮಾನತೆ ಹಕ್ಕು ನೀಡಿ ಅವರ ಅನಾರೋಗ್ಯವನ್ನು ಲೆಕ್ಕಿಸದೆ ಹಗಲಿರುಳು ಶ್ರಮಿಸಿ ಸಂವಿಧಾನ ಬರೆದು ದೇಶಕ್ಕೆ ನೀಡಿದ್ದಾರೆ,ಸಂವಿಧಾನದಿಂದಲ್ಲೇ ಇಂದು ಭಾರತ ದೇಶದಾದ್ಯಂತ ನಾವೆಲ್ಲರೂ ಸಂವಿಧಾನ ಅಡಿಯಲ್ಲಿ ಬದುಕು ನಡೆಸುತ್ತಿದ್ದೇವೆ ಎಂದರು. ಸಹಾಯಕ ಸರಕಾರಿ ಅಭಿಯೋಜಕ ಶಾಂತಕುಮಾರ ಪಾಟೀಲ,ಗ್ರೇಡ್2 ತಹಶೀಲ್ದಾರ್ ವೆಂಕಟೇಶ ದುಗ್ಗನ್, ತಾಪಂ.ಇಓ ಸಂತೋಷ ಚವ್ಹಾಣ, ಬಿಇಓ ವಿ.ಲಕ್ಷ್ಮಯ್ಯ,ಟಿಹೆಚ್‌ಓ ಮಹ್ಮದ್ ಗಫಾರ್,ವಕೀಲರ ಸಂಘದ ಅಧ್ಯಕ್ಷ ಶಶಿಕಾಂತ ಅಡಕಿ,ಸಮಾಜ ಕಲ್ಯಾಣ ಅಧಿಕಾರಿ ಶೃತಿ, ಸಿಡಿಪಿಓ ಸವಿತಾ ಮಡಿವಾಳ, ಬಿಸಿಎಂ ಅಧಿಕಾರಿ ಅನುಸೋಯಾ ಚವ್ಹಾಣ,ಮುಖ್ಯಾಧಿಕಾರಿ ನಿಂಗಮ್ಮ ಬಿರಾದಾರ, ದೇವೀಂದ್ರಪ್ಪ ಜಾಬೀನ್, ಸಂಜುಕುಮಾರ ಮೇತ್ರಿ, ವಾಹೇದ್,ಜೀವನ್,ಸೇರಿದಂತೆ ಅನೇಕರಿದ್ದರು.


ಉದಯವಾಹಿನಿ ಚಿತ್ರ

> ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹಗಲಿರುಳು ಶ್ರಮಿಸಿ ಸಂವಿಧಾನ ಬರೆದು ದೇಶಕ್ಕೆ ಸಂವಿಧಾನ ನೀಡಿ,ದೇಶಕ್ಕೆ ಸರ್ವ ಜನಾಂಗಕ್ಕೆ ಸಮಾನತೆ ಹಕ್ಕು ನೀಡಿ ಮಹಿಳೆಯರಿಗೂ ಎಲ್ಲಾ ಕ್ಷೇತ್ರದಲ್ಲಿ ಸಮಾನತೆ ಹಕ್ಕು ನೀಡಿದರು,ಮತದಾನದ ಹಕ್ಕು ಸಹ ಸಂವಿಧಾನದ ಮೂಲಕ ಶ್ರೀಮಂತರಿಗೂ ಬಡವರಿಗೂ ಒಂದೇ ಓಟು ಮತದಾನದ ಹಕ್ಕು ನೀಡಿದರು. -ಸುಬ್ಬಣ್ಣ ಜಮಖಂಡಿ, ತಹಸೀಲ್ದಾರ್

## ದಾಂಡೇಲಿ ನಗರ ಅಭಿವೃದ್ಧಿಗೆ ರೂ.11 ಕೋಟಿ ಅನುದಾನ: ಶಾಸಕ ಆರ್.ವಿ.ದೇಶಪಾಂಡೆ

• ಉದಯವಾಹಿನಿ, ದಾಂಡೇಲಿ

ದಾಂಡೇಲಿ ಮತ್ತು ಜೊಯಿಡಾ ಪ್ರವಾಸೋದ್ಯಮ ಕೇಂದ್ರಗಳಾಗಿ ಗುರುತಿಸಿಕೊಂಡಿದ್ದು, ಈ ಭಾಗಗಳಲ್ಲಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಬೇಕಿದೆ. ಈ ಹಿನ್ನೆಲೆಯಲ್ಲಿ ದಾಂಡೇಲಿ ನಗರಕ್ಕೆ ಶಾಸಕರ ಅನುದಾನದಡಿ ರೂ.11 ಕೋಟಿ ತರಲಾಗಿದೆ' ಎಂದು ರಾಜ್ಯ ಆಡಳಿತ ಸುಧಾರಣಾ ಅಯೋಗದ ಅಧ್ಯಕ್ಷ ಹಾಗೂ ಶಾಸಕ ಆರ್.ವಿ.ದೇಶಪಾಂಡೆ ಹೇಳಿದರು.

ನಗರಸಭೆ ಕಾರ್ಯಾಲಯದಲ್ಲಿ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಸಭೆ ನಡೆಸಿ ನಂತರ ಮಾತನಾಡಿದ ಅವರು, ಒಟ್ಟು 26 ವಿವಿಧ ಕಾಮಗಾರಿಗಳಿಗೆ ರೂ.11 ಕೋಟಿ ಬಿಡುಗಡೆ ಮಾಡಿದ್ದೇನೆ, ಇದರಲ್ಲಿ ಮುಖ್ಯವಾಗಿ ರಸ್ತೆ ಕಾಮಗಾರಿ ಸೇರಿದಂತೆ ಇನ್ನಷ್ಟು ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುತ್ತೇನೆ' ಎಂದರು.

ದಾಂಡೇಲಿಗೆ ಮೂಲ ಸೌಕರ್ಯಗಳ ಕೊರತೆ ಸಾಕಷ್ಟಿತ್ತು, ತಾಲ್ಲೂಕಿಗೆ ಬೇಕಾದ ಅಗತ್ಯ ಕಚೇರಿ ಕಟ್ಟಡಗಳ ನಿರ್ಮಾಣವನ್ನು ಹಂತ ಹಂತವಾಗಿ ಕೈಗೊಳ್ಳಲಾಗಿದೆ. ಈಗಾಗಲೇ ತಾಲ್ಲೂಕು ಆಡಳಿತ ಸೌಧ, ಆರ್.ಟಿ.ಒ ಕಚೇರಿ ಸೇರಿದಂತೆ ಅನೇಕ ಅಭಿವೃದ್ಧಿ ಕೆಲಸಗಳಾಗಿವೆ. ನಗರದ ಮುಖ್ಯ ರಸ್ತೆಗಳ ನಿರ್ಮಾಣ, ವಿದ್ಯುದೀಕರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. ನಗರದ ಅಭಿವೃದ್ಧಿಗಾಗಿ ಸರ್ಕಾರದಿಂದ ಸಾಕಷ್ಟು ಹಣ ತರಲಾಗಿದೆ' ಎಂದು ತಿಳಿಸಿದರು.

ನೀವು ಬೇರೆ ಊರಿನಿಂದ ವರ್ಗಾವಣೆಗೊಂಡು ಇಲ್ಲಿಗೆ ಬಂದಿರುತ್ತೀರಿ, ಪುನಃ ವರ್ಗಾವಣೆಯಾದಾಗ ಜನರು ನಿಮ್ಮನ್ನು ಸ್ಮರಿಸಿಕೊಳ್ಳುವ ರೀತಿಯಲ್ಲಿ ನಿಮ್ಮ ಕಾರ್ಯ ಇರಬೇಕು' ಎಂದು ಬ್ಯಾಂಕ್ ವ್ಯವಸ್ಥಾಪಕರಿಗೆ ತಿಳಿಸಿದರು. ಆಶ್ರಯ ಯೋಜನೆ ಫಲಾನುಭವಿಗಳಿಗೆ ಬ್ಯಾಂಕ್‌ಗಳು ಸಾಲ ನೀಡಲು ನಿರಾಕರಿಸುತ್ತಿದ್ದೀರಿ, ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಜನರಿಗೆ ಸಾಲ ಕೊಡಬಾರದು ಎನ್ನುವ ನಿಯಮ ನಿಮ್ಮಲ್ಲಿ ಇದ್ದರೆ ನನಗೆ ತೋರಿಸಿ ಎಂದಾಗ ಬ್ಯಾಂಕ್ ಅಧಿಕಾರಿಗಳ ಬಳಿ ಉತ್ತರವಿರಲಿಲ್ಲ.


ಉದಯವಾಹಿನಿ ಚಿತ್ರ

# ಶಿಥಿಲಗೊಂಡ ತಹಶೀಲ್ದಾರ್ ಕಚೇರಿ: ಜೀವಭಯದಲ್ಲಿಯೇ ಸಿಬ್ಬಂದಿ ನಿತ್ಯ ಕೆಲಸ

## • ನಮ್ಮ ಸುರಕ್ಷತೆಗೆ ತಲೆಗೆ ಹೆಲ್ಮೆಟ್ ಹಾಕಿಕೊಂಡು ಕೆಲಸ ಮಾಡಬೇಕಾದ ಸ್ಥಿತಿ ಬಂದಿದೆ' ಎಂದು ಬೇಸರ

• ಉದಯವಾಹಿನಿ ಕೊಪ್ಪಳ

ನಿತ್ಯ ಒಂದಿಲ್ಲೊಂದು ಕೆಲಸಕ್ಕಾಗಿ ತಾಲ್ಲೂಕು ವ್ಯಾಪ್ತಿಯ ಜನ ಇಲ್ಲಿನ ತಹಶೀಲ್ದಾರ್ ಕಚೇರಿ ಹೊಂದಿರುವ ಕಟ್ಟಡಕ್ಕೆ ಭೇಟಿ ನೀಡುತ್ತಿದ್ದು ಜೀವಭಯದಲ್ಲಿಯೇ ಓಡಾಡುವಂತಾಗಿದೆ. ಆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರು ಹಾಗೂ ಸಿಬ್ಬಂದಿಗಂತೂ ಇಂದು ಸುರಕ್ಷಿತವಾಗಿ ಮನೆಗೆ ಹೋದರೆ ಸಾಕು' ಎನ್ನುವ ಆತಂಕ ವ್ಯಾಪಕವಾಗಿ ಕಾಡುತ್ತಿದೆ.

ಜಿಲ್ಲಾ ಕೇಂದ್ರದಲ್ಲಿ ಮಧ್ಯಭಾಗದಲ್ಲಿರುವ ಕಟ್ಟಡದಲ್ಲಿ ಭೂಮಿ ಕೇಂದ್ರ, ನವಶಕ್ತಿ ಅಂಗವಿಕಲರ ಅಭಿವೃದ್ಧಿ ಸಂಸ್ಥೆ. ಪಡಸಾಲೆ, ಆಧಾರ್ ಕೇಂದ್ರ, ತಾಲ್ಲೂಕು ಆಹಾರ ಇಲಾಖೆ, ಜಿಲ್ಲಾ ತರಬೇತಿ ಸಂಸ್ಥೆ. ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ, ತಾಲ್ಲೂಕು ಚುನಾವಣಾ ವಿಭಾಗ ಸೇರಿದಂತೆ ಅನೇಕ ಇಲಾಖೆಗಳು, ಸಂಘಗಳು ಇವೆ. ಇವುಗಳಲ್ಲಿ ಬಹುತೇಕ ಇಲಾಖೆಗಳಲ್ಲಿ ಸಾರ್ವಜನಿಕರಿಗೆ ನಿತ್ಯ ಒಂದಿಲ್ಲೊಂದು ಕೆಲಸ ಸಹಜವಾಗಿ ಇದ್ದೇ ಇರುತ್ತದೆ. ಈ ಕಟ್ಟಡದಲ್ಲಿ ಎಲ್ಲೆಂದರಲ್ಲಿ ಕಾಂಕ್ರೀಟ್ ಪದರು ಕಳಚಿದ, ಆರ್‌ಸಿಸಿಗೆ ಬಳಸಿದ ಕಬ್ಬಿಣದ ಸರಳುಗಳು ಎದ್ದಿರುವ ಚಿತ್ರಣ ಕಾಣುವುದು ಸಾಮಾನ್ಯವಾಗಿದೆ. ಕಟ್ಟಡದ ಬಹುತೇಕ ಭಾಗ ಶಿಥಿಲಗೊಂಡಿದ್ದು, ಆರ್‌ಸಿಸಿ ಪದರು ಮೈ ಮೇಲೆ ಬೀಳುವ ಆತಂಕದಿಂದಾಗಿ ಕೆಲವು ಕೊಠಡಿಗಳಿಗೆ ಕಾಯಂ ಆಗಿ ಬೀಗ ಹಾಕಲಾಗಿದೆ. ಶೌಚಾಲಯಕ್ಕೆ ತೆರಳುವ ಗೋಡೆಯ ಮೇಲಿನ ಸಿಮೆಂಟ್ ಕಳಚಿ ಹೋಗಿದೆ. ಇನ್ನು ಶೌಚಾಲಯದಲ್ಲಿನ ಪರಿಸ್ಥಿತಿ ಪರಿಶೀಲಿಸಿದರೆ ಗಬ್ಬೆದ್ದು ನಾರುತ್ತಿದೆ. ಕೈ ತೊಳೆಯುವ ಸಿಂಕ್‌ಗೆ ನಲ್ಲಿನ ಸಂಪರ್ಕವೇ ಇಲ್ಲದಂತಾಗಿದ್ದೂ ಸಿಂಕ್ ಪಾನ್ ಹಾಗೂ ಗುಟ್ಕಾ ತಿಂದು ಉಗುಳಿದ್ದರಿಂದ ಕೆಂಪುಮಯವಾಗಿದೆ.

ಅಲ್ಲಲ್ಲಿ ವಿದ್ಯುತ್ ತಂತಿಗಳು ಮುಕ್ತವಾಗಿ ಕಾಣುತ್ತವೆ. ವಿದ್ಯುತ್ ತಂತಿಗಳು, ಸ್ವಿಚ್‌ಗಳು ಅಪಾಯಕಾರಿಯಾಗಿವೆ.

ಶೌಚಾಲಯದ ಅಕ್ಕಪಕ್ಕದಲ್ಲಿರುವ ಕೊಠಡಿಗಳಲ್ಲಿ ಕೆಲಸ ಮಾಡುವ ಸಿಬ್ಬಂದಿ ಕೆಟ್ಟ ವಾಸನೆ ಮೂಗಿಗೆ ರಾಚಿಕೊಂಡೇ ದಿನಗಳನ್ನು ದೂಡಬೇಕಾದ ಸಂಕಷ್ಟ ಸ್ಥಿತಿ ನಿರ್ಮಾಣವಾಗಿದೆ. ಕಟ್ಟಡದ ಹೊರಭಾಗದಲ್ಲಿ ಒಂದೊಂದೇ ಕಲ್ಲುಗಳು ಬೀಳುತ್ತಿದ್ದು ನೌಕರರು ಹಾಗೂ ಸಾರ್ವಜನಿಕರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ತಹಶೀಲ್ದಾರ್ ಕಟ್ಟಡದಲ್ಲಿ ಅವ್ಯವಸ್ಥೆ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕಟ್ಟಡದ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುವ ನೌಕರರು, ಕಟ್ಟಡ ಸಂಪೂರ್ಣ ಶಿಥಿಲವಾಗಿದ್ದು ಯಾವಾಗ ಏನು ಅನಾಹುತ ಸಂಭವಿಸುತ್ತದೆ ಎನ್ನುವುದು ಗೊತ್ತಿಲ್ಲ. ಕಟ್ಟಡ ಇಷ್ಟೊಂದು ಶಿಥಿಲಗೊಳ್ಳುವ ಮೊದಲೇ ಸ್ಥಳಾಂತರ ಮಾಡಿದ್ದರೆ ನೆಮ್ಮದಿಯಿಂದ ಕೆಲಸ ಮಾಡಬಹುದು. ಈಗ ನಮ್ಮ ಸುರಕ್ಷತೆಗೆ ತಲೆಗೆ ಹೆಲ್ಮೆಟ್ ಹಾಕಿಕೊಂಡು ಕೆಲಸ ಮಾಡಬೇಕಾದ ಸ್ಥಿತಿ ಬಂದಿದೆ' ಎಂದು ಬೇಸರ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

**ಮನೆಗೆ ಹೋದರೆ ಸಾಕು ಎನ್ನುವ ಆತಂಕ**


ಉದಯವಾಹಿನಿ ಚಿತ್ರ

### ಜಿಲ್ಲೆ ರಚನೆಗೂ ಮೊದಲು ನಿರ್ಮಾಣವಾಗಿದ್ದ ಕಟ್ಟಡ

**ರಾಯಚೂರಿನಿಂದ ಕೊಪ್ಪಳ ಪ್ರತ್ಯೇಕ ಜಿಲ್ಲೆಯಾಗುವ ಮೊದಲೇ 1994ರಲ್ಲಿ ಮೊದಲ ಹಂತದ ಕಟ್ಟಡ ಕಾಮಗಾರಿ ಪೂರ್ಣಗೊಂಡಿತ್ತು. ಆಗಿನ ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕು ಸಂಕೀರ್ಣದ ಉದ್ಘಾಟನೆಯನ್ನು ಅಂದಿನ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ ಅವರು ನೆರವೇರಿಸಿದ್ದರು. ಮಲ್ಲಿಕಾರ್ಜುನ ಬಿ. ದಿವಟರ ಕೊಪ್ಪಳದ ಶಾಸಕರಾಗಿದ್ದರೆ ಬಸವರಾಜ ಪಾಟೀಲ ಅನ್ವರಿ ಸಂಸದರಾಗಿದ್ದರು. ಬಳಿಕ 1997ರಲ್ಲಿ ಕೊಪ್ಪಳ ಪ್ರತ್ಯೇಕ ಜಿಲ್ಲೆಯಾದ ಬಳಿಕ ಈಗಿನ ತಹಶೀಲ್ದಾರ್ ಕಟ್ಟಡವನ್ನು ನೂತನ ಜಿಲ್ಲೆಯ ಜಿಲ್ಲಾಧಿಕಾರಿ ಕಾರ್ಯಾಲಯವನ್ನಾಗಿ ಮಾಡಲಾಗಿತ್ತು. ಅದೇ ವರ್ಷ ಆಗಸ್ಟ್ 24ರಂದು ನಡೆದಿದ್ದ ಕಾರ್ಯಕ್ರಮದಲ್ಲಿ ಆಗಿನ ಮುಖ್ಯಮಂತ್ರಿ ದಿವಂಗತ ಜೆ.ಎಚ್. ಪಟೇಲ್ ಕಾರ್ಯಾಲಯ ಉದ್ಘಾಟಿಸಿದ್ದರು. ಆಗ ಸಂಗಣ್ಣ ಕರಡಿ ಕೊಪ್ಪಳದ ಶಾಸಕರಾಗಿದ್ದರೆ ಬಸವರಾಜ ರಾಯರಡ್ಡಿ ಸಂಸದರಾಗಿದ್ದರು.**


ಉದಯವಾಹಿನಿ

ಪ್ರಾದೇಶಿಕ

ಭಾನುವಾರ
30 ನವೆಂಬರ್ 2025




## ಮಿನಿ ನ್ಯೂಸ್

### ಪರಭಾಷೆಯ ವಿರುದ್ಧ ಹೋರಾಡಲು ಕರೆ

• ಉದಯವಾಹಿನಿ ಬೀದರ

ತಾಲ್ಲೂಕಿನ ಗೌಸಪುರ ಗಡಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಚಿಂತನೆ, ಕನ್ನಡ ಭಾಷೆಯ ಜಾಗೃತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕ ಅಶ್ವಿನಿ ಶಿಕ್ಷಣ ಸಂಸ್ಥೆ ಯಾಕತಪೂರ ಅವರ ವತಿಯಿಂದ ವಿಜೃಂಭಣೆಯಿಂದ ಆಯೋಜಿಸಲಾಯಿತು. ಕನ್ನಡ ತಾಯಿ ಭುವನೇಶ್ವರಿ ದೇವಿಗೆ ಪೂಜಾಪೂರ್ವಕವಾಗಿ ಹೂಮಾಲೆ ಸಮರ್ಪಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಉದ್ಘಾಟಕರಾಗಿ ಭಾಗವಹಿಸಿದ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷೆ ಶ್ರೀಮತಿ ಗೀತಾ ಅವರು ಮಾತನಾಡಿ, ಗಡಿ ಭಾಗದ ಮಕ್ಕಳಿಗೆ ಕನ್ನಡ ಕಲಿಸುವ ಶಿಕ್ಷಕರನ್ನು ವಿಶೇಷವಾಗಿ ಆಯ್ಕೆ ಮಾಡಿ ನಿರಂತರ ತರಗತಿಗಳನ್ನು ನಡೆಸಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮುಖ್ಯಗುರು ಶ್ರೀಮತಿ ಕಲಾವತಿ ಮಾತನಾಡಿ, ಈ ಪ್ರದೇಶದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಬಳಸಲ್ಪಡುತ್ತವೆ. ಆದರೆ ಕನ್ನಡ ಸಾವಿರಾರು ವರ್ಷಗಳ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಅನೇಕ ಕವಿಗಳು, ವಾಸ್ತುಶಿಲ್ಪಿಗಳು, ರಾಜವಂಶಗಳು ಕನ್ನಡ ನಾಡಿಗೆ ವೈಭವ ತುಂಬಿವೆ. ಕನ್ನಡಕ್ಕೆ ತನ್ನದೇ ಆದ ಅಸ್ತಿತ್ವವಿದೆ ಎಂದು ನೆನಪಿಸಿದರು. ಕಾರ್ಯಕ್ರಮದಲ್ಲಿ ಯುವ ಮುಖಂಡ ಮಾಂತೇಶ್ ಸೋಲಾಪುರೆ, ಶಿಕ್ಷಣಾಭಿಮಾನಿಗಳು ದಶರಥ, ಶಶಿಕಾಂತ ಸೇರಿದಂತೆ ಗ್ರಾಮಸ್ಥರು, ಮಕ್ಕಳು ಮತ್ತು ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.

### ಫಲಿತಾಂಶ ಹೆಚ್ಚಳ, ಶಿಕ್ಷಕರಿಗೆ ಪ್ರೋತ್ಸಾಹ ಧನ : ಮಧು ಬಂಗಾರಪ್ಪ

• ಉದಯವಾಹಿನಿ ಶಿವಮೊಗ್ಗ

ಎಸ್ಸೆಸ್ಸೆಲ್ಸಿಯಲ್ಲಿ ಅತ್ಯುತ್ತಮ ಫಲಿತಾಂಶ ತಂದುಕೊಡುವ ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಪ್ರೋತ್ಸಾಹಧನ (ಇನ್ಸೆಂಟಿವ್) ನೀಡಲು ಸರ್ಕಾರ ನಿರ್ಧರಿಸಿದೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಎಸ್.ಬಂಗಾರಪ್ಪ ಹೇಳಿದರು. ನಗರದಲ್ಲಿ ಶನಿವಾರ ಬೆಂಗಳೂರು ವಿಭಾಗದ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಪ್ರೌಢಶಾಲಾ ಶಿಕ್ಷಕರಿಗೆ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣಾ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಫಲಿತಾಂಶ ಕುಸಿತ ಕಂಡ ಶಾಲೆಗಳಿಗೆ ಶಿಕ್ಷೆ ನೀಡುವ ವ್ಯವಸ್ಥೆ ಇದೆ. ಆದರೆ ಫಲಿತಾಂಶ ಹೆಚ್ಚಳಕ್ಕೆ ಕಾರಣರಾದವರ ಗುರುತಿಸುವ ವ್ಯವಸ್ಥೆ ಜಾರಿಗೆ ತರುತ್ತಿದ್ದು, ಪ್ರೋತ್ಸಾಹಧನ ವಿತರಣೆಗೆ ಅಗತ್ಯ ನಿಯಮಾವಳಿ ರೂಪಿಸಲಾಗುವುದು ಎಂದರು. ಸರ್ಕಾರಿ ಶಾಲೆಗಳ ಫಲಿತಾಂಶ ಹೆಚ್ಚಳದ ಹಾದಿಯಲ್ಲಿ ಆಯಾ ಶಾಲಾಭಿವೃದ್ಧಿ ಸಮಿತಿಯವರನ್ನು ಒಳಗೊಳ್ಳುವ ಕಾರ್ಯ ಆಗಬೇಕಿದೆ. ಕಡಿಮೆ ಫಲಿತಾಂಶ ಬರುವ ಶಾಲೆಗಳ ಗುರುತಿಸಿ ಫಲಿತಾಂಶ ಹೆಚ್ಚಳಕ್ಕೆ ಶಾಲಾಭಿವೃದ್ಧಿ ಸಮಿತಿಯವರನ್ನು ಪ್ರೋತ್ಸಾಹಿಸುವ ಕೆಲಸ ಮಾಡುವಂತೆ ಹೇಳಿದರು.

### ನಕಲಿ ವೈದ್ಯನ ಕ್ಲಿನಿಕ್ ಸೀಜ್

• ಉದಯವಾಹಿನಿ ಬೀದರ

ಹುಮನಾಬಾದ ತಾಲ್ಲೂಕಿನ ಕನಕಟ್ಟಾ ಗ್ರಾಮದಲ್ಲಿ ವೈದ್ಯಕೀಯ ಪದವಿ ಪಡೆಯದೇ ಕ್ಲಿನಿಕ್ ನಡೆಸುತ್ತಿದ್ದ ಮ್ರಿನಲ್ ಕಾಂತಿ ಗೋಲ್ದಾರ್ ಎನ್ನುವ ಬಂಗಾಳಿ ನಕಲಿ ವೈದ್ಯನ ಕ್ಲಿನಿಕ್‌ನ್ನು (ನ.28) ಆರೋಗ್ಯ ಅಧಿಕಾರಿಗಳು ಸೀಜ್ ಮಾಡಿ ಔಷಧಿಗಳನ್ನು ವಶಪಡಿಸಿಕೊಂಡಿದ್ದಾರೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ದಾಳಿ ಸಂದರ್ಭದಲ್ಲಿ ಹುಮನಾಬಾದ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಡಾ. ಸಿದ್ದೇಶ್ವರ, ಜಿಲ್ಲಾ ಕೆ.ಪಿ.ಎಂ.ಇ ನೋಡಲ್ ಅಧಿಕಾರಿ ಡಾ,ದಿಲೀಪ್ ಡೋಂಗ್ರೆ, ಕೆ.ಪಿ.ಎಂ.ಇ ವಿಷಯನಿರ್ವಾಹಕರು ಮಹೇಶ್ವರರೆಡ್ಡಿ ಹಾಗೂ ಸಿಬ್ಬಂದಿ ಸುನೀಲ ರಾಠೋಡ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ನಿವೇಶನ ಅಕ್ರಮ ಹಂಚಿಕೆ ಆರೋಪ: ಗ್ರಾಮ ಪಂಚಾಯಿತಿ ಎದುರು ಪ್ರತಿಭಟನೆ

• ಉದಯವಾಹಿನಿ ಶಿಕಾರಿಪುರ

ತಾಲ್ಲೂಕಿನ ಈಸೂರು ಗ್ರಾಮದ ತಾವರೆಹೊಂಡ ಕೆರೆ ಮುಚ್ಚಿ, ಅಲ್ಲಿ ನಿವೇಶನ ನಿರ್ಮಿಸಿ ಪ್ರಭಾವಿಗಳಿಗೆ ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ' ಎಂದು ಆರೋಪಿಸಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಕಚೇರಿ ಎದುರು ಅಹೋರಾತ್ರಿ ಪ್ರತಿಭಟನೆ ಆರಂಭಿಸಿದ್ದಾರೆ. ತಾವರೆಹೊಂಡ ಕೆರೆ ಒತ್ತುವರಿ ಮಾಡುವ ಮೂಲಕ 10ಕ್ಕೂ ಹೆಚ್ಚು ನಿವೇಶನ ನಿರ್ಮಿಸಲಾಗಿದೆ. ಅದನ್ನು ಒಂದೇ ಕುಟುಂಬದ ಐದು ಜನ ಸೇರಿ ಮಹಿಳಾ ಸಮಾಜ, ತಮಿಳು ಸಮಾಜ ಹಾಗೂ ಪ್ರಭಾವಿಗಳಿಗೆ ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ. ಹಿಂದಿನ ಪಿಡಿಒ ಬೇರೆಡೆ ವರ್ಗಾವಣೆಗೊಂಡಿದ್ದು, ಅವರು ತೆರಳುವ ಮುನ್ನ ಗ್ರಾ ಪಂ ಉಪಾಧ್ಯಕ್ಷರೊಂದಿಗೆ ಸೇರಿ ಅಕ್ರಮ ನಡೆಸಿದ್ದಾರೆ. ಈ ಕುರಿತು ತನಿಖೆ ನಡೆಸಬೇಕು ಎಂದು ಮುಖಂಡ ಸಂತೋಷ್ ಒತ್ತಾಯಿಸಿದರು. ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಇಒ, ಹಿಂದಿನ ಪಿಡಿಒ ಸ್ಥಳಕ್ಕೆ ಆಗಮಿಸಬೇಕು. ಅಧಿಕಾರಿಗಳು ಸ್ಥಳದಲ್ಲೇ ಕಡತ ಪರಿಶೀಲಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲಿಯವರೆಗೂ ಪ್ರತಿಭಟನೆ ಮುಂದುವರಿಸಲಾಗುವುದು ಎಂದು ಮುಖಂಡ ಬೇಗೂರು ಶಿವಪ್ಪ ಹೇಳಿದರು.

### ನಗರ, ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಿ: ಶಾಸಕ ಜಿ. ಜನಾರ್ದನ ರೆಡ್ಡಿ

• ಉದಯವಾಹಿನಿ ಗಂಗಾವತಿ

ಗ್ರಾಮ ಸ್ವರಾಜ್ ಕಲ್ಪನೆಯಂತೆ ಹಳ್ಳಿಯಿಂದ ಯೋಜನೆ ರೂಪುಗೊಳ್ಳಲು ವಾರ್ಡ್ ಸಭೆ ಮತ್ತು ಗ್ರಾಮಸಭೆ ಪೂರಕವಾಗಿದ್ದು, ಅಧಿಕಾರಿಗಳು ಆದ್ಯತೆ ಮೇರೆಗೆ ಕಾಮಗಾರಿಗಳು ಆಯ್ಕೆ ಮಾಡಿಕೊಳ್ಳಬೇಕು ಎಂದು ಶಾಸಕ ಜಿ. ಜನಾರ್ದನರೆಡ್ಡಿ ಹೇಳಿದರು. ನಗರದ ತಾ.ಪಂ ಮಂಥನ ಸಭಾಂಗಣದಲ್ಲಿ ನಡೆದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಗ್ರಾಮಸಭೆಯಲ್ಲಿ ಬಂದ ಕಾಮಗಾರಿಗಳ ಪ್ರಸ್ತಾವನೆ ಟಿಪಿಡಿಸಿ ಸಭೆಯಲ್ಲಿ ಚರ್ಚಿಸಿ ಜಿಲ್ಲಾ ಸಮಿತಿಗೆ ಕಳುಹಿಸಲಾಗುವುದು ಎಂದು ತಿಳಿಸಿದರು. ಈಗಾಗಲೇ 2026-27ನೇ ಸಾಲಿಗೆ ಅಂದಾಜು ರೂ. 200 ಕೋಟಿ ಮೊತ್ತದ ಕಾಮಗಾರಿಗಳ ಪ್ರಸ್ತಾವನೆ ತಯಾರಿಸಿದ್ದು, ಸಭೆಯಲ್ಲಿ ಚರ್ಚಿಸಿ ಆದ್ಯತೀಕರಿಸಿ ಜಿಲ್ಲಾ ಸಮಿತಿಗೆ ಅನುಮೋದನೆಗೆ ಕಳುಹಿಸಲಾಗುವುದು. ಅಧಿಕಾರಿಗಳು ಮುಂಬರುವ ಆರ್ಥಿಕ ಸಾಲಿನಲ್ಲಿ ಅನುಮೋದನೆಗೊಂಡ ಕಾಮಗಾರಿ ಅನುಷ್ಠಾನದಲ್ಲಿ ಯಾವುದೇ ವಿಳಂಬ ದೋರಣೆ ಮಾಡದೇ ಕಾಮಗಾರಿಗಳ ಅನುಷ್ಠಾನ ಮಾಡಬೇಕು ಎಂದು ಸೂಚಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರ ಎಲ್ಲಾ ಇಲಾಖೆಗಳ ಅನುದಾನ ಒಳಗೊಂಡಂತೆ ನಗರ ಮತ್ತು ಗ್ರಾಮೀಣ ಭಾಗದ ಸಮಗ್ರ ಅಭಿವೃದ್ಧಿ ಮುನ್ನೋಟ ತಯಾರಿಸಲು ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಸಭೆ ಮಹತ್ವ ಪಡೆಯುತ್ತದೆ' ಎಂದರು. ತಾ.ಪಂ ಇಒ ರಾಮರೆಡ್ಡಿ ಪಾಟೀಲ ಮಾತನಾಡಿ, 'ಗ್ರಾಮೀಣ ಮತ್ತು ನಗರದ ಸರ್ವತೋಮುಖ ಅಭಿವೃದ್ಧಿಗೆ ಅಭಿವೃದ್ಧಿ ಸಮಿತಿ ನೆರವಾಗಿದ್ದು, ವಿವಿಧ ಇಲಾಖೆಗಳ ಅನುದಾನ ಮತ್ತು ಕೇಂದ್ರ, ರಾಜ್ಯ ಸರ್ಕಾರದ ಅನುದಾನ ಒಳಗೊಂಡ ಪ್ರಸ್ತಾವನೆ ಸಿದ್ಧಪಡಿಸಲಾಗಿದೆ' ಎಂದರು.

## ದಿನ ಭವಿಷ್ಯ

| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
|---|---|---|
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಭಾವನಾತ್ಮಕವಾಗಿ ನೀವು ತುಂಬ ಸ್ಥಿರವಾಗಿರುವುದಿಲ್ಲ, ಆದ್ದರಿಂದ ನೀವು ಇತರರ ಮುಂದೆ ಹೇಗೆ ವರ್ತಿಸುತ್ತೀರಿ ಮತ್ತು ಏನು ಹೇಳುತ್ತೀರಿ ಎನ್ನುವ ಬಗ್ಗೆ ಎಚ್ಚರದಿಂದಿರಿ.

**ವೃಷಭ** ಚಂದ್ರನ ಸ್ಥಿತಿಯನ್ನು ನೋಡಿದರೆ, ನಿಮಗೆ ಸಾಕಷ್ಟು ಉಚಿತ ಸಮಯ ಸಿಗುತ್ತದೆ ಎಂದು ಹೇಳಬಹುದು. ಇದರ ಹೊರತಾಗಿಯೂ, ನೀವು ಮಾಡಬೇಕಾಗಿರುವ ಕೆಲಸವನ್ನು ಮಾಡಲು ನಿಮಗೆ ಸಾಧ್ಯವಾಗುವುದಿಲ್ಲ.

**ಮಿಥುನ** ಚಾಲನೆ ಮಾಡುವಾಗ ಎಚ್ಚರ ವಹಿಸಿ. ನಿಮ್ಮ ಹೆಚ್ಚುವರಿ ಹಣವನ್ನು ಒಂದು ಸುರಕ್ಷಿತ ಸ್ಥಳದಲ್ಲಿರಿಸಿ ಹಾಗೂ ಇದು ಮುಂದಿನ ಕಾಲದಲ್ಲಿ ನಿಮಗೆ ಒಳ್ಳೆಯ ಆದಾಯ ತರುತ್ತದೆ.

**ಕರ್ಕಾಟಕ** ನೀವು ಅತಿಯಾದ ಒತ್ತಡವನ್ನು ಅನುಭವಿಸುತ್ತಿದ್ದೀರೆಂದೆನಿಸಿದರೆ ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆ ಮುಗ್ಧಮುಗುಳ್ನಗೆಯೂ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು.

**ಸಿಂಹ** ಒಬ್ಬ ಸ್ನೇಹಿತ ನಿಮ್ಮ ಮುಕ್ತ ಮನಸ್ಸು, ಸಹಿಷ್ಣುತೆಯ ಪರಮಾವಧಿಯನ್ನು ಪರೀಕ್ಷಿಸಬಹುದು. ನಿಮ್ಮ ಮೌಲ್ಯಗಳೊಂದಿಗೆ ರಾಜಿಯಾಗದಿರುವಂತೆ ನಿರ್ಧಾರಗಳನ್ನು ಕೈಗೊಳ್ಳುವಂತೆ ಎಚ್ಚರಿಕೆ ವಹಿಸಬೇಕು.

**ಕನ್ಯಾ** ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ವ್ಯಾಪಾರವನ್ನು ಬಲಪಡಿಸಲು ಇಂದು ನೀವು ಯಾವುದೇ ಪ್ರಮುಖ ಕ್ರಮಗಳನ್ನು ತೆಗೆದುಕೊಳ್ಳಬಹುದು.

**ತುಲಾ** ಕೆಲಸದ ಒತ್ತಡ, ಮನೆಯಲ್ಲಿ ಅಪಶ್ರುತಿ ಸ್ವಲ್ಪ ಉದ್ವೇಗ ತರಬಹುದು. ನಿಮ್ಮ ಯಾವುದೇ ಚಲಿಸಬಲ್ಲ ಅಸ್ತಿಯನ್ನು ಕದಿಯಬಹುದು ಆದ್ದರಿಂದ ಸಾಧ್ಯವಾದಷ್ಟು ಅದರ ಬಗ್ಗೆ ಗಮನ ಹರಿಸಿ.

**ವೃಶ್ಚಿಕ** ನಿಮ್ಮ ಸಂಗಾತಿಯ ಪ್ರೀತಿ ನಿಜವಾಗಿಯೂ ಭಾವಪೂರ್ಣವಾಗಿದೆ ಎಂದು ನೀವು ತಿಳಿದುಕೊಳ್ಳುತ್ತೀರಿ. ಯಾವುದೇ ಪರಿಸ್ಥಿತಿಯಲ್ಲಿ ನೀವು ನಿಮ್ಮ ಸಮಯದ ಬಗ್ಗೆ ಕಾಳಜಿ ವಹಿಸಬೇಕು.

**ಧನಸ್ಸು** ಒಬ್ಬ ಹಳೆಯ ಸ್ನೇಹಿತ ದಿನದ ಅಂತ್ಯದಲ್ಲಿ ಒಂದು ಆಹ್ಲಾದಕರ ಭೇಟಿ ನೀಡುತ್ತಾರೆ. ನೀವು ಕಾಳಜಿಯುಳ್ಳ, ತಿಳುವಳಿಕೆಯುಳ್ಳ ಸ್ನೇಹಿತರನ್ನು ಭೇಟಿ ಮಾಡುತ್ತೀರಿ. ನಿಮಗೆ ಸಮಯವನ್ನು ನೀಡುವುದು ತಿಳಿದಿದೆ.

**ಮಕರ** ನಿಮ್ಮ ಇತರರನ್ನು ಶ್ಲಾಘಿಸುವ ಮೂಲಕ ಅವರ ಯಶಸ್ಸನ್ನು ಆನಂದಿಸುವ ಸಾಧ್ಯತೆಗಳಿವೆ. ನಿಮ್ಮ ಹಣವನ್ನು ಸಂಗ್ರಹಿಸಿದಾಗ ಮಾತ್ರ ಹಣ ನಿಮ್ಮ ಕೆಲಸಕ್ಕೆ ಬರುತ್ತದೆ, ಇದನ್ನು ನೀವು ಚೆನ್ನಾಗಿ ಅರ್ಥಮಾಡಿಕೊಳ್ಳಿ.

**ಕುಂಭ** ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು. ಇಂದು ನೀವು ಸೂಕ್ತವಾಗಿ ಉಳಿಸಲು ಸಾಧ್ಯವಾಗುತ್ತದೆ.

**ಮೀನ** ನಿಮ್ಮ ತೂಕದ ಮೇಲೆ ಒಂದು ಕಣ್ಣಿಟ್ಟಿರಿ ಮತ್ತು ಅತಿಯಾಗಿ ತಿನ್ನಬೇಡಿ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

### ಮೊಳಕಾಲ್ಮುರು ರೇಷ್ಮೆ ಸೀರೆ ತಾಂತ್ರಿಕತೆ ಕುರಿತಂತೆ ''ಇಂಡಸ್ಟ್ರೀಸ್ ಟೆಕ್ನಾಲಜಿ ಕ್ಲಿನಿಕ್'' ಯೋಜನೆ ಕಾರ್ಯಕ್ರಮ

# ಆಧುನೀಕರಣ ತಂತ್ರಜ್ಞಾನ ಜತೆಗಿರಲಿ ಪರಂಪರೆಯ ಬೇರು: ಬಿ.ಆನಂದ

• ಉದಯವಾಹಿನಿ ಚಿತ್ರದುರ್ಗ

ಇತ್ತೀಚಿಗೆ ಆವಿಷ್ಕರಿಸಲ್ಪಪಟ್ಟ ಆಧುನೀಕರಣ ತಂತ್ರಜ್ಞಾನ ಬಳಸಿ ಸಾಂಸ್ಕೃತಿಕ ಪರಂಪರೆಯ ಬೇರುಗಳನ್ನು ಮರೆಮಾಚದೇ ಉತ್ಪಾದನೆಯಲ್ಲಿ ತೊಡಗಬೇಕು ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಆನಂದ ಹೇಳಿದರು.

ಮೊಳಕಾಲ್ಮುರಿನ ಪಾಂಚಜನ್ಯ ಕಾಂಪ್ಲೆಕ್ಸ್‌ನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಟೆಕ್ಸಾಕ್, ಕೆಸಿಟಿಯು ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ ಸಂಯುಕ್ತಾಶ್ರಯದಲ್ಲಿ ಕೇಂದ್ರ ಸರ್ಕಾರದ ಆರೆಎಂಪಿ ಯೋಜನೆಯಡಿ ಎರಡು ದಿನಗಳ ಮೊಳಕಾಲ್ಮುರು ರೇಷ್ಮೆ ಸೀರೆ ತಾಂತ್ರಿಕತೆ ಕುರಿತಂತೆ ಇಂಡಸ್ಟ್ರೀಸ್ ಟೆಕ್ನಾಲಜಿ ಕ್ಲಿನಿಕ್ ಯೋಜನೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೈಗಾರಿಕೋದ್ಯಮದಲ್ಲಿ ಆಧುನಿಕ ತಂತ್ರಜ್ಞಾನ ಬಳಕೆಯ ಬಗ್ಗೆ ಒಲವು ತೋರಬೇಕೆಂದು ಕೈಗಾರಿಕೋದ್ಯಮಿಗಳಿಗೆ ಕರೆ ಕೊಟ್ಟರು.

ಮೊಳಕಾಲ್ಮೂರು ರೇಷ್ಮೆ ಸೀರೆ ಕೈಗಾರಿಕೆಯು ಶತಮಾನದ ಇತಿಹಾಸ ಹೊಂದಿದೆ. ಮೈಸೂರು ರಾಜ ಮನೆತನದ ಕಾಲದಲ್ಲಿ ಒಂದು ಸೀರೆ ಅರಸರ ಗಮನ ಸೆಳೆದಾಗ ಅದನ್ನು ಸಿಂಹಾಸನದ ಸೀರೆ ಎಂದು ಕರೆಯಲಾಗುತ್ತಿತ್ತು. ಅವರಿಂದ ಪ್ರೋತ್ಸಾಹ ಪಡೆದ ಕೈಗಾರಿಕೆಯು ಈಗಲೂ ಸಂಪ್ರದಾಯಿಕ ಕೈಮಗ್ಗ ತಂತ್ರಗಳನ್ನು ಬಳಸಿ ಪ್ರಕೃತಿ ಪ್ರೇರಿತ ವಿನ್ಯಾಸದ ಸೀರೆಗಳನ್ನು ತಯಾರಿಸಲಾಗುತ್ತಿದೆ. ಮೊಳಕಾಲ್ಮುರು ಸೀರೆಗೆ 2006ರಲ್ಲಿ ಭೌಗೋಳಿಕ ಸೂಚನೆ ಹೆಗ್ಗುರುತು



☛ ಉದಯವಾಹಿನಿ ಚಿತ್ರ

Geographical Indication (Gi) Tag ದೊರೆತಿದೆ. ಇದು ವಿಶೇಷ ಉತ್ಪಾದನೆಯನ್ನು ರಕ್ಷಿಸುತ್ತದೆ. ಇದು ಶುದ್ಧ ರೇಷ್ಮೆಯಿಂದ ಸಂಪ್ರದಾಯಕ ಕೈಮಗ್ಗಗಳನ್ನು ಬಳಸಿ ತಯಾರಿಸಲಾಗುತ್ತದೆ. ವಿಶಿಷ್ಟ ವಿಶ್ವಾಸಗಳು ಇಲ್ಲಿನ ಸೀರೆಗಳು ವಿಶೇಷವಾಗಿ ತಮ್ಮ ಮನಮೋಹಕ ಅಂಚುಗಳಿಗೆ ಹೆಸರುವಾಸಿಯಾಗಿದೆ ಇಂತಹ ರೇಷ್ಮೆ ಸೀರೆಗಳನ್ನು ಹೆಚ್ಚಾಗಿ ಸಿನಿ ತಾರೆಯರು ಅಲ್ಲದೇ ಎಲ್ಲಾ ಕ್ಷೇತ್ರದ ಸೆಲಿಬ್ರಿಟಿ ಹೆಣ್ಣು ಮಕ್ಕಳು ಇಷ್ಟ ಪಡುತ್ತಾರೆ, ಅಷ್ಟೇ ಅಲ್ಲದೇ ಈ ಸೀರೆಗಳು ದೇಶಾದ್ಯಂತ ಹಾಗೂ ವಿದೇಶಗಳಾದ ಮಲೇಷಿಯಾ, ಆಸ್ಟ್ರೇಲಿಯಾ, ಅಮೇರಿಕಾ ದಂತಹ ದೇಶಗಳಿಗೂ ರಫ್ತಾಗುತ್ತವೆ ಅಂದರೇ ಈ ಸೀರೆ ಉತ್ಪಾಧಿಸುವಾಗ ಸಂಪ್ರದಾಯಕ ಕರಕುಶಲತೆ ಎಷ್ಟಿದೆ ಎಂಬುದನ್ನು ಎಲ್ಲಾ ಕೈಗಾರಿಕೋದ್ಯಮಿಗಳು ಅರೆಯಬೇಕು ಎಂದರು.

**ಭೌಗೋಳಿಕ ಸೂಚನೆ ಹೆಗ್ಗುರುತು**

ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ ಸಿಇಒ ಸಿದ್ದರಾಜು ಮಾತನಾಡಿ, ಕೈಗಾರಿಕಾ ಕ್ರಾಂತಿಯು 18 ಮತ್ತು 19ನೇ ಶತಮಾನದಲ್ಲಿ ಸಂಭವಿಸಿದೆ. ಅಂತಹ ಶತಮಾನದಿಂದ ಬೆಳೆದು ಬಂದಿರುವ ಮೊಳಕಾಲ್ಮುರು ರೇಷ್ಮೆ ಸೀರೆ ಉದ್ಯಮದ ಬಗ್ಗೆ, ನಾವೆಲ್ಲರೂ ಹೆಮ್ಮೆ ಪಡುವಂತಹ ವಿಷಯ. ಆ ಅವಧಿಯಲ್ಲಿ ಕೃಷಿ ಉತ್ಪಾದನೆ, ಗಣಿಗಾರಿಕೆ ಮತ್ತು ಸಾರಿಗೆಯಲ್ಲಿ ಪ್ರಮುಖ ಬದಲಾವಣೆಗಳಿಂದ ಸಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಮೇಲೆ ಗಾಢ ಪರಿಣಾಮ ಬೀರಿತು. ಯುನೈಟೆಡ್ ಕಿಂಗಡಮ್‌ನಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿ ತರುವಾಯ ವಿಶ್ವದೆಲ್ಲೆಡೆ ಹರಡಿತು. ಕೈಗಾರಿಕಾ ಕ್ರಾಂತಿಯ ಪ್ರಾರಂಭವು ಮಾನವ ಇತಿಹಾಸದಲ್ಲಿ ಪ್ರಮುಖ ತಿರುವು ಎಂದು ಗುರುತಿಸಲಾಗಿದೆ. ಬಹುತೇಕರ ಜನಜೀವನದ ಪ್ರತಿಯೊಂದು ಅಂಶದ ಮೇಲೆ ಅಂತಿಮವಾಗಿ ಕೆಲವು ರೀತಿಯಲ್ಲಿ ಪ್ರಭಾವ ಬೀರಿದೆ. ಈಗ 21ನೇ ಶತಮಾನದಲ್ಲಿರುವ ನಾವುಗಳು ಕಾಲಕ್ಕೆ ತಕ್ಕಂತೆ ಬದಲಾಗಬೇಕಾಗುತ್ತದೆ. ಹೊಸ ಹೊಸ ತಂತ್ರಜ್ಞಾನ ಅವಿಷ್ಕರಿತ ಎಐ ನಂತಹ ತಂತ್ರಜ್ಞಾನ ಬಳಸಿಕೊಳ್ಳುವುದು ಅನಿವಾರ್ಯವಾಗಿದೆ. ಆದ್ದರಿಂದ ಆಧುನೀಕರಣ ತಂತ್ರಜ್ಞಾನವನ್ನು ಸಂಪ್ರದಾಯಕ ಕುಶಲತೆಯನ್ನು ಮರೆಯಾಗದಂತೆ ಬಳಸಿಕೊಳ್ಳಬೇಕೆಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಮೊಳಕಾಲ್ಮುರು ಸಿಲ್ಕ್ ಸಿಟಿ ಟೆಕ್ಸ್‌ಟೈಲ್ ಫೌಂಡೇಷನ್ ಅಧ್ಯಕ್ಷ ಕಿರಣ್ ಗಾಯಕ್ವಾಡ್, ಡೈರೆಕ್ಟರ್ ಯುನಿವರ್ಸಲ್ ಗ್ರೂಪ್‌ನ ಉಪನ್ಯಾಸಕರಾದ ಕಣ್ಣನ್ ಕೃಷ್ಣಮೂರ್ತಿ, ವೆಂಕಟೇಶ್ ಗೌಡ ಇದ್ದರು.

**ರಾಷ್ಟ್ರೀಯ ಪುರಸ್ಕಾರಗಳ ಮನ್ನಣೆ**

ಮೊಳಕಾಲ್ಮೂರು ರೇಷ್ಮೆ ಸೀರೆಗಳು ವಿಶಿಷ್ಟ ವಿನ್ಯಾಸಗಳನ್ನು ಹೊಂದಿದ್ದು, ವಿಶೇಷತೆ ಅಂದರೆ ಈ ಸೀರೆಗಳು ದೀರ್ಘ ಬಾಳಿಕೆ ಮತ್ತು ಗಟ್ಟಿ ಬಣ್ಣಗಳಿಗೆ ಹೆಸರುವಾಸಿಯಾಗಿದೆ. ಬನಾರಸ್, ಕಾಂಚೀಪುರಂ ಮತ್ತು ಧರ್ಮಾವರಂ ಸೀರೆಗಳಿಗೆ ಇದು ಪ್ರಬಲ ಸ್ಪರ್ಧೆ ನೀಡುತ್ತಿದೆ. ಅಲ್ಲದೇ ಮೊಳಕಾಲ್ಮರು ರೇಷ್ಮೆ ಸೀರೆಗಳಿಗೆ ರಾಷ್ಟ್ರೀಯ ಪುರಸ್ಕಾರಗಳ ಮನ್ನಣೆ ದೊರೆತಿದೆ. ಪಟ್ಟಣದ ನೇಕಾರರಾದ ರಮೇಶ್ ವಾಂದ್ರೆಯವರಿಗೆ ಕೈಮಗ್ಗ, ರೇಷ್ಮೆ ಸೀರೆಗಳ ಪಾರಂಪರಿಕ ನೈಯ್ಗೆಯಲ್ಲಿನ ನೈಪುಣ್ಯತೆ ಗುರುತಿಸಿ, 2015ರ ಅಂತರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಕಾರ್ಯಕ್ರಮದಲ್ಲಿ ಕೇಂದ್ರದ ಜವಳಿ ಇಲಾಖೆ ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಗಿದೆ ಎಂದರು.

> ಕೇಂದ್ರ ಹಾಗೂ ರಾಜ್ಯ ಸರ್ಕಾರವು ಹಲವಾರು ರಿಯಾಯತಿಗಳು, ಪ್ರೋತ್ಸಾಹಗಳು, ಸಾಲ ಸೌಲಭ್ಯ ಹಾಗೂ ಸಹಾಯಧನದಂತಹ ಯೋಜನೆಗಳನ್ನು ಜಾರಿಗೆ ತಂದಿದ್ದು, ಅಂತಹವುಗಳನ್ನು ಬಳಸಿಕೊಂಡು ಯುವಕ-ಯುವತಿಯರು ಕೈಗಾರಿಕೆ ಸ್ಥಾಪಿಸುವಲ್ಲಿ ಒಲವು ತೋರಿಸಬೇಕು.
>
> -ಡಾ.ಪಿ.ಎಂ.ಮಂಜುನಾಥ
> ಮೊಳಕಾಲ್ಮುರು ಸಿಲ್ಕ್ ಸಿಟಿ ಎಂಟರ್‌ಪ್ರೈಸಸ್ ವ್ಯವಸ್ಥಾಪಕ ನಿರ್ದೇಶಕ

## ಪ್ರಶಿಕ್ಷಣಾರ್ಥಿಗಳು ಸಾಧನೆಗೈದಾಗ ಸಂತೃಪ್ತಿ: ಎಸ್.ಎ.ನಿಂಗೋಜಿ

• ಉದಯವಾಹಿನಿ ಯಲಬುರ್ಗಾ

ದೂರದ ಊರಿನ ವಿದ್ಯಾರ್ಥಿಗಳು ಸಾಧನೆಗೈದಾಗ ಅವರು ಸನ್ಮಾನಿತರಾದಗ ನಾವು ಸಂತೋಷ ಪಡುವದಕ್ಕಿಂತ ನಮ್ಮ ಪ್ರಶಿಕ್ಷಣಾರ್ಥಿಗಳು ಸಾಧನೆಗೈದಾಗ ನಾವು ಸಂತೃಪ್ತಿ ಪಡಬೇಕಾದ ಕ್ಷಣಗಳನ್ನು ಕಾಯುತ್ತಿದ್ದೇವೆ ಎಂದು ನಿಂಗೋಜಿ ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಟ್ರಸ್ಟಿನ ಅಧ್ಯಕ್ಷರು ಹಾಗೂ ಹಿರಿಯ ನ್ಯಾಯಾವಾದಿಗಳಾದ ಶಶಿಕಾಂತ ನಿಂಗೋಜಿ ರವರು ಹೇಳಿದರು.

ಪಟ್ಟಣದ ನಿಂಗೋಜಿ ಬಿ.ಇಡಿ. ಕಾಲೇಜಿನಲ್ಲಿ ಆಯೋಜಿಸಿದ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿ ಇ ಟಿ) ಯ ಎರಡು ದಿನದ ಉಚಿತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಅತ್ಯಂತ ಅಮೂಲ್ಯವಾದ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಎರಡು ದಿನದ ಕಾರ್ಯಾಗಾರದವನ್ನು ಆಯೋಜಿಸಿರುವದನ್ನು ಪ್ರಶಿಕ್ಷಣಾರ್ಥಾಗಳು ಸದುಪಯೋಗ ಪಡಿಸಿಕೊಂಡು ಭಾವಿ ಜೀವನವನ್ನು ಉನ್ನತರೀತಿಯಲ್ಲಿ ರೂಪಿಸಿಕೊಂಡು ಕುಟುಂಬಕ್ಕೆ ಹಾಗೂ ತಮಗೆ ಕಲಿಸಿದ ಪ್ರಾಥಮಿಕ ಪ್ರೌಢ ಕಾಲೇಜಿನ ಗುರುಗಳಿಗೆ ಕೀರ್ತಿ ತರುವಂತೆ ಆದರೆ ಈ ಕಾರ್ಯಾಗಾರದ ಉದ್ದೇಶವು ಈಡೇರುತ್ತದೆ ಎಂದರಲ್ಲದೆ ನಮ್ಮ ಸಂಸ್ಥೆಯಲ್ಲಿ ಕಲಿತ ಯಾವುದೇ


☛ ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳು ಮೌಲ್ಯಯುತ ಹಾಗೂ ಉಪಯುಕ್ತವಾದ ಶಿಕ್ಷಣವನ್ನು ಪಡೆದುಕೊಂಡು ಸಂಸ್ಥೆಯ ಆಸ್ತಿ ತಾವು ಆದಾಗಲೇ ನಮಗೆ ಖುಷಿ ಆಗುತ್ತದೆ ಎಂದರು .

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ವೀರಣ್ಣ ನಿಂಗೋಜಿ ಮಾತನಾಡಿ ಯಾರಲ್ಲಿ ಯಾವ ಕೌಶಲ್ಯವಿದೇಯೋ ಅದರಲ್ಲಿಯೆ ಸಾಧನೆಗೈದು ಜೀವನವನ್ನು ರೂಪಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕೊಪ್ಪಳದ ಗವಿಸಿದ್ಧೇಶ್ವರ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶೈಲಜಾ ಅರಳಲಿಮಠ ರವರು ಆಂಗ್ಲ ಭಾಷೆಯ ಭೊದನಾ ಶಾಸ್ತ್ರವನ್ನು ಬೋಧಿಸಿದರು ಪಟ್ಟಣದ ಸರಕಾರಿ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶಂಕ್ರಯ್ಯ ಅಬ್ಬಿಗೇರಿ ಮಠ ರವರು ಕನ್ನಡ ಬೋಧಾನ ಶಾಸ್ತ್ರವನ್ನು ಬೋಧಿಸುವಾಗ ಪ್ರಶಿಕ್ಷಣಾರ್ಥಿಗಳು ಆಸಕ್ತಿಯಿಂದ ಆಲಿಸಿದರು .

ಇಂದು ರವಿವಾರ ಮಹೇಶ ಅನಿಲ್ ಮೇಟಿ ಆರ್.ಎಚ್.ಕುರಡಗಿ ಮಂಜುನಾಥ ಹಿರೇಮಠರವ ರಿಂದ ವಿಶೇಷ ಉಪನ್ಯಾಸ ಜರುಗುವವು ನಂತರ ಸಮರೋಪ ಸಮಾರಂಭ ಡಾ. ವಿ.ಎ.ನಿಂಗೋಜಿ ರವರ ಅಧ್ಯಕ್ಷತೆಯಲ್ಲಿ ಜರಗುವದು ಎಂದು ಪ್ರಕಟಣೆಯಲ್ಲಿ ತಿಳಿಸಲಾಯಿತು.

> ನಮ್ಮ ಉನ್ನತಿಗೆ ನಿಂಗೋಜಿ ಶಿಕ್ಷಣ ಸಂಸ್ಥೆಯೇ ಕಾರಣವಾಗಿದೆ. ಶಿಕ್ಷಣ ಸಂಸ್ಥೆಯನ್ನು ಕಟ್ಟುವಾಗ ಅವರು ತಮಗೆ ಎಷ್ಟೋ ನೋವು ಕಷ್ಟಗಳು ಬಂದರು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಉನ್ನತ ಶಿಕ್ಷಣವನ್ನು ಪಡೆಯ ಬೇಕು ಹಾಗೂ ಅವರಲ್ಲಿರುವ ಪ್ರತಿಭೆ ಅನಾವರಣಗೊಳ್ಳಬೇಕು ಎನ್ನುವ ಸದುದ್ದೇಶದಿಂದ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ್ದಾರೆ ಅವರ ಕನಸು ನನಸಾಗಬೇಕಾದರೆ ಪ್ರಶಿಕ್ಷಣಾರ್ಥಿಗಳು ಮುನ್ನೆಲೆಗೆ ಬರಬೇಕಾದ ಅಗತ್ಯತೆ ಇದೆ.
>
> -ಮಹೇಶ ಪಟ್ಟೇದ್, ಸಪನ್ಮೂಲ ವ್ಯಕ್ತಿ

## ನೂತನ ಬೈ ಪಾಸ್ ಉದ್ಘಾಟಿಸಿದ ತುಕರಾಂ

• ಉದಯವಾಹಿನಿ ಬಳ್ಳಾರಿ

ರಾಷ್ಟ್ರೀಯ ಹೆದ್ದಾರಿ ಯೋಜನೆಯಡಿ ಆಂದ್ರ ಪ್ರದೇಶದ ಗುತ್ತಿ ಮತ್ತು ಕರ್ನಾಟಕದ ಅಂಕೋಲ ನಡುವಿನ ರಾಷ್ಟ್ರೀಯ ಹೆದ್ದಾರಿ 63 ಕ್ಕೆ ಬಳ್ಳಾರಿ ನಗರದ ಬಳಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ನಿರ್ಮಿಸಿರುವ ಬೈ ಪಾಸ್ ರಸ್ತೆಯನ್ನು ಇಂದು ಲೋಕಸಭಾ ಸದಸ್ಯ ಇ.ತುಕರಾಂ ವಾಹನಗಳ ಸಂಚಾರಕ್ಕೆ ಮುಕ್ತಗೊಳಿಸಿದರು.

ಕಳೆದ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಬಳ್ಳಾರಿ ತಾಲೂಕಿನ. ವೇಣಿವೀರಾಪುರದಿಂದ ಗೋಡೆಹಾಳ್ ಕ್ರಾಸ್ ವರೆಗೆ ನಿರ್ಮಿಸಿರುವ 28.5 ಕಿ.ಮೀ ಉದ್ದದ ರಸ್ತೆ ಇದಾಗಿದೆ

ದಿನನಿತ್ಯ ಈ ರಸ್ತೆಯ ಮೂಲಕ ಸರಾಸರಿ ಎರೆಡು ಸಾವಿರಕ್ಕೂ. ಹೆಚ್ಚು ವಾಹನಗಳು ಸಂಚರಿಸುತ್ತಿವೆ. ಈ ಬೈ ಪಾಸ್ ರಸ್ತೆ ಮುಕ್ತವಾಗಿರುವುದರಿಂದ ಬಳ್ಳಾರಿ ನಗರದಲ್ಲಿ ಸಂಚರಿಸುತ್ತಿದ್ದ ವಾಹನಗಳ ದಟ್ಟಣೆ ಕಡಿಮೆ ಆಗಲಿದೆ.


☛ ಉದಯವಾಹಿನಿ ಚಿತ್ರ


ಈ ವೇಳೆ ಮಾತನಾಡಿದ ತುಕರಾಂ ಅವರು 2016 ನೇ ವರ್ಷದಲ್ಲಿ ಈ ರಸ್ತೆ ಕಾಮಗಾರಿ ಆರಂಭಗೊಂಡಿತ್ತು. ಹಲವು ಕಾರಣಗಳಿಂದ ನೆನೆಗುದಿಗೆ ಬಿದ್ದಿತ್ತು. ಇನ್ನು ಒಂದಿಷ್ಟು ತೋರಣಗಲ್ಲು ಬೈ ಪಾಸ್ , ಗಾದಿಗನೂರು, ಕುರೆಕುಪ್ಪ ಬಳಿ ಪ್ಲೈ ಓವರ್. ಕಾಮಗಾರಿಗಳು ಬಾಕಿ ಇದ್ದು ಇವು ಆದಷ್ಟು ಬೇಗ ಮುಗಿಯಲಿದೆಂದು ಹೇಳಿದರು. ಇನ್ನು ಬಳ್ಳಾರಿಯ ಸುಧಾ ಕ್ರಾಸ್ ನಿಂದ ಬೈಪಾಸ್ ವರೆಗೆ ಚತುಷ್ಪತ ರಸ್ತೆ, ಮೋತಿ ರೈಲ್ವೇ ಬ್ರಿಡ್ಜ್ ಅಗಲೀಕರಣ, ಅನಂತಪುರಂ ರಸ್ತೆಯಿಂದ ಸಿರುಗಪ್ಪ ರಸ್ತೆಗೆ ಬೈಪಾಸ್ ರಸ್ತೆ ಸಹ ನಿರ್ಮಾಣ ಆಗಲಿದೆಂದು ತಿಳಿಸಿದರು.

## ಯತ್ನಾಳ ಅವರಿಗೆ ಬೆಳೆ ಸಮೀಕ್ಷೆದಾರರಿಂದ ಮನವಿ

• ಉದಯವಾಹಿನಿ ವಿಜಯಪೂರ

ನಗರದ ಶಾಸಕರಾದ ಬಸನಗೌಡ ಆರ್ ಪಾಟೀಲ ಯತ್ನಾಳ ಅವರಿಗೆ ಕರ್ನಾಟಕ ಬೆಳೆ ಸಮೀಕ್ಷೆದಾರರ ಸಂಘ ವಿಜಯಪೂರ ಜಿಲ್ಲಾ ಘಟಕದಿಂದ ಭೇಟಿ ನೀಡಿ, ಜಿಲ್ಲಾ ಅಧ್ಯಕ್ಷರು ನರಸಪ್ಪ ನಾವಿ ಅವರ ನೇತೃತ್ವದಲ್ಲಿ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ದೇವ ರಹಿಪ್ಪರಗಿ ತಾಲ್ಲೂಕಾ ಉಸ್ತುವಾರಿ ಸದಸ್ಯ ಸೋಮಶೇಖರ ನಾಯಕೋಡಿ ಮಾತನಾಡಿ, ಬೆಳೆ ಸಮೀಕ್ಷೆ ದಾರರ ಪರವಾಗಿ ಇದೇ ಡಿಸೆಂಬರ್ 8 -19 ರ ವರೆಗೆ ನಡೆಯುವ ಚಳಿಗಾಲ ಅಧಿವೇಶನದಲ್ಲಿ ಧ್ವನಿ ಎತ್ತ ಬೇಕು ಸಾಹೇಬ್ರೆ ಎಂದು ಮನವಿ ಮಾಡಿಕೊಂಡರು. ಮನವಿ ಸ್ವೀಕರಿಸಿದ ಶಾಸಕರು ನೀವು ಎಷ್ಟು ಜನ ಈ ಕೆಲಸದಲ್ಲಿ ಇರುವಿರಿ ಎಂದು ಪ್ರಶ್ನಿಸಿದರು. ಶಾಸಕರ ಪ್ರಶ್ನೆಗೆ ಜಿಲ್ಲಾ ಪ್ರಧಾನಕಾರ್ಯದರ್ಶಿ ಭೀಮಪ್ಪ ಲಕ್ಷ್ಮಣ ತಳವಾರ ಮಾತನಾಡಿ, ಕರ್ನಾಟಕದ ತುಂಬಾ ನಾವುಗಳು ಸರಿಸುಮಾರು 25,000ಸಾವಿರ ಜನಗಳು ಕಾರ್ಯನಿರ್ವಹಿಸುತ್ತಿದ್ದೇವೆ,


☛ ಉದಯವಾಹಿನಿ ಚಿತ್ರ

ನಮಗೆ ಕನಿಷ್ಠ ವೇತನ ನೀತಿ ಅಡಿಯಲ್ಲಿ ನೇಮಕ ಮಾಡಿ ಕೊಂಡು ವರ್ಷವಿಡೀ ಕೆಲಸ ನೀಡ ಬೇಕೆಂದು ಉತ್ತರಿಸಿದರು. ಆಗ ಶಾಸಕರು ಸಕಾರಾತ್ಮಕವಾಗಿ ಸ್ಪಂದಿಸಿ ಅಧಿವೇಶನದಲ್ಲಿ ಮಾತನಾಡುವುದಾಗಿ ಭರವಸೆ ನೀಡಿದರು. ಈ ವೇಳೆ ಜಿಲ್ಲಾ ಉಪಾಧ್ಯಕ್ಷ ಸುರೇಶ ಹಜೇರಿ, ರಾಜ್ಯ ಘಟಕದ ಸಹಕಾರ್ಯದರ್ಶಿ ಪಿಂಟು ಚವ್ಹಾಣ, ಅರುಣಕುಮಾರ್ ತಳವಾರ, ಚಂದನ್ ಕೋಳಿ,ಮಲ್ಲಿಕಾರ್ಜುನ ಪೂಜೇರಿ, ಹಿರಿಯಣ್ಣ ಜಂಬಗಿ, ಸಾಗರ ಕಿರಣಗಿ, ಮಹೇಶ ರಾಠೋಡ, ಸಂತೋಷ ಜಾಧವ,ಬಸವನ ಬಾಗೇವಾಡಿ ತಾಲ್ಲೂಕ ಪ್ರಧಾನಕಾರ್ಯದರ್ಶಿ ಶಿವುಕುಮಾರ ಪೂಜೇರಿ ಉಪಸ್ಥಿತರಿದ್ದರು.

## ವಾಹನದ ಮಾಲಿನ್ಯದಿಂದಲೇ 60 ಪ್ರತಿಶತ ಮಾಲಿನ್ಯ : ಜಿ.ಕೆ ಬಿರಾದಾರ್

• ಉದಯವಾಹಿನಿ ಬೀದರ್

ಒಂದು ಮರಕಡಿಯವುದನ್ನು ಕಂಡರೆ ಸಾರ್ವಜನಿಕರು 10 ಮರಗಳನ್ನು ನೆಡಬೇಕೆಂದು ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಜಿ.ಕೆ.ಬಿರಾದಾರಅವರು ನುಡಿದರು. ಅವರು ದಿ. 25,ರಂದು ಬೀದರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಹಾಗು ಕಲ್ಯಾಣಕರ್ನಾಟಕರಸ್ತೆ ಸಾರಿಗೆ ನಿಗಮ ಘಟಕ(1)ಸಹಯೋಗದಲ್ಲಿ ವಾಯು ಮಾಲಿನ್ಯ ಜಾಗತಿ ಮಾಸಾವರಣೆಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿದ್ದರು. ನಮ್ಮರಾಜ್ಯದಲ್ಲಿ ಪ್ರತಿ ತಿಂಗಳಿಗೆ ಲಕ್ಷಕಿಂತಲು ಹೆಚ್ಚು ವಾಹನಗಳನ್ನು ನೊಂದಣಿಯಾಗುತ್ತಿವೆ

ಸಾರ್ವಜನಿಕರು ಕಲಬೆರಕೆ ಪೆಟ್ರೋಲ್. ಡಿಸೆಲ್‌ಉಪಯೋಗಿಸಬಾರದು. ಕಲಬೆರಕೆ ಯಿಂದ ವಾಹನದಿಂದ ಬರುವ ಮಾಲಿನ್ಯದಿಂದ ಮನುಷ್ಯನಿಗೆ ಕೆಮ್ಮು. ದಮ್ಮು. ಅಸ್ತಮಾ. ಅಲರ್ಜಿ ಮತ್ತುಇನ್ನು


☛ ಉದಯವಾಹಿನಿ ಚಿತ್ರ

ಹಲವಾರು ಸಾಂಕ್ರಮಿಕ ಕಾಯಿಲೆಗಳು ಬರುತ್ತವೆ. ಹಾಗಾಗಿ ಶುದ್ಧ ಗಾಳಿ ಸಿಗಬೇಕಾದರೆ ವಾಹನ ಖರೀದಿಸುವ ಎಲ್ಲಾ ಸಾರ್ವಜನಿಕರು ಸಸಿ ನೆಟು ವಾಹನ ಖರೀದಿಸಬೇಕು. ಮಾಲಿನ್ಯದಿಂದಲೆ 60 ಪ್ರತಿಶತ ಮಾಲಿನ್ಯ ಹಾಳಾಗುತ್ತಿದೆಂದು ನುಡಿದರು. ಬೀದರ ವಿಭಾಗೀಯ ನಿಯಂತ್ರಣಅಧಿಕಾರಿರಾಜೇಂದ್ರಜಾದವ ಮಾತನಾಡಿ ಬಸ್ಸುಗಳನ್ನು ಪ್ರತಿ ತಿಂಗಳಿಗೊಮ್ಮೆ ವಾಯು ಮಾಲಿನ್ಯತಪಾಸಣೆ ಮಾಡಿಸಬೇಕು ಮತ್ತು ಕಾಲಕಾಲಕ್ಕೆ ತಕ್ಕಂತೆಇಂಜೀನ್‌ಆಯಿಲ್ ಹಾಗು ಸರ್ವಿಸಿಂಗ್ ಮಾಡಿಸಬೇಕುರಸ್ತೆ ದಿಟುವಾಗವಾಗಲಿ 30 ಸೆಂಕಡಗಿಂತ ಹೆಚ್ಚಿನ ಕಾಲ ವಾಹನ ನಿಲ್ಲಿಸಿದರೆ ವಾಹನವನ್ನು ಬಂದ್ ಮಾಡಬೇಕು ಸಣ್ಣ ಸಣ್ಣ ಮಕ್ಕಳಿಗೆ ಶ್ವಾಶಕೋಶದ ಮೇಲೆ ಪರಿಣಾಮ ಬೀರುತ್ತದೆಂದರು.

> ಘನ ತ್ಯಾಜ್ಯ ಮಾಲಿನ್ಯ,ನೀರು ಮಾಲಿನ್ಯ, ಶಬ್ಧಮಾಲಿನ್ಯ ಇವೆಲವುಗಳನ್ನು ಕಡಿಮಾಡಬೇಕಾದರೆ ಬೆಳಿಗ್ಗೆ ನಾವೆಲ್ಲರು ಹಸಿ ತರಕಾರಿರಸ್ತೆಯ ಮೇಲೆ ಬೀಸಾಡಬಾರದು ಪಾತ್ರೆ ತೋಳೆದ ನಿರುಕೂಡಾರಸ್ತೆಯ ಮೇಲೆ ಚಲ್ಲಬಾರದು ಇವುಗಳನ್ನು ಸಾರ್ವಜನಿಕರು ಗಮನದಲ್ಲಿ ಇಟ್ಟುಕೊಳ್ಳಬೇಕು.
> ಹಾಗು ನಮ್ಮ ಸುತ್ತ ಮುತ್ತಲಿನ ಪರಿಸರ ಸ್ವಚ್ಚತೆಯಿಂದಿಟ್ಟುಕೊಳ್ಳಬೇಕು.
>
> -ಮೃತ್ಯುಂಜಯ ಬಸಪ್ಪಾ

## ಮಕ್ಕಳಲ್ಲಿ ಕ್ರೀಡಾ ಆಸಕ್ತಿ ಬೆಳೆಸಿ

• ಉದಯವಾಹಿನಿ, ಬೀದರ್

ಪಾಲಕರು ಮಕ್ಕಳಲ್ಲಿ ಕ್ರೀಡಾ ಆಸಕ್ತಿ ಬೆಳೆಸಬೇಕು ಎಂದು ಜಿಲ್ಲಾ ಅನುದಾನಿತ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ವಿಜಯಕುಮಾರ ಪಾಟೀಲ ಯರನಳ್ಳಿ ಸಲಹೆ ಮಾಡಿದರು. ಚಿದಂಬರ ಶಿಕ್ಷಣ ಸಂಸ್ಥೆಯ ಸಂಚಾಲಿತ ನಗರದ ಶ್ರೀಮತಿ ಇಂದಿರಾಬಾಯಿ ಗುರುತಪ್ಪ ಶೆಟಕಾರ್ ಪ್ರೌಢಶಾಲೆಯಲ್ಲಿ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೆ ಬಹಳಷ್ಟು ಅವಕಾಶಗಳು ಇವೆ ಎಂದು ತಿಳಿಸಿದರು. ಹೆಚ್ಚಿನ ಮಕ್ಕಳು ಮೊಬೈಲ್‌ನಲ್ಲಿ ಕಾಲಹರಣ ಮಾಡುತ್ತಿರುವುದು ಕಳವಳಕಾರಿ. ಮೊಬೈಲ್ ಅನ್ನು ಅವಶ್ಯಕತೆಗೆ ತಕ್ಕಂತೆ ಹಿತ ಮಿತವಾಗಿ ಬಳಸಬೇಕು ಎಂದು ಹೇಳಿದರು. ಚಿದಂಬರ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಡಾ. ಹಾವಗಿರಾವ್ ಮೈಲಾರೆ ಮಾತನಾಡಿ, ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯ ವೃದ್ಧಿಸುತ್ತದೆ ಎಂದು ತಿಳಿಸಿದರು.

## ದೌರ್ಜನ್ಯ ಪ್ರಕರಣಗಳಿಗೆ ಕೂಡಲೇ ಸ್ಪಂದಿಸಿ: ಸ್ವರೂಪಾ ಟಿ.ಕೆ

• ಉದಯವಾಹಿನಿ, ಉಡುಪಿ

ಕೌಟುಂಬಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದ ಕಾನೂನು ಕ್ರಮಗಳ ಕುರಿತು ತಳಮಟ್ಟದಲ್ಲಿಯೇ ಅರಿವು ಮೂಡಿಸುವ ಮೂಲಕ ಮಹಿಳೆಯರ ಮತ್ತು ಮಕ್ಕಳ ಮೇಲಾಗುವ ದೌರ್ಜನ್ಯ ಪ್ರಕರಣಗಳನ್ನು ಗಣನೀಯವಾಗಿ ಕಡಿಮೆ ಮಾಡಲು ಅಗತ್ಯ ಕ್ರಮ ವಹಿಸಬೇಕು. ದೌರ್ಜನ್ಯ ಪ್ರಕರಣಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪಾ ಟಿ.ಕೆ.ಮಣಿಪಾಲದ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ಈಚೆಗೆ ನಡೆದ ಮಹಿಳಾ , ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಟ್ಟದ ವಿವಿಧ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಿಲ್ಲೆಯ ಸಖಿ ಒನ್ ಸ್ಟಾಪ್ ಹಾಗೂ ಸಾಂತ್ವನ ಕೇಂದ್ರಗಳಲ್ಲಿ ಹಲವು ವರ್ಷಗಳಿಂದ ಇತ್ಯರ್ಥವಾಗದೆ ಬಾಕಿ ಉಳಿದಿರುವ ದೌರ್ಜನ್ಯ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಬೇಕು ಎಂದು ಹೇಳಿದರು.

## ಬೇಡಿಕೆ ಈಡೇರಿಕೆಗಾಗಿ ಪ್ರತಿಭಟನೆ

• ಉದಯವಾಹಿನಿ, ಹುಬ್ಬಳ್ಳಿ

ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ರೈತ ಮೋರ್ಚಾ ಕಾರ್ಯಕರ್ತರು ಇಲ್ಲಿನ ಪ್ರಧಾನ ಅಂಚೆ ಕಛೇರಿ ಬಳಿ ಇರುವ ಡಾ. ಬಾಬಾಸಾಹೇಬ ಅಂಬೇಡ್ಕರ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. ಬಳಿಕ ತಹಶೀಲ್ದಾರ ಕಛೇರಿಯವರೆಗೆ ಎತ್ತಿನ ಬಂಡಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಮನವಿ ಸಲ್ಲಿಸಲಾಯಿತು. ಮುಂಗಾರು ಅತಿವೃಷ್ಟಿ ಮಳೆಯಿಂದಾಗಿ ನಷ್ಟಕ್ಕೆ ಒಳಗಾದ ರೈತರು ಬೆಳದ ಏಕದಳ, ದ್ವಿದಳ ಹಾಗೂ ತೋಟಗಾರಿಕಾ ಬೆಳೆಗಳಿಗೆ ಎಸ್.ಡಿ.ಆರ್. ಎಫ್ / ಎನ್.ಡಿ.ಆರ್.ಎಫ್ ನಿಯಮಕ್ಕೆ ಅನುಸಾರವಾಗಿ, ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ ಪರಿಹಾರ ಬಿಡುಗಡೆಗೊಳಿಸಬೇಕು, ಏಕದಳ ಮತ್ತು ದ್ವಿದಳ ಧ್ಯಾನ್ಯಗಳ ಬೆಂಬಲ ಬೆಲೆಯಲ್ಲಿ ಖರೀದಿಸಲು ಪ್ರತಿ ಗ್ರಾಮ ಪಂಚಾಯತಿಗೆ ಒಂದರಂತೆ ಖರೀದಿ ಕೇಂದ್ರಗಳನ್ನು ತೆರೆಯಬೇಕು, ಕಬ್ಬು ಬೆಳೆಗಾರರಿಗೆ ಪ್ರತಿ ಟನ್‌ಗೆ 3.300 ರೂ.ಗಳನ್ನು ಎಲ್ಲಾ ಜಿಲ್ಲೆಗಳ ರೈತರಿಗೂ ಅನ್ವಯಿಸುವಂತೆ ಕಡ್ಡಾಯವಾಗಿ ನೀಡಬೇಕು, ರೈತರಿಗೆ ರಾಜ್ಯ ಸರ್ಕಾರದ ಸಹಕಾರಿ ಬ್ಯಾಂಕ್‌ಗಳಿಂದ ಶೂನ್ಯ ಬಡ್ಡಿದರದಲ್ಲಿ 10 ಲಕ್ಷ ರೂ. ವರೆಗೆ ಸಾಲ ಸೌಲಭ್ಯ ನೀಡಬೇಕು, ರೈತರು ಬಳಸುವ ಕೃಷಿ ಸಲಕರಣೆಗಳಗಳನ್ನು ಸಬ್ಸಿಡಿ ದರದಲ್ಲಿ ನೀಡಲು ಹೆಚ್ಚು ಹಣ ಬಿಡುಗಡೆ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಮನವಿ ಮೂಲಕ ಆಗ್ರಹಪಡಿಸಲಾಯಿತು.

## ನಾಯಕತ್ವ ವಿಚಾರವಾಗಿ ಗೊಂದಲ ನಿವಾರಣೆಗೆ ಸಭೆ: ಸತೀಶ ಜಾರಕಿಹೊಳಿ

• ಉದಯವಾಹಿನಿ ಬೆಳಗಾವಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ನಾಯಕತ್ವ ವಿಚಾರವಾಗಿ ತಲೆದೋರಿದ ಗೊಂದಲ ನಿವಾರಣೆಗೆ ಉಪಾಹಾರ ಸಭೆ ಮಾಡುತ್ತಿದ್ದಾರೆ. ಅವರು ರಾಜ್ಯಕ್ಕೆ ಉತ್ತಮ ಆಡಳಿತ ನೀಡಲಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ಹೈಕಮಾಂಡ್ ಸೂಚನೆ ಮೇರೆಗೆ ಸಭೆ ನಡೆಯುತ್ತಿದೆ. ನಾವು ಇಲ್ಲಿಗೆ ಗೊಂದಲ ಬಗೆಹರಿಯಬೇಕು ಎಂದು ಬಯಸುತ್ತೇವೆ. ಆದರೆ, ಅಂತಿಮ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುತ್ತದೆ ಎಂದರು.

ಈ ಸಮಸ್ಯೆಗಳ ಬಗ್ಗೆ ಚರ್ಚಿಸಲು ಮತ್ತು ಪರಿಸ್ಥಿತಿ ಸರಿಪಡಿಸಲು ಈ ಸಭೆಯ ಅಗತ್ಯವಿತ್ತು. ಇದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸುತ್ತೇವೆ' ಎಂದು ಹೇಳಿದರು. ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರೂ ಪರಸ್ಪರ ಸಾಮಾಜಿಕ ಮಾಧ್ಯಮಗಳಲ್ಲಿ ಪರಸ್ಪರ ಪೋಸ್ಟ್‌ಗಳನ್ನು ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಇದು ಸಾಮಾನ್ಯ ಎಂದರು.

ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕು ಎಂದು ಸಂಸದ ಜಗದೀಶ ಶೆಟ್ಟರ್ ಒತ್ತಾಯಿಸುತ್ತಿರುವ ಕುರಿತು ಕೇಳಲಾದ ಪ್ರಶ್ನೆಗೆ ರಾಷ್ಟ್ರಪತಿ ಆಳ್ವಿಕೆ ಹೇರಲು ಕೆಲವು ಮಾನದಂಡಗಳಿವೆ. ಈ ಪ್ರಕರಣದಲ್ಲಿ ಅದು ಸಾಧ್ಯವಿಲ್ಲ ಎಂದು ಹೇಳಿದರು.

ಸತೀಶ ಜಾರಕಿಹೊಳಿ ಸಿ.ಎಂ ಆಗಲಿ ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿಕೆ ನೀಡಿರುವ ಕುರಿತು, ಅಹಿಂದ ನಾಯಕರು ತಮ್ಮಲ್ಲಿ ಒಬ್ಬರು ರಾಜ್ಯದ ಮುಖ್ಯಮಂತ್ರಿಯಾಗಬೇಕೆಂದು ಬಯಸುತ್ತಾರೆ' ಎಂದು ಹೇಳಿದರು.

# ಮೆಕ್ಕೆಜೋಳ ನೇರ ಖರೀದಿಗೆ ಆದೇಶ ನೀಡಿದ ಸರಕಾರ

### • ಕ್ವಿಂಟಾಲ್‌ಗೆ 2400 ರೂ. ಬೆಲೆ ನಿಗದಿ, ದಾವಣಗೆರೆಯಲ್ಲಿ ಖರೀದಿ ಕೇಂದ್ರ ತೆರೆಯಲು ಒತ್ತಾಯ

• ಉದಯವಾಹಿನಿ ದಾವಣಗೆರೆ

ಮೆಕ್ಕೆಜೋಳ ಬೆಲೆ ಕುಸಿದು ಕಂಗಾಲಾಗಿರುವ ರೈತರು ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆ ನೀಡಲು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ವೇಳೆ ಸರಕಾರ ಪ್ರಸ್ತುತ ವರ್ಷ ಕೆಎಂಎಫ್‌ಗೆ ಅಗತ್ಯವಿರುವ ಮೆಕ್ಕೆಜೋಳವನ್ನು ರೈತರಿಂದ ನೇರ ಖರೀದಿಸಲು ಆದೇಶ ಹೊರಡಿಸಿದೆ.

ಮೆಕ್ಕೆಜೋಳ ಬೆಲೆ ಕುಸಿತದಿಂದ ರೈತ ಅಪಾರ ನಷ್ಟಕ್ಕೆ ಸಿಲುಕಿದ್ದು, ಬೆಂಬಲ ಬೆಲೆ ನೀಡುವಂತೆ ಪ್ರತಿಭಟನೆ ನಡೆಸುತ್ತಿದ್ದಾರೆ. ಹಾಗಾಗಿ ನ. 25ರಂದು ಆರ್ಥಿಕ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿ ಎನ್.ಎಂ. ಶಾಂತಮ್ಮ ಅವರು, ಕರ್ನಾಟಕ ಹಾಲು ಮಹಾಮಂಡಳಿಗೆ ಅಗತ್ಯವಿರುವ ಮೆಕ್ಕೆಜೋಳವನ್ನು ರೈತರಿಂದ ನೇರ ಖರೀದಿ ಮಾಡಲು ಅಧಿಸೂಚನೆ ಹೊರಡಿಸಿದ್ದಾರೆ. ಇದರಿಂದ ರೈತರಿಗೆ ಕೊಂಚ ನೆರವಾದರೂ, ಸರಕಾರ ಆಧಿಕೃತವಾಗಿ ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆ ನೀಡಿದರೆ ಮಾತ್ರ ಆರ್ಥಿಕವಾಗಿ ಲಾಭ ಸಿಗಲಿದೆ.


☛ ಉದಯವಾಹಿನಿ ಚಿತ್ರ

**ರೈತರ ತೀವ್ರ ಹೋರಾಟ**

**ರೈತರ ತೀವ್ರ ಹೋರಾಟ:** ಮೆಕ್ಕೆಜೋಳ ಕಣಜ ದಾವಣಗೆರೆಯಲ್ಲಿ ಹೋರಾಟ ತೀವ್ರವಾಗಿತ್ತು. ಉತ್ಪನ್ನಕ್ಕೆ ಬೆಲೆ ಕುಸಿಯುತ್ತಿದ್ದಂತೆ ರೈತರು ಬೀದಿಗಳಿದು ಪ್ರತಿಭಟನೆ ನಡೆಸಿ ಬೆಂಬಲ ಬೆಲೆ ನೀಡಬೇಕು, ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯಬೇಕು ಎಂದು ಒತ್ತಾಯಿಸಿದ್ದರು.

ಪ್ರತಿಪಕ್ಷ ಬಿಜೆಪಿ ಹೊನ್ನಾಳಿ, ನ್ಯಾಮತಿ ಬಂದ್‌ಗೆ ಕರೆ ನೀಡಿತ್ತು. ದಾವಣಗೆರೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಸೇರಿ ರಾಜ್ಯ ನಾಯಕರು ಆಗಮಿಸಿ ಪ್ರತಿಭಟನೆ ನಡೆಸಿದ್ದರು. ರೈತ ಸಂಘಟನೆಗಳು ಧರಣಿ, ಪ್ರತಿಭಟನೆ ನಡೆಸಿದ್ದವು. ದಿನೇ ದಿನೆ ಹೋರಾಟ ಮುಗಿಲು ಮುಟ್ಟಿತ್ತು. ಈಗ ಸರಕಾರ ಕೆಎಂಎಫ್‌ಗೆ ಅಗತ್ಯವಿರುವ ಒಂದು ಲಕ್ಷ ಮೆಟ್ರಿಕ್ ಟನ್ ಖರೀದಿಗೆ ಸೂಚಿಸಿದೆ.

ಇದರ ಜತೆಗೆ ಖರೀದಿ ಕೇಂದ್ರ ತೆರೆದು ಬೆಂಬಲ ಬೆಲೆಯೊಂದಿಗೆ ಸರಕಾರ ಪ್ರೋತ್ಸಾಹ ಧನ ನೀಡಿ ಖರೀದಿ ಮಾಡಬೇಕು ಎಂಬ ಬೇಡಿಕೆ ಹಾಗೇ ಉಳಿದುಕೊಂಡಿದೆ. ದಾವಣಗೆರೆ ಅತಿ ಹೆಚ್ಚು ಮೆಕ್ಕೆಜೋಳ ಬೆಳೆಯುವ ಜಿಲ್ಲೆಗಳಲ್ಲಿ ಒಂದು. ನೆರೆಯ ಜಿಲ್ಲೆಗಳಲ್ಲೂ ಮೆಕ್ಕೆಜೋಳ ಬೆಳೆಯುವುದರಿಂದ ಕೆಎಂಎಫ್ ಮೊದಲು ದಾವಣಗೆರೆಯಲ್ಲಿ ಖರೀದಿ ಕೇಂದ್ರ ತೆರೆದು ಮೆಕ್ಕೆಜೋಳ ಖರೀದಿಸಬೇಕು. ತುಮಕೂರು ಇನ್ನಿತರೆ ಜಿಲ್ಲೆಗಳಲ್ಲಿ ಆರಂಭಿಸಿದರೆ ಹೋರಾಟ ಮುಂದುವರಿಸಲಾಗುವುದು ಎಂದು ರೈತ ಸಂಘ ಹಸಿರು ಸೇನೆಯ ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಎಚ್ಚರಿಕೆ ನೀಡಿದ್ದಾರೆ.


- ದಾವಣಗೆರೆ ಜಿಲ್ಲೆಯಲ್ಲಿ ಮೆಕ್ಕೆಜೋಳ ಬೆಲೆಗೆ ಬೆಂಬಲ ಬೆಲೆ ನೀಡುವಂತೆ ಬೀದಿಗೆ ಇಳಿದು ಒತ್ತಾಯಿಸಿದ್ದ ರೈತರು
- ಇದೀಗ ಕರ್ನಾಟಕ ಹಾಲು ಮಹಾಮಂಡಳಕ್ಕೆ 2025-26ರಲ್ಲಿ ಬೇಕಾದ ಮೆಕ್ಕೆಜೋಳ ಖರೀದಿಗೆ ಆದೇಶ
- ಕೆಎಂಎಫ್‌ಗೆ ಅಗತ್ಯವಿರುವ ಒಂದು ಲಕ್ಷ ಮೆ.ಟನ್ ಮೆಕ್ಕೆ ಜೋಳ ಖರೀದಿ
- ಕ್ವಿಂಟಾಲ್‌ಗೆ 2400 ರೂ. ಬೆಲೆ ನಿಗದಿ, ದಾವಣಗೆರೆಯಲ್ಲಿ ಖರೀದಿ ಕೇಂದ್ರ ತೆರೆಯಲು ಒತ್ತಾಯ

**ಖರೀದಿ ಕೇಂದ್ರಕ್ಕೆ ಆಗ್ರಹ**

ಈ ಹಿಂದೆಯೂ ಇದೇ ರೀತಿ ಕೆಎಂಎಫ್‌ನಿಂದ ನೇರ ಖರೀದಿಸಲು ಸರಕಾರ ಸೂಚನೆ ನೀಡಿತ್ತು. ಆದರೆ ರಾಜ್ಯದಲ್ಲಿ 45 ಲಕ್ಷ ಮೆಟ್ರಿಕ್ ಟನ್ ಮೆಕ್ಕೆಜೋಳ ಉತ್ಪಾದನೆ ಆಗಲಿದ್ದು, ಅದರಲ್ಲಿ ಕೇವಲ ಒಂದು ಲಕ್ಷ ಮೆಟ್ರಿಕ್ ಟನ್ ಖರೀದಿ ಮಾಡುವುದರಿಂದ ರೈತರಿಗೆ ಹೆಚ್ಚಿನ ಲಾಭ ಆಗುವುದಿಲ್ಲ. ಜತೆಗೆ ಕೆಎಂಎಫ್ ಏಜೆನ್ಸಿಯಿಂದ ಖರೀದಿಸದೆ ಖರೀದಿ ಕೇಂದ್ರ ತೆರೆದು ಖರೀದಿ ಮಾಡಬೇಕು. ಹೆಚ್ಚು ಮೆಕ್ಕೆಜೋಳ ಬೆಳೆಯುವುದು ದಾವಣಗೆರೆ, ಹಾವೇರಿ ಮತ್ತು ಚಿತ್ರದುರ್ಗ ಜಿಲ್ಲೆಗಳಾಗಿರುವುದರಿಂದ ಮೂರು ಜಿಲ್ಲೆಗಳ ರೈತರಿಗೆ ಅನುಕೂಲ ಆಗುವಂತೆ, ದಾವಣಗೆರೆಯಲ್ಲಿ ಖರೀದಿ ಕೇಂದ್ರ ತೆರೆಯಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

# ಸ್ನೇಹಿತೆ ಮನೆಗೆ ಬಂದ ಭಾವನಾ

**ಮಗು ಆರೈಕೆಯಲ್ಲಿ ಭಾವನಾ**



ನಟಿ ಭಾವನಾ ರಾಮಣ್ಣ ಐವಿಎಫ್ ಮೂಲಕ ಮಗು ಪಡೆದು ತಾಯಿಯಾಗಿದ್ದಾರೆ. ಅವರಿಗೆ ಅವಳಿ ಮಕ್ಕಳು ಜನಿಸಬೇಕಿತ್ತು, ಆದರೆ ಹುಟ್ಟುವ ಮೊದಲೇ ಒಂದು ಮಗು ನಿಧನ ಹೊಂದಿತ್ತು. ಈಗ ಭಾವನಾ ಅವರ ಮಗಳ ಜೊತೆಗೆ ಗೆಳತಿ ಭಾವನಾ ಬೆಳಗೆರೆ ಮನೆಗೆ ಭೇಟಿ ಕೊಟ್ಟಿದ್ದಾರೆ. ಭಾವನಾ ಹಾಗೂ ಕಿಟ್ಟಪ್ಪ ಜೊತೆಗಿರುವ ಫೋಟೋಗಳು ಈಗ ವೈರಲ್ ಆಗ್ತಿವೆ. ಅಂದಹಾಗೆ ನಟಿ ಭಾವನಾ ರಾಮಣ್ಣ ಮಗು ಕರೆದುಕೊಂಡು ಬಂದು ಭೇಟಿ ಮಾಡಿರೋದಕ್ಕೆ ಕಾರಣವನ್ನ ಭಾವನಾ ಬೆಳಗೆರೆ ತಮ್ಮ ಪೋಸ್ಟ್ ಮೂಲಕ ಹಂಚಿಕೊಂಡಿದ್ದಾರೆ. ಭಾವನಾ ಮಾಟಗಾತಿ ಕಥೆಯನ್ನ ಸಿನಿಮಾ ಮಾಡಲು ತಯಾರಿ ಮಾಡಿಕೊಂಡಿದ್ದಾರಂತೆ. ಹೀಗಾಗಿ ಆ ಪುಸ್ತಕದ ಕಾಪಿರೈಟ್ ಪಡೆಯುವುದಕ್ಕಾಗಿ ಬಂದಿದ್ದರು ಎಂದು ಬರೆದುಕೊಂಡಿದ್ದಾರೆ ಭಾವನಾ ಬೆಳಗೆರೆ. ಅಂದಹಾಗೆ ನಟಿ ಭಾವನಾ ಈಗ ಮಗು ಆರೈಕೆಯಲ್ಲಿ ತೊಡಗಿಕೊಂಡಿದ್ದಾರೆ. ಜೊತೆಗೆ ಇದೇ ಬ್ರೇಕ್ ಟೈಂನಲ್ಲಿ ಸಿನಿಮಾದ ಕಥೆ ಮಾಡಲು ತಯಾರಿ ಮಾಡಿಕೊಳ್ಳಲು ಮುಂದಾಗಿದ್ದಾರಂತೆ. ಭಾವನಾ ತಮ್ಮ ಎರಡೂವರೆ ತಿಂಗಳ ಮಗುವಿನೊಂದಿಗೆ ಬೆಳಗೆರೆ ಮನೆಗೆ ಬಂದಿದ್ದಾರೆ. ಕೆಲಹೊತ್ತು ಸ್ನೇಹಿತರ ಜೊತೆ ಮಾತುಕತೆ ಮಾಡಿರುವ ಭಾವನಾ ಹಲವಾರು ವಿಚಾರಗಳ ಬಗ್ಗೆ ಮೆಲುಕು ಹಾಕಿದ್ದಾರೆ. ಶ್ರೀನಗರ ಕಿಟ್ಟಿ ಜೊತೆಗೆ ಭಾವನಾ ರಾಮಣ್ಣ ಇಂತಿ ನಿನ್ನ ಪ್ರೀತಿಯ ಸಿನಿಮಾದಲ್ಲಿ ನಟಿಸಿದ್ದಾರೆ. ಅಲ್ಲಿಂದ ಭಾವನಾ ರಾಮಣ್ಣ ಹಾಗೂ ಭಾವನಾ ಬೆಳಗೆರೆ ಸ್ನೇಹ ಬೆಳೆದ ಬಗ್ಗೆ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ. ಇನ್ನು ಮಗಳಿಗೆ ರುಕ್ಮಿಣಿ ಅನ್ನೋ ಹೆಸರು ಇಡುತ್ತಿದ್ದಾರಂತೆ ಭಾವನಾ ಈ ಬಗ್ಗೆಯೂ ಹೇಳಿ ಕೊಂಡಿದ್ದಾರಂತೆ.



# ಭಾನುಪ್ರಿಯಾಗೆ ಮರೆವಿನ ಕಾಯಿಲೆ



ರಜನಿಕಾಂತ್, ಮೋಹನ್‌ಲಾಲ್, ರವಿಚಂದ್ರನ್ ಜೊತೆ ನಟಿಸಿದ್ದ ಖ್ಯಾತ ನಟಿ ಭಾನುಪ್ರಿಯಾ ಮರೆವಿನ ಕಾಯಿಲೆಯಿಂದ ಬಳಲುತ್ತಿದ್ದಾರೆ. 58ನೇ ವಯಸ್ಸಿನಲ್ಲಿ ಈ ಆರೋಗ್ಯ ಸಮಸ್ಯೆ ಅವರನ್ನು ಕಾಡುತ್ತಿದೆ. ಪತಿಯ ನಿಧನದ ಬಳಿಕ ಅವರ ಬದುಕು ಬದಲಾಗಿತ್ತು. ಸಂಭಾಷಣೆ ನೆನಪಿಟ್ಟುಕೊಳ್ಳಲು ಕಷ್ಟಪಡುತ್ತಿದ್ದು, ಇದು ಅವರ ವೃತ್ತಿಜೀವನಕ್ಕೂ ಸವಾಲಾಗಿದೆ. ರಜನಿಕಾಂತ್, ಮೋಹನ್‌ಲಾಲ್, ರವಿಚಂದ್ರನ್ ಮೊದಲಾದ ಕಲಾವಿದರ ಜೊತೆ ನಟಿಸಿದ ಭಾನುಪ್ರಿಯಾ ಅವರಿಗೆ ಈಗ 58 ವರ್ಷ ವಯಸ್ಸು. ಅವರಿಗೆ ಈ ವಯಸ್ಸಿನಲ್ಲಿ ಮರೆವಿನ ಕಾಯಿಲೆ ಶುರುವಾಗಿದೆ. ಇದರಿಂದ ಅವರು ಸಾಕಷ್ಟು ತೊಂದರೆ ಉಂಟಾಗುತ್ತಿದೆ. ಈ ನಟಿ ತನ್ನ ಸಹೋದರರ ಜೊತೆ ಚೆನ್ನೈನಲ್ಲಿ ವಾಸವಾಗಿದ್ದಾರೆ. 2018ರಲ್ಲಿ ಅವರ ಪತಿ ನಿಧನ ಹೊಂದಿದ್ದರು. ಇದಾದ ಬಳಿಕ ಅವರ ಬದುಕು ಬದಲಾಯಿತು. ಆದರ್ಶ್ ಕೌಶಲ್ ಅವರನ್ನು 1998ರಲ್ಲಿ ಭಾನುಪ್ರಿಯಾ ವಿವಾಹ ಆದರು. ಮದುವೆ ಬಳಿಕವೂ ಇವರು ಸಿನಿಮಾಗಳಲ್ಲಿ ನಟಿಸೋದನ್ನು ಮುಂದುವರಿಸಿದರು. 2018ರಲ್ಲಿ ಭಾನುಪ್ರಿಯಾ ಬಾಳಲ್ಲಿ ಒಂದು ದುರ್ಘಟನೆ ನಡೆಯಿತು. ಅವರು ಪತಿಯನ್ನು ಕಳೆದುಕೊಂಡರು.

ಹೃದಯಘಾತದಿಂದ ಆದರ್ಶ್ ಮೃತಪಟ್ಟರು. ಆ ಬಳಿಕ ಅವರ ಜೀವನ ಬದಲಾಯಿತು. 'ನಾನು ಮಾಡಬೇಕಾದ ಕೆಲಸಗಳನ್ನು ನೆನಪಿಟ್ಟುಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ. ಶೂಟಿಂಗ್ ವೇಳೆ ನಾನು ಹೇಳಬೇಕಾದ ಡೈಲಾಗ್‌ನ ಮರೆಯುತ್ತಿದ್ದೆ. ಇದು ಸುಮಾರು ಎರಡು ವರ್ಷಗಳಿಂದ ನಡೆಯುತ್ತಿದೆ' ಎಂದು ಈ ಮೊದಲು ಭಾನುಪ್ರಿಯಾ ಹೇಳಿದ್ದರು. 'ನನ್ನ ಗಂಡ ಮತ್ತು ನಾನು ವಿಚ್ಛೇದನ ಪಡೆದಿರಲಿಲ್ಲ. ಇದರ ಬಗ್ಗೆ ಹಲವಾರು ವದಂತಿಗಳಿವೆ. ಆದರೆ ಆ ವ್ಯಕ್ತಿ ಈಗ ಇಲ್ಲ.

ಅದರ ಬಗ್ಗೆ ಈಗ ಮಾತನಾಡಲು ಬಯಸುವುದಿಲ್ಲ' ಎಂದಿದ್ದರು ಅವರು. 'ಇತ್ತೀಚಿನ ದಿನಗಳಲ್ಲಿ ನನಗೆ ಆರೋಗ್ಯ ಸರಿ ಇಲ್ಲ. ನನಗೆ ನೆನಪು ಮರೆಯುತ್ತಿದೆ. ನಾನು ಕಲಿತ ವಿಷಯಗಳನ್ನು ನಾನು ಮರೆಯುತ್ತಿದ್ದೇನೆ. ನನಗೆ ಈಗ ನೃತ್ಯದಲ್ಲಿ ಆಸಕ್ತಿ ಇಲ್ಲ. ನಾನು ಮನೆಯಲ್ಲಿಯೂ ನೃತ್ಯವನ್ನು ಅಭ್ಯಾಸ ಮಾಡುವುದಿಲ್ಲ' ಎಂದಿದ್ದರು. ಅವರು ಕೂಚಿಪುಡಿ ನೃತ್ಯ ಕಲಿತಿದ್ದಾರೆ.

# ಹುಟ್ಟುಹಬ್ಬದ ಸಂಭ್ರಮದಲ್ಲಿ ಮೋಹಕತಾರೆ ರಮ್ಯಾ

ಸ್ಯಾಂಡಲ್‌ವುಡ್‌ನ ಮೋಹಕತಾರೆ ನಟಿ ರಮ್ಯಾ ಅವರಿಗೆ ಹುಟ್ಟುಹಬ್ಬದ ಸಂಭ್ರಮ. 43ನೇ ವಸಂತಕ್ಕೆ ಕಾಲಿಟ್ಟಿದ್ದಾರೆ ನಟಿ ರಮ್ಯಾ. ಸದ್ಯ ರಮ್ಯಾ ಸ್ಯಾಂಡಲ್‌ವುಡ್‌ಗೆ ಕಮ್‌ಬ್ಯಾಕ್ ಮಾಡಲು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕಾಗಿ ಸಾಕಷ್ಟು ಒಳ್ಳೆಯ ಸ್ಕ್ರಿಪ್ಟ್ ಕೇಳಿದ್ದಾರಂತೆ. ಅದರಲ್ಲಿ ಒಂದು ಐತಿಹಾಸಿಕ ಸಿನಿಮಾದ ಸ್ಕ್ರಿಪ್ಟ್ ಓಕೆ ಮಾಡಿದ್ದಾರೆ ಎನ್ನಲಾಗ್ತಿದೆ. ಅಭಿ ಸಿನಿಮಾ ಮೂಲಕ ಅಪ್ಪು ಜೊತೆ ತೆರೆಹಂಚಿಕೊಳ್ಳುವ ಮೂಲಕ ಸ್ಯಾಂಡಲ್‌ವುಡ್‌ಗೆ ಪಾದಾರ್ಪಣೆ ಮಾಡಿದರು. ನಟಿ ರಮ್ಯಾ ಕನ್ನಡ, ತೆಲುಗು ಹಾಗೂ ತಮಿಳು ಸಿನಿಮಾಗಳಲ್ಲಿ ನಟಿಸಿ ದಕ್ಷಿಣದ ಭಾರದಲ್ಲಿ ಖ್ಯಾತಿ ಪಡೆದಿದ್ದಾರೆ. ಜೊತೆಗೆ ಸಂಸದೆಯಾಗಿ ರಾಜಕೀಯ ರಂಗದಲ್ಲೂ ಸೇವೆ ಸಲ್ಲಿಸಿದ್ದಾರೆ ನಟಿ ರಮ್ಯಾ. 2021ರಲ್ಲಿ ತೆರೆಕಂಡ ನಾಗರಹಾವು ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು.

ಬಳಿಕ ಸಿನಿಮಾ ರಂಗದಿಂದ ಅಂತರ ಕಾಯ್ದುಕೊಂಡಿದ್ದ ನಟಿ ರಮ್ಯಾ 2023ರಲ್ಲಿ ಬಿಡುಗಡೆಯಾದ ಹಾಸ್ಟೆಲ್ ಹುಡುಗರು ಸಿನಿಮಾ ಮೂಲಕ ಗೆಸ್ಟ್ ಅಪಿಯರೆನ್ಸ್ ಮೂಲಕ ಕಮ್‌ಬ್ಯಾಕ್ ಮಾಡಿದ್ರು. ನಟಿ ರಮ್ಯಾ ಸಿನಿಮಾ ನಿರ್ಮಾಣ ಮಾಡಲು ಕೂಡಾ ತಯಾರಿಯನ್ನ ಮಾಡಿಕೊಂಡಿದ್ದಾರೆ. ಅದರ ಜೊತೆ ಜೊತೆಗೆ ಸಿನಿಮಾದ ಸ್ಕ್ರಿಪ್ಟ್ ಆಯ್ಕೆಯಲ್ಲಿ ಬ್ಯುಸಿಯಾಗಿದ್ದಾರೆ. ಇತ್ತೀಚೆಗೆ ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರು ನಟಿ ರಮ್ಯಾ ಅವರಿಗೆ ಕಥೆಯನ್ನ ರೆಡಿ ಮಾಡಿದ್ದೇನೆ ಎಂದು ಹೇಳಿದ್ದರು. ಅಲ್ಲದೇ ನಟಿ ರಮ್ಯಾ ಕೂಡಾ ಒಂದು ಕಥೆಯನ್ನ ಆಯ್ಕೆ ಮಾಡಿರುವುದಾಗಿ ಹೇಳಿಕೊಂಡಿದ್ದರು. ಸದ್ಯದಲ್ಲಿಯೇ ರಮ್ಯಾ ಸ್ಯಾಂಡಲ್‌ವುಡ್‌ಗೆ ಪಾದಾರ್ಪಣೆ ಮಾಡಲಿದ್ದಾರೆ.

# ಕನ್ನಡ ಚಿತ್ರರಂಗ ಈಗ ಮೇಲಕ್ಕೇರುತ್ತಿದೆ



ಆಸ್ಕರ್ ವಿಜೇತ ಎಆರ್ ರೆಹಮಾನ್ ಕನ್ನಡ ಚಿತ್ರರಂಗವನ್ನು ಹಾಡಿ ಹೊಗಳಿದ್ದಾರೆ. ಸ್ಯಾಂಡಲ್ ವುಡ್ ಪ್ರಗತಿಯಲ್ಲಿದ್ದು, ಉನ್ನತ ಹಂತಕ್ಕೆ ಏರುತ್ತಿದೆ ಎಂದಿದ್ದಾರೆ. ಕೆಜಿಎಫ್, ಕಾಂತಾರ ಚಿತ್ರಗಳಂತಹ ಜಾಗತಿಕ ಯಶಸ್ಸು ಕನ್ನಡ ಸಿನಿಮಾಗಳ ಸಾಮರ್ಥ್ಯವನ್ನು ಸಾಬೀತುಪಡಿಸಿದೆ. ರೆಹಮಾನ್ ಅವರ ಮಾತುಗಳು ಕನ್ನಡ ಚಿತ್ರರಂಗದ ಪ್ರಸ್ತುತ ಬೆಳವಣಿಗೆ ಮತ್ತು ಪರಭಾಷಾ ವಲಯದಲ್ಲಿ ಅದರ ಹೆಚ್ಚಿದ ಮನ್ನಣೆಯನ್ನು ಎತ್ತಿ ಹಿಡಿಯುತ್ತವೆ. ಎಆರ್ ರೆಹಮಾನ್ ಅವರು ಭಾರತ ಚಿತ್ರರಂಗದ ಬೇಡಿಕೆಯ ಮ್ಯೂಸಿಕ್ ಕಂಪೋಸರ್. ಅವರು ಹಲವು ಸೂಪರ್ ಹಿಟ್ ಹಾಡುಗಳನ್ನು ಸಂಯೋಜನೆ ಮಾಡಿದ್ದಾರೆ. ಅವರಿಗೆ ಆಸ್ಕರ್ ಕೂಡ ಸಿಕ್ಕಿದೆ. ಇದು ಅವರು ಮಾಡಿದ ವಿಶೇಷ ಸಾಧನೆಗಳಲ್ಲಿ ಒಂದು. ಅವರು ಕನ್ನಡ ಚಿತ್ರರಂಗದ ಬಗ್ಗೆ ಆಡಿದ ಮಾತು ಈಗ ವೈರಲ್ ಆಗುತ್ತಿದೆ. ಅವರು ಕನ್ನಡ ಚಿತ್ರರಂಗವನ್ನು ಹಾಡಿ ಹೊಗಳಿದ್ದಾರೆ. ರೆಹಮಾನ್ ಅವರು ತಮಿಳು, ತೆಲುಗು ಹಾಗೂ ಹಿಂದಿ ಸಿನಿಮಾಗಳಿಗೆ ಹೆಚ್ಚಾಗಿ ಮ್ಯೂಸಿಕ್ ಕಂಪೋಸ್ ಮಾಡಿದ್ದಾರೆ. ಹಾಲಿವುಡ್‌ನಲ್ಲೂ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅವರು ಬೇರೆ ಭಾಷೆಯ ಸಿನಿಮಾಗಳ ಹಾಡನ್ನು ಕನ್ನಡದಲ್ಲಿ ಮರು ಬಳಕೆ ಮಾಡಿಕೊಳ್ಳಲಾಗಿದೆ. ವಿನೋದ್ ರಾಜ್ ಅವರ 'ಡ್ಯಾನ್ಸ್ ರಾಜ ಡ್ಯಾನ್ಸ್' ಸಿನಿಮಾಗೆ ವಿಜಯ್ ಭಾಸ್ಕರ್ ಸಂಗೀತ ಸಂಯೋಜನೆ ಮಾಡಿದ್ದರು. ರೆಹಮಾನ್ ಅವರು ಕೀಬೋರ್ಡ್‌ನಲ್ಲಿ ಸಹಾಯ ಮಾಡಿದ್ದರು. ರೆಹಮಾನ್ ಅವರಿಗೆ ಮೊದಲಿನಿಂದಲೂ ಕನ್ನಡ ಚಿತ್ರರಂಗದ ಪರಿಚಯ ಇದೆ. ಹೀಗಾಗಿ, ಅವರು ಚಿತ್ರರಂಗವನ್ನು ಗಮನಿಸುತ್ತಿದ್ದಾರೆ. 'ಕನ್ನಡ ಚಿತ್ರರಂಗ ರಾಕಿಂಗ್ ಹಂತದಲ್ಲಿದೆ. ಮೇಲಕ್ಕೆ ಏರುತ್ತಿದೆ' ಎಂದು ರೆಹಮಾನ್ ಅವರು ಹಾಡಿ ಹೊಗಳಿದ್ದಾರೆ. ಇದು ಅವರು ಯಾವಾಗ ಹೇಳಿದ್ದು ಎಂಬುದರ ಬಗ್ಗೆ ಸ್ಪಷ್ಟನೆ ಇಲ್ಲ. ರೆಹಮಾನ್ ಕೈಯಲ್ಲಿ 12ಕ್ಕೂ ಅಧಿಕ ಸಿನಿಮಾಗಳಿವೆ. ಈ ಪೈಕಿ 'ಪೆದ್ದಿ' ಮುಖ್ಯವಾದುದು. ರಾಮ್ ಚರಣ್-ಜಾನ್ವಿ ಕಪೂರ್ ಮುಖ್ಯ ಭೂಮಿಕೆಯಲ್ಲಿದ್ದಾರೆ. ಇತ್ತೀಚೆಗೆ ರಿಲೀಸ್ ಆದ 'ಚಿಕಿರಿ.. ಚಿಕಿರಿ' ಹಾಡು ಸಾಕಷ್ಟು ಗಮನ ಸೆಳೆದಿದೆ. ಹಿಂದಿಯ 'ರಾಮಾಯಣ' ಚಿತ್ರಕ್ಕೂ ಅವರದ್ದೇ ಸಂಗೀತ ಸಂಯೋಜನೆ ಇದೆ. ಇದರಲ್ಲಿ ಯಶ್ ನಟಿಸಿದ್ದಾರೆ. ಅವರು ಹಿಂದಿ ಚಿತ್ರರಂಗದಲ್ಲಿ ಹೆಚ್ಚು ಆಕ್ಟೀವ್ ಆಗಿದ್ದಾರೆ. ಕನ್ನಡದ 'ಕೆಜಿಎಫ್', 'ಕೆಜಿಎಫ್ 2', '777 ಚಾರ್ಲಿ', 'ಕಾಂತಾರ', 'ಸು ಫ್ರಮ್ ಸೋ' ಸೇರಿದಂತೆ ಅನೇಕ ಸಿನಿಮಾಗಳು ಪರಭಾಷೆಯವರನ್ನು ಆಕರ್ಷಿಸಿದೆ.

# ಭಾಷೆ ಮಾತನಾಡಲು ಒತ್ತಾಯಿಸಿ, ಹಿಂಸಿಸೋದು ತಪ್ಪು

**ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ಬೆಂಬಲ**



ಮುಂಬೈನಲ್ಲಿ ಮರಾಠಿ ಭಾಷೆ ಕುರಿತು ನಡೆಯುತ್ತಿರುವ ವಿವಾದ ಮತ್ತು ಹಿಂಸಾಚಾರದ ಬಗ್ಗೆ ನಟ ಸುನಿಲ್ ಶೆಟ್ಟಿ ಮಾತನಾಡಿದ್ದಾರೆ. ಭಾಷೆ ಕಲಿಯಲು ಬಲವಂತ ಅಥವಾ ಹಿಂಸೆ ತಪ್ಪು ಎಂದ ಅವರು, ಮುಂಬೈನಲ್ಲಿ ವಾಸಿಸುವವರು ಮರಾಠಿ ಭಾಷೆಯನ್ನು ಗೌರವದಿಂದ ಕಲಿಯುವುದು ಮುಖ್ಯ ಎಂದಿದ್ದಾರೆ. ಅವರ ಈ ನೇರ ನಿಲುವಿಗೆ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ಕಳೆದ ಕೆಲವು ದಿನಗಳಿಂದ ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ಮರಾಠಿ ಮತ್ತು ವಲಸಿಗರ ನಡುವೆ ಮರಾಠಿ ಭಾಷೆಯ ಕುರಿತು ದೊಡ್ಡ ಚರ್ಚೆ ನಡೆಯುತ್ತಿದೆ. ಆಗಾಗ್ಗೆ ಭಾಷೆಯ ಕುರಿತಾದ ಚರ್ಚೆ ಹಿಂಸಾಚಾರದ ಹಂತವನ್ನು ತಲುಪಿದೆ. ಬಾಲಿವುಡ್ ಹಿರಿಯ ನಟ ಸುನಿಲ್ ಶೆಟ್ಟಿ ಈ ಘಟನೆ ಮತ್ತು ಅದರಿಂದ ಹುಟ್ಟಿಕೊಂಡ ರಾಜಕೀಯದ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಭಾಷಾ ನಿಯಂತ್ರಣಕ್ಕಾಗಿ ಹಿಂಸೆ ತಪ್ಪು ಎಂದು ಅವರು ಹೇಳಿದ್ದಾರೆ. ನಟ ಸುನಿಲ್ ಶೆಟ್ಟಿ ತಮ್ಮ ನೇರ ಹೇಳಿಕೆಗಳಿಗೆ ಹೆಸರುವಾಸಿಯಾಗಿದ್ದಾರೆ. ಅವರು ಇತ್ತೀಚೆಗೆ ಸುದ್ದಿ ವಾಹಿನಿಯೊಂದಕ್ಕೆ ಸಂದರ್ಶನ ನೀಡಿದರು. ಈ ಸಂದರ್ಶನದಲ್ಲಿ, ಮರಾಠಿ ಭಾಷೆಯ ಮೇಲಿನ ಪ್ರಸ್ತುತ ರಾಜಕೀಯ ಮತ್ತು ಅದರಿಂದಾಗುತ್ತಿರುವ ಹಿಂಸಾಚಾರದ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ನೇರವಾಗಿ ಉತ್ತರಿಸಿದರು. 'ಮರಾಠಿ ಭಾಷೆಯ ಮೇಲೆ ರಾಜಕೀಯ ಮಾಡುವುದು ಮತ್ತು ಅದನ್ನು ಮಾತನಾಡುವಂತೆ ಒತ್ತಾಯಿಸಲು ಹಿಂಸಾಚಾರ ಮಾಡೋದು ಸಂಪೂರ್ಣವಾಗಿ ತಪ್ಪು. ಬಡ ವ್ಯಕ್ತಿಯನ್ನು ಹೊಡೆಯುವುದರಿಂದ ಏನನ್ನೂ ಸಾಧಿಸಲಾಗುವುದಿಲ್ಲ' ಎಂದು ಸುನಿಲ್ ಶೆಟ್ಟಿ ಹೇಳಿದರು.

'ನಾನು ಮುಂಬೈನವನು. ಈ ನಗರ ನನಗೆ ಹೆಸರು, ಯಶಸ್ಸು, ಪ್ರತಿಷ್ಠೆ, ಎಲ್ಲವನ್ನೂ ನೀಡಿದೆ. ಅದಕ್ಕಾಗಿಯೇ ನಾನು ನನ್ನ ಹೃದಯದಿಂದ ಹೇಳುತ್ತೇನೆ, ನೀವು ಮುಂಬೈನಲ್ಲಿ ವಾಸಿಸಲು ಬಯಸಿದರೆ, ಮರಾಠಿ ಮಾತನಾಡುವುದು ಮತ್ತು ಕಲಿಯುವುದು ಬಹಳ ಮುಖ್ಯ. ನೀವು ವಾಸಿಸುವ ಸ್ಥಳದ ಭಾಷೆಯನ್ನು ಮಾತನಾಡಿದರೆ, ಆ ಸ್ಥಳದ ಜನರ ಪ್ರೀತಿ ಮತ್ತು ಗೌರವ ಹತ್ತು ಪಟ್ಟು ಹೆಚ್ಚಾಗುತ್ತದೆ. ನಾನು ಯಾವಾಗಲೂ ನನ್ನ ಮನೆಯಲ್ಲಿ ನನ್ನ ಸಿಬ್ಬಂದಿಗೆ ಮರಾಠಿ ಮಾತನಾಡುತ್ತೇನೆ.

# ಭಾರತ V/S ದ. ಆಫ್ರಿಕಾ ಮೊದಲ ಏಕದಿನ ಪಂದ್ಯ ಶುಭಾರಂಭ



ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೊದಲ ಏಕದಿನ ಪಂದ್ಯ ನವೆಂಬರ್ 30 ರಂದು ನಡೆಯಲಿದೆ. ಭಾರತ ತಂಡವನ್ನು ಕೆ.ಎಲ್. ರಾಹುಲ್ ಮುನ್ನಡೆಸಿದರೆ, ದಕ್ಷಿಣ ಆಫ್ರಿಕಾ ತಂಡವನ್ನು ಟೆಂಬಾ ಬವುಮಾ ಮುನ್ನಡೆಸುತ್ತಿದ್ದಾರೆ. ಈ ಪಂದ್ಯ ಎಲ್ಲಿ, ಎಷ್ಟು ಗಂಟೆಗೆ ನಡೆಯಲಿದೆ, ಲೈವ್ ಸ್ಟ್ರೀಮಿಂಗ್ ಯಾವುದರಲ್ಲಿ ಎಂಬ ಕುರಿತ ಮಾಹಿತಿ ಮಾಹಿತಿ. ದಕ್ಷಿಣ ಆಫ್ರಿಕಾ ವಿರುದ್ಧದ ಟೆಸ್ಟ್ ಸರಣಿಯ ಸೋಲಿಗೆ ಸೇಡು ತೀರಿಸಿಕೊಳ್ಳಲು ಇದೀಗ ಏಕದಿನ ಸರಣಿಯಲ್ಲಿ ಭಾರತ ತಂಡ ಕಣಕ್ಕಿಳಿಯಲು ಸಜ್ಜಾಗಿದೆ. ಟೆಸ್ಟ್ ಸರಣಿಯಲ್ಲಿ ಭಾರತೀಯ ತಂಡದ ಬೌಲರ್‌ಗಳು ಮತ್ತು ಬ್ಯಾಟ್ಸ್‌ಮನ್‌ಗಳು ಉತ್ತಮ ಪ್ರದರ್ಶನ ನೀಡುವಲ್ಲಿ ವಿಫಲರಾಗಿದ್ದರಿಂದ ಸೋಲಿಗೆ ಕಾರಣವಾಯಿತು. ಶುಭ್‌ಮನ್ ಗಿಲ್ ಅಲಭ್ಯತೆಯನ್ನು ಈ ಏಕದಿನ ಸರಣಿಗೆ ಭಾರತ ತಂಡವನ್ನು ಕೆಎಲ್ ರಾಹುಲ್ ಮುನ್ನಡೆಸಲಿದ್ದಾರೆ.

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ಮೊದಲ ಏಕದಿನ ಪಂದ್ಯ ನವೆಂಬರ್ 30 ರಂದು ರಾಂಚಿ ಮೈದಾನದಲ್ಲಿ ನಡೆಯಲಿದೆ. ಪಂದ್ಯವು ಭಾರತೀಯ ಕಾಲಮಾನ ಮಧ್ಯಾಹ್ನ 1:30 ಕ್ಕೆ ಆರಂಭವಾಗಲಿದೆ. ಟಾಸ್ ಅರ್ಧ ಗಂಟೆ ಮುಂಚಿತವಾಗಿ ನಡೆಯಲಿದೆ. ಭಾರತದಲ್ಲಿ, ಪಂದ್ಯವನ್ನು ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರ ಮಾಡಲಾಗುತ್ತದೆ. ಹೆಚ್ಚುವರಿಯಾಗಿ, ಜಿಯೋ ಹಾಟ್‌ಸ್ಟಾರ್ ಅಪ್ಲಿಕೇಶನ್‌ನಲ್ಲಿ ಲೈವ್ ಸ್ಟ್ರೀಮಿಂಗ್ ಲಭ್ಯವಿರುತ್ತದೆ. ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವೆ ಇಲ್ಲಿಯವರೆಗೆ ಒಟ್ಟು 94 ಏಕದಿನ ಪಂದ್ಯಗಳು ನಡೆದಿದ್ದು, ಅವುಗಳಲ್ಲಿ ಭಾರತ 40 ಪಂದ್ಯಗಳಲ್ಲಿ ಗೆದ್ದು 51 ಪಂದ್ಯಗಳಲ್ಲಿ ಸೋತಿದೆ. ಮೂರು ಪಂದ್ಯಗಳು ಫಲಿತಾಂಶವಿಲ್ಲದೆ ಕೊನೆಗೊಂಡಿವೆ. ಮೇಲಿನ ಅಂಕಿಅಂಶಗಳ ಆಧಾರದ ಮೇಲೆ, ಭಾರತದ ವಿರುದ್ಧ ಏಕದಿನ ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಮೇಲುಗೈ ಸಾಧಿಸಿದೆ.

**ಯುವ ಆಟಗಾರರಿಗೆ ಸುವರ್ಣ ಅವಕಾಶ**

ಶುಭ್‌ಮನ್ ಗಿಲ್, ಶ್ರೇಯಸ್ ಅಯ್ಯರ್, ಜಸ್ಪ್ರೀತ್ ಬುಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರಂತಹ ಆಟಗಾರರು ಏಕದಿನ ಸರಣಿಯಲ್ಲಿ ಆಡುತ್ತಿಲ್ಲ. ಇದು ಯುವ ಆಟಗಾರರಿಗೆ ತಮ್ಮ ಮೌಲ್ಯವನ್ನು ಸಾಬೀತುಪಡಿಸಲು ಅವಕಾಶ ನೀಡುತ್ತದೆ. ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ಪ್ರಸಿದ್ಧ್ ಕೃಷ್ಣ ಮತ್ತು ಅರ್ಷದೀಪ್ ಸಿಂಗ್ ಉತ್ತಮ ಪ್ರದರ್ಶನ ನೀಡುವ ಮೂಲಕ ತಂಡದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಸುವರ್ಣಾವಕಾಶವನ್ನು ಹೊಂದಿದ್ದಾರೆ.



# ರೋಹಿತ್ ಜೊತೆ ಓಪನರ್ ಯಾರು, ರಿಷಭ್ ಪಂತ್‌ಗೆ ಚೇಂಚ್ ಸಾಧ್ಯತೆ

ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಿನ ರೋಚಕ ಮೂರು ಪಂದ್ಯಗಳ ಏಕದಿನ ಸರಣಿಯು ನವೆಂಬರ್ 30 ರಂದು ಪ್ರಾರಂಭವಾಗಲಿದೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಮತ್ತೊಮ್ಮೆ ಏಕದಿನ ಸರಣಿಯಲ್ಲಿ ಭಾರತ ಪರ ಆಡುವುದನ್ನು ಕಾಣಬಹುದು. ಹಾಗಾದರೆ ಮೊದಲ ಏಕದಿನ ಪಂದ್ಯದಲ್ಲಿ ಭಾರತ ಪರ ಯಾರೆಲ್ಲ ಆಡಬಹುದು. ಎರಡು ಪಂದ್ಯಗಳ ಟೆಸ್ಟ್ ಸರಣಿಯ ನಂತರ, ಭಾರತ ಮತ್ತು ದಕ್ಷಿಣ ಆಫ್ರಿಕಾ ಈಗ ನವೆಂಬರ್ 30 ರಿಂದ ಪ್ರಾರಂಭವಾಗುವ ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ ಪರಸ್ಪರ ಮುಖಾಮುಖಿಯಾಗಲಿವೆ. ಮೊದಲ ಏಕದಿನ ಪಂದ್ಯ, ರಾಂಚಿಯಲ್ಲಿ ನಡೆಯಲಿದೆ. ದಕ್ಷಿಣ ಆಫ್ರಿಕಾ ಟೆಸ್ಟ್ ಸರಣಿಯಲ್ಲಿ ಭಾರತವನ್ನು ವೈಟ್‌ವಾಶ್ ಮಾಡಿತು. ಆದ್ದರಿಂದ, ಟೀಮ್ ಇಂಡಿಯಾ ಏಕದಿನ ಸರಣಿಯಲ್ಲಿ ಮತ್ತೆ ಪುಟಿದೇಳಲು ನೋಡುತ್ತಿದೆ. ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಮತ್ತೊಮ್ಮೆ ಏಕದಿನ ಸರಣಿಯಲ್ಲಿ ಭಾರತ ಪರ ಆಡುವುದನ್ನು ಕಾಣಬಹುದು. ಹಾಗಾದರೆ ಮೊದಲ ಏಕದಿನ ಪಂದ್ಯದಲ್ಲಿ ಭಾರತ ಪರ ಯಾರೆಲ್ಲ ಆಡಬಹುದು.

ಗಿಲ್ ಗಾಯಗೊಂಡಿದ್ದಾರೆ. ಪರಿಣಾಮವಾಗಿ, ರೋಹಿತ್ ಶರ್ಮಾ ಜೊತೆಗೆ ಯಾರು ಆರಂಭಿಕರಾಗಿ ಆಡಲಿದ್ದಾರೆ ಎಂಬುದು ಕುತೂಹಲ.



**ಆರಂಭಿಕ ಸ್ಥಾನಕ್ಕೆ ಮೂರು ಆಯ್ಕೆ ಇದೆ:** ಯಶಸ್ವಿ ಜೈಸ್ವಾಲ್, ರುತುರಾಜ್ ಗಾಯಕ್ವಾಡ್ ಮತ್ತು ಕೆಎಲ್ ರಾಹುಲ್.

ಆದಾಗ್ಯೂ, ಜೈಸ್ವಾಲ್ ಇನ್ನಿಂಗ್ಸ್ ಆರಂಭಿಸುವ ಸಾಧ್ಯತೆ ಹೆಚ್ಚಿದೆ. ಮತ್ತೊಂದೆಡೆ ಕೆಎಲ್ ರಾಹುಲ್ ಬಹಳ ಸಮಯದಿಂದ ಏಕದಿನ ಪಂದ್ಯಗಳಲ್ಲಿ ಭಾರತ ತಂಡದ ಪರ ವಿಕೆಟ್ ಕೀಪರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪಂತ್ ಕೆಲವು ಸಮಯದಿಂದ ಏಕದಿನ ಪಂದ್ಯಗಳನ್ನು ಆಡುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಪಂತ್ ಬದಲಿಗೆ ಕೆಎಲ್ ವಿಕೆಟ್ ಕೀಪಿಂಗ್ ಮಾಡುವುದನ್ನು ಕಾಣಬಹುದು ಮತ್ತು ತಿಲಕ್ ವರ್ಮಾ ಕೂಡ ಪಂತ್ ಬದಲಿಗೆ ಅಗ್ರ ಕ್ರಮಾಂಕದಲ್ಲಿ ಕಣಕ್ಕಿಳಿಯಬಹುದು.

# ಆಯುಷ್ ಆರ್ಭಟಕ್ಕೆ ರೋಹಿತ್ ವಿಶ್ವದಾಖಲೆ ಧ್ವಂಸ

**ಸೋಲಿಗೆ ಅಸಲಿ ಕಾರಣ ರಿವೀಲ್..!**



2025-26ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಆಯುಷ್ ಮ್ಹಾತ್ರೆ ವಿದರ್ಭ ವಿರುದ್ಧ ಭರ್ಜರಿ ಶತಕ ಸಿಡಿಸಿ ಇತಿಹಾಸ ನಿರ್ಮಿಸಿದರು. 18 ವರ್ಷದ ಆಯುಷ್, ಟಿ20, ಲಿಸ್ಟ್ ಎ ಮತ್ತು ಪ್ರಥಮ ದರ್ಜೆ ಕ್ರಿಕೆಟ್‌ನ ಮೂರು ಸ್ವರೂಪಗಳಲ್ಲಿ ಶತಕ ಸಿಡಿಸಿದ ವಿಶ್ವದ ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಇದರೊಂದಿಗೆ ರೋಹಿತ್ ಶರ್ಮಾ ಅವರ ದೀರ್ಘಕಾಲದ ದಾಖಲೆಯನ್ನು ಆಯುಷ್ ಮ್ಹಾತ್ರೆ ಮುರಿದು ತಮ್ಮ ಹೆಸರಿಗೆ ಬರೆದುಕೊಂಡರು. 2025-26ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಮುಂಬೈ ಪರ ಆಡುತ್ತಿರುವ ಯುವ ಬ್ಯಾಟ್ಸ್‌ಮನ್ ಆಯುಷ್ ಮ್ಹಾತ್ರೆ ವಿದರ್ಭ ವಿರುದ್ಧದ ಪಂದ್ಯದಲ್ಲಿ ಐತಿಹಾಸಿಕ ಇನ್ನಿಂಗ್ಸ್ ಆಡಿದರು. ವಿದರ್ಭ ವಿರುದ್ಧ ಅಬ್ಬರದ ಶತಕ ಸಿಡಿಸಿದ ಆಯುಷ್, ಭಾರತದ ಮಾಜಿ ನಾಯಕ ರೋಹಿತ್ ಶರ್ಮಾ ಅವರ ವಿಶ್ವದಾಖಲೆಯನ್ನು ಮುರಿದಿದ್ದಾರೆ. ವಿದರ್ಭ ನೀಡಿದ 193 ರನ್‌ಗಳ ಗುರಿಯನ್ನು ಬೆನ್ನಟ್ಟಿದ ಮುಂಬೈ ಪರ ಆಯುಷ್ ಮ್ಹಾತ್ರೆ ಕೇವಲ 53 ಎಸೆತಗಳಲ್ಲಿ ಅಜೇಯ 110 ರನ್ ಗಳಿಸಿದರು. ಅವರ ಇನ್ನಿಂಗ್ಸ್‌ನಲ್ಲಿ ಎಂಟು ಬೌಂಡರಿ ಮತ್ತು ಎಂಟು ಸಿಕ್ಸರ್‌ಗಳು ಸೇರಿದ್ದವು. ಇದು ಟಿ20 ಸ್ವರೂಪದಲ್ಲಿ ಆಯುಷ್ ಅವರ ಮೊದಲ ಶತಕವಾಗಿತ್ತು. ಆಯುಷ್ ಟಿ20 ಸ್ವರೂಪದ ಜೊತೆಗೆ ಈ ಹಿಂದೆ ಲಿಸ್ಟ್ ಎ ಮತ್ತು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿಯೂ ಶತಕ ಬಾರಿಸಿದ್ದಾರೆ. ಇದರೊಂದಿಗೆ ಆಯುಷ್ ಮ್ಹಾತ್ರೆ ಕ್ರಿಕೆಟ್‌ನ ಮೂರು ಸ್ವರೂಪಗಳಲ್ಲಿ (ಪ್ರಥಮ ದರ್ಜೆ, ಲಿಸ್ಟ್ ಎ ಮತ್ತು ಟಿ 20) ಶತಕ ಸಿಡಿಸಿದ ವಿಶ್ವದ ಅತ್ಯಂತ ಕಿರಿಯ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಆಯುಷ್ 18 ವರ್ಷ ಮತ್ತು 135 ದಿನಗಳಲ್ಲಿ ಈ ಸಾಧನೆ ಮಾಡಿದ್ದು, ರೋಹಿತ್ ಶರ್ಮಾ ಹೆಸರಿನಲ್ಲಿದ್ದ ದಾಖಲೆಯನ್ನು ತನ್ನ ಖಾತೆಗೆ ಹಾಕಿಕೊಂಡಿದ್ದಾರೆ. ವಾಸ್ತವವಾಗಿ ರೋಹಿತ್ ಶರ್ಮಾ 19 ವರ್ಷ 339 ದಿನಗಳಲ್ಲಿ ಕ್ರಿಕೆಟ್‌ನ ಮೂರು ಸ್ವರೂಪಗಳಲ್ಲಿ ಶತಕ ಬಾರಿಸಿ ಈ ದಾಖಲೆ ಕೊರಳೊಡ್ಡಿದ್ದರು. ಇದೀಗ ಆ ದಾಖಲೆ ಆಯುಷ್ ಪಾಲಾಗಿದೆ. ಇನ್ನು 20ನೇ ವಯಸ್ಸಿನಲ್ಲಿ ಈ ಸಾಧನೆ ಮಾಡಿದ್ದ ಭಾರತದ ಮಾಜಿ ಆಟಗಾರ ಉನ್ಮುಕ್ತ್ ಚಂದ್ ಈ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಕ್ವಿಂಟನ್ ಡಿ ಕಾಕ್ ಕೂಡ 20 ವರ್ಷ 62 ದಿನಗಳಲ್ಲಿ ಈ ಸಾಧನೆ ಮಾಡಿದ್ದರು. ತಮ್ಮ ಅಲ್ಪಾವಧಿಯ ವೃತ್ತಿಜೀವನದಲ್ಲಿ, ಆಯುಷ್ ಮ್ಹಾತ್ರೆ 13 ಪ್ರಥಮ ದರ್ಜೆ ಪಂದ್ಯಗಳು, 7 ಲಿಸ್ಟ್ ಎ ಪಂದ್ಯಗಳು ಮತ್ತು 9 ಟಿ20 ಪಂದ್ಯಗಳನ್ನು ಆಡಿದ್ದಾರೆ. ಈ ಅವಧಿಯಲ್ಲಿ ಅವರು ಒಟ್ಟು 5 ಶತಕಗಳನ್ನು ಸಿಡಿಸಿದ್ದಾರೆ.

# ಮೊದಲ ಪಂದ್ಯದಲ್ಲೇ ಆರ್‌ಸಿಬಿ ಕಣಕ್ಕೆ



2026ರ ಮಹಿಳಾ ಪ್ರೀಮಿಯರ್ ಲೀಗ್‌ನ ಸಂಪೂರ್ಣ ವೇಳಾಪಟ್ಟಿ ಬಿಡುಗಡೆಯಾಗಿದೆ. 28 ದಿನಗಳಲ್ಲಿ ಒಟ್ಟು 22 ಪಂದ್ಯಗಳು ನವಿ ಮುಂಬೈ ಮತ್ತು ವಡೋದರಾದಲ್ಲಿ ನಡೆಯಲಿವೆ. ಅಚ್ಚರಿ ಎಂದರೆ, ಎಲಿಮಿನೇಟರ್ ಮತ್ತು ಫೈನಲ್ ಪಂದ್ಯಗಳು ವಾರದ ಮಧ್ಯದಲ್ಲಿ ನಡೆಯಲಿವೆ.

ಫೆಬ್ರವರಿ 5ರಂದು ಫೈನಲ್ ನಡೆಯಲಿದ್ದು, ಕ್ರಿಕೆಟ್ ಅಭಿಮಾನಿಗಳಿಗೆ ಇದು ಹೊಸ ಅನುಭವ ನೀಡಲಿದೆ. 2026 ಮಹಿಳಾ ಪ್ರೀಮಿಯರ್ ಲೀಗ್‌ನ ಮೆಗಾ ಹರಾಜು ಮುಕ್ತಾಯಗೊಂಡ ಎರಡು ದಿನಗಳ ಬಳಿಕ ಬಿಸಿಸಿಐ ಇದೀಗ ಈ ಪಂದ್ಯಾವಳಿಯ ಸಂಪೂರ್ಣ ವೇಳಾಪಟ್ಟಿಯನ್ನು ಪ್ರಕಟಿಸಿದೆ. ಈ ಪಂದ್ಯಾವಳಿಯ ವೇಳಾಪಟ್ಟಿಯ ಆಶ್ಚರ್ಯಕರ ಸಂಗತಿಯೆಂದರೆ ಈ ಲೀಗ್‌ನ ಫೈನಲ್ ಪಂದ್ಯವನ್ನು ವಾರಾಂತ್ಯದಲ್ಲಿ ನಡೆಸುವ ಬದಲು ಅಂದರೆ ಶನಿವಾರ ಅಥವಾ ಭಾನುವಾರದಂದು ನಡೆಸುವ ಬದಲು ವಾರದ ಮಧ್ಯ ನಡೆಸಲು ಬಿಸಿಸಿಐ ತೀರ್ಮಾನಿಸಿದೆ. ಬಿಸಿಸಿಐ ಬಿಡುಗಡೆ ಮಾಡಿದ ವೇಳಾಪಟ್ಟಿಯ ಪ್ರಕಾರ, ಪಂದ್ಯಾವಳಿಯ ಎಲಿಮಿನೇಟರ್ ಮತ್ತು ಫೈನಲ್ ಪಂದ್ಯವನ್ನು ವಾರದ ದಿನಗಳಲ್ಲಿ ನಡೆಸಲಾಗುತ್ತದೆ. ಎಲಿಮಿನೇಟರ್ ಪಂದ್ಯ ಫೆಬ್ರವರಿ 3 ರ ಮಂಗಳವಾರದಂದು ಮತ್ತು ಫೈನಲ್ ಪಂದ್ಯ ಫೆಬ್ರವರಿ 5 ರ ಗುರುವಾರದಂದು ನಡೆಯಲಿದೆ. ಈ ಬಾರಿ, ಪಂದ್ಯಾವಳಿ ನವಿ ಮುಂಬೈ ಮತ್ತು ವಡೋದರಾದಲ್ಲಿ ಮಾತ್ರ ನಡೆಯಲಿದೆ.

**2 ಡಬಲ್ ಹೆಡರ್ ಪಂದ್ಯಗಳು**

28 ದಿನಗಳ ಕಾಲ ನಡೆಯುವ ಡಬ್ಲ್ಯುಪಿಎಲ್ 4ನೇ ಆವೃತ್ತಿಯಲ್ಲಿ ಒಟ್ಟು 22 ಪಂದ್ಯಗಳು ನಡೆಯಲಿವೆ. ಎರಡು ಡಬಲ್ ಹೆಡರ್ ಪಂದ್ಯಗಳನ್ನು ಹೊರತುಪಡಿಸಿ, ಎಲ್ಲಾ ಪಂದ್ಯಗಳು ಸಂಜೆ 7 ಗಂಟೆಗೆ ಪ್ರಾರಂಭವಾಗಲಿವೆ. ನವಿ ಮುಂಬೈನ ಡಿವೈ ಪಾಟೀಲ್ ಕ್ರೀಡಾಂಗಣವು ಪ್ರಾಥಮಿಕ ಸುತ್ತಿನ ಮತ್ತು ಮೊದಲ ಎರಡು ಡಬಲ್ ಹೆಡರ್ ಪಂದ್ಯಗಳನ್ನು ಆಯೋಜಿಸುತ್ತದೆ. ನಂತರ ಪಂದ್ಯಾವಳಿಯ ದ್ವಿತೀಯಾರ್ಧವನ್ನು ವಡೋದರಾದಲ್ಲಿ ಆಡಲಾಗುತ್ತದೆ. ವಡೋದರಾ ಪ್ಲೇಆಫ್ ಮತ್ತು ಫೈನಲ್ ಪಂದ್ಯವನ್ನು ಸಹ ಆಯೋಜಿಸಲಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966